
ಸೋಮವಾರ, ಸೆಪ್ಟೆಂಬರ್ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 272 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ವೇಳಾಪಟ್ಟಿ ವಿದ್ಯಾರ್ಥಿಗಳಿಗೆಷ್ಟು ಮುಖ್ಯ?



ಆಳ-ಅಗಲ
ಆಹಾರ ಸುರಕ್ಷತೆ ಕೇರಳ ನಂ.1

ಮಹಿಷ ಪುಷ್ಪಾರ್ಚನೆಗೆ ಅಡ್ಡಿ: ದಸರೆ ತಡೆಯುವ ಬೆದರಿಕೆ 2

‘ಜಿಡಿಪಿಗೆ ತಕ್ಕಂತೆ ಉದ್ಯೋಗ ಸೃಷ್ಟಿಯಾಗುತ್ತಿಲ್ಲ’ 8

ಚುನಾವಣಾ ಪ್ರಚಾರದ ವೇಳೆ ಅಸ್ವಸ್ಥಗೊಂಡ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ

‘ಮೋದಿ ಇಳಿಸುವವರೆಗೂ ನಾನು ಸಾಯಲ್ಲ’ 2B

ಪ್ಯಾನ್–ಆಧಾರ್ ಜೋಡಣೆ ವಿಳಂಬ ತಂದ ಸಂಕಷ್ಟ; ಬಡವರಿಗೆ ‘ಗ್ಯಾರಂಟಿ’ ಸೌಲಭ್ಯ ಕಡಿತ

ಬಿಪಿಎಲ್ ಕಾರ್ಡ್ ಕಸಿದ ‘ಐ.ಟಿ ಪಟ್ಟಿ’

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಪ್ಯಾನ್ ಕಾರ್ಡ್ ಜೊತೆಗೆ ಆಧಾರ್ ಸಂಖ್ಯೆ ಜೋಡಣೆಯನ್ನು ‘ದಂಡ ಸಹಿತ’ವಾಗಿ ಮಾಡಿದ್ದ ಬಡವರು ಈಗ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರದ ವಿವಿಧ ಸವಲತ್ತು ಮತ್ತು ‘ಗ್ಯಾರಂಟಿ’ ಯೋಜನೆಗಳಿಂದ ವಂಚಿತರಾಗಿ ಕಚೇರಿಗೆ ಅಲೆದಾಡುತ್ತಿದ್ದಾರೆ.

ಪ್ಯಾನ್-ಆಧಾರ್ ಜೋಡಣೆಗೆ ನೀಡಿದ್ದ ಕಾಲಮಿತಿ ಮೀರಿದವರು ಕಟ್ಟಿದ್ದ ₹1 ಸಾವಿರ ದಂಡದ ಮೊತ್ತ ಆದಾಯ ತೆರಿಗೆ ಇಲಾಖೆಗೆ (ಐ.ಟಿ) ಪಾವತಿಯಾಗಿತ್ತು. ಈ ಕಾರಣದಿಂದ ಇವರನ್ನು ‘ಆದಾಯ ತೆರಿಗೆ ಪಾವತಿದಾರರು’ ಎಂಬ ಪಟ್ಟಿಗೆ ಸೇರಿಸಲಾಗಿದೆ. ಇದನ್ನೇ ಆಧಾರವಾಗಿ ಇಟ್ಟುಕೊಂಡ ಆಹಾರ ಇಲಾಖೆ ‘ಬಿಪಿಎಲ್ ಕಾರ್ಡ್’ ರದ್ದುಪಡಿಸಲು ಮುಂದಾಗಿದೆ.

ರಾಜ್ಯದಲ್ಲಿ 1,06,152 ‘ಆದಾಯ ತೆರಿಗೆ ಪಾವತಿದಾರರು’ ಹೊಂದಿರುವ ಅನರ್ಹ ಪಡಿತರ ಚೀಟಿಗಳನ್ನು (ಬಿಪಿಎಲ್/ ಅಂತ್ಯೋದಯ) ರದ್ದುಪಡಿಸಲು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ ಆಯುಕ್ತರು ಆದೇಶಿಸಿದ್ದಾರೆ. ಇದನ್ನು ಆಧರಿಸಿ, ವಿವಿಧ ಜಿಲ್ಲೆಗಳ ಜಂಟಿ ಮತ್ತು ಉಪ ನಿರ್ದೇಶಕರು ಕ್ರಮಕ್ಕೆ ಮುಂದಾಗಿದ್ದಾರೆ. ‘ಈ ಪಟ್ಟಿಯಲ್ಲಿ ಶೇ 50ಕ್ಕೂ ಹೆಚ್ಚು ಬಡವರು ಇದ್ದಾರೆ’ ಎಂದು ಹೇಳಲಾಗಿದೆ.

‘ಐ.ಟಿ ಪಾವತಿದಾರರು’ ಎಂಬ ಕಾರಣದಿಂದ ಬಡ ಮಹಿಳೆಯರಿಗೆ ಸಿಗುತ್ತಿದ್ದ ‘ಗೃಹಲಕ್ಷ್ಮಿ’ ಹಣ ನಿಂತು ಹೋಗಿದೆ. ‘ಅನ್ನಭಾಗ್ಯ’ ಯೋಜನೆಯಡಿ ಅಕ್ಕಿಯೂ ಸಿಗುತ್ತಿಲ್ಲ. ಮನೆ ನಿರ್ಮಾಣಕ್ಕೆ ಸಾಲ ಪಡೆಯಲು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದವರಿಗೂ ‘ಗೃಹಲಕ್ಷ್ಮಿ’ ಹಣ ಬರುತ್ತಿಲ್ಲ.

ನಾನು ತೆರಿಗೆ ಪಾವತಿದಾರನಲ್ಲ. ಆದರೂ ಬಿಪಿಎಲ್ ಕಾರ್ಡ್ ರದ್ದುಪಡಿಸಿದ್ದಾರೆ. ತೆರಿಗೆ ಇಲಾಖೆಯವರು ‘ಎನ್‌ಒಸಿ’ ಕೊಡುತ್ತಿಲ್ಲ. ಹೀಗಾಗಿ ದಿಕ್ಕೇ ತೋಚದಂತಾಗಿದೆ
ನಿರಂಜನ್‌ಕುಮಾರ್
ಮಂಡ್ಯ

ಜಿಲ್ಲೆಯಲ್ಲಿ 5,178 ಪಡಿತರ ಚೀಟಿದಾರರು ‘ತೆರಿಗೆ ಪಾವತಿಸುತ್ತಿದ್ದಾರೆ’ ಎಂಬ ಮಾಹಿತಿ ಬಂದಿದೆ. ಅನರ್ಹ ಪಡಿತರ ಚೀಟಿ ರದ್ದುಪಡಿಸಲು ಕ್ರಮ ಕೈಗೊಂಡಿದ್ದೇವೆ
ಕೃಷ್ಣಕುಮಾರ್, ಉಪನಿರ್ದೇಶಕ, ಆಹಾರ ಇಲಾಖೆ, ಮಂಡ್ಯ



- ರಾಜ್ಯದಲ್ಲಿದ್ದಾರೆ 1,06,152 ‘ಆದಾಯ ತೆರಿಗೆ ಪಾವತಿದಾರರು’
- ಪಟ್ಟಿಯಲ್ಲಿದ್ದಾರೆ ಶೇ 50ಕ್ಕೂ ಹೆಚ್ಚು ಬಡವರು

ಎನ್‌ಒಸಿಗೆ ಬೇಡಿಕೆ

ಬಿಪಿಎಲ್ ಕಾರ್ಡ್‌ನಿಂದ ವಂಚಿತರಾದ ಬಡವರಿಗೆ, ಆದಾಯ ತೆರಿಗೆ ಇಲಾಖೆಯಿಂದ ‘ಎನ್‌ಒಸಿ’ (ನಿರಾಕ್ಷೇಪಣಾ ಪ್ರಮಾಣಪತ್ರ) ತನ್ನಿ ಎಂದು ಆಹಾರ ಇಲಾಖೆಯ ಅಧಿಕಾರಿಗಳು ಸೂಚಿಸುತ್ತಿದ್ದಾರೆ. ಹೀಗಾಗಿ, ಬಡವರು ಐ.ಟಿ ಕಚೇರಿಗೆ ಅರ್ಜಿ ಸಲ್ಲಿಸಿ, ‘ಎನ್‌ಒಸಿ’ ಕೊಡಿ ಎಂದು ಮೊರೆ ಇಡುತ್ತಿದ್ದಾರೆ.



‘ಮಂಡ್ಯದ ಕಚೇರಿಗೆ 150 ಮಂದಿ ಅರ್ಜಿಗಳನ್ನು ಕೊಟ್ಟಿದ್ದಾರೆ. ಆದರೆ, ನಮ್ಮ ಇಲಾಖೆಯಿಂದ ‘ಎನ್‌ಒಸಿ’ ಕೊಡಲು ಅವಕಾಶವಿಲ್ಲ’ ಎನ್ನುತ್ತಾರೆ ಇಲ್ಲಿನ ಐ.ಟಿ ಅಧಿಕಾರಿಗಳು. ಇದರಿಂದ ಪರಿಹಾರ ಸಿಗದೆ ಬಡವರು ಕಂಗಾಲಾಗಿದ್ದಾರೆ.

ಚಿಕಿತ್ಸೆ ಪಡೆಯಲು ತೊಂದರೆ

‘ಬಿಪಿಎಲ್ ಕಾರ್ಡ್ ರದ್ದಾಗಿರುವ ಕಾರಣ ಖಾಸಗಿ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿಲ್ಲ. ಪಡೆದರೆ ಆಸ್ಪತ್ರೆ ವೆಚ್ಚ ಭರಿಸುವಷ್ಟು ಹಣ ನಮ್ಮ ಬಳಿ ಇಲ್ಲ. ಹೀಗಾಗಿ ಬಿಪಿಎಲ್ ಕಾರ್ಡ್ ಮತ್ತೆ ಕೊಡಿಸಿ’ ಎಂದು ಬಡ ಕೆಲ ಮಹಿಳೆಯರು ಅಳಲು ತೋಡಿಕೊಂಡರು.

ತೆರಿಗೆ ಪಾವತಿದಾರರ ಅನರ್ಹ ಪಡಿತರ ಚೀಟಿಗಳ ವಿವರ 5

ಚಿನಕುರುಳಿ

ಪ್ರಕಾಶ್ ಶೆಟ್ಟಿ



‘ಜಾತಿ ಗಣತಿ: ಶಿಫಾರಸು ಅನುಷ್ಠಾನ ಶೀಘ್ರ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸೌಲಭ್ಯ ವಂಚಿತರನ್ನು ಗುರುತಿಸಲೆಂದೇ ನಮ್ಮ ಸರ್ಕಾರ ‘ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ’ (ಜಾತಿ ಗಣತಿ) ನಡೆಸಿದ್ದು, ಮುಂದಿನ ದಿನಗಳಲ್ಲಿ ಈ ವರದಿಯನ್ನು ಸಚಿವ ಸಂಪುಟದ ಮುಂದಿಟ್ಟು, ಶಿಫಾರಸುಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿನ ಕಲಾಮಂದಿರದಲ್ಲಿ ಭಾನುವಾರ ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಸಿದ್ದರಾಮಯ್ಯ

‘ಸಾಮಾಜಿಕ ಗಣತಿ ವರದಿಯನ್ನು ಸರ್ಕಾರ ಸ್ವೀಕರಿಸಿದೆ. ಆದರೆ, ಹಲವು ಕಾರಣದಿಂದ ಆ ವರದಿ ಇನ್ನೂ ಜಾರಿಯಾಗಿಲ್ಲ. ಜಾತಿ ಗಣತಿ ಕಾಂಗ್ರೆಸ್ ಪಕ್ಷದ ಸಿದ್ಧಾಂತವೂ ಆಗಿದೆ. ದೇಶದಲ್ಲಿ 1931ರ ನಂತರ ಜನಸಂಖ್ಯೆಯ ಗಣತಿಯೊಂದಿಗೆ ಜಾತಿ ಗಣತಿ ಕಾರ್ಯ ಆಗಿಲ್ಲ. ಈಗ ಎಲ್ಲ ರಾಜ್ಯಗಳಲ್ಲಿ ಜಾತಿ ಗಣತಿ ಕುರಿತು ಚರ್ಚೆ ನಡೆಯುತ್ತಿದೆ’ ಎಂದು ವಿವರಿಸಿದರು.

5ನೇ ಪುಟ ನೋಡಿ

‘ರಾಜಕೀಯವಾಗಿ ತೊಂದರೆ ಕೊಡಬಹುದು, ಹೆದರುವುದಿಲ್ಲ’

‘ನನಗೆ ಒಂದೆರಡು ತಿಂಗಳು ರಾಜಕೀಯವಾಗಿ ತೊಂದರೆ ಕೊಡಬಹುದು. ಆದರೆ, ಇದಕ್ಕೆಲ್ಲಾ ಹೆದರುವವನಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ಅಶೋಕಪುರಂನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಭಾನುವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ನನ್ನನ್ನು ಅಲುಗಾಡಿಸಲಾಗದು. ನನ್ನ ಆತ್ಮಸಾಕ್ಷಿ ಸರಿಯಾಗಿದೆ. ಆತ್ಮಸಾಕ್ಷಿಗೆ ದ್ರೋಹ ಮಾಡಿಕೊಂಡಿಲ್ಲ. ಹೀಗಾಗಿ ನಾನು ಹೆದರುವ, ಜಗ್ಗುವ-ಬಗ್ಗುವ ಪ್ರಶ್ನೆಯೇ ಇಲ್ಲ’ ಎಂದರು.

‘ಬಹಳ ಜನ ನನ್ನ ಬಳಿಗೆ ಬಂದು, ‘ಧೈರ್ಯವಾಗಿರಿ, ರಾಜೀನಾಮೆ ಕೊಡಬೇಡಿ’ ಎನ್ನುತ್ತಿದ್ದಾರೆ. ಕಾನೂನು ಹೋರಾಟದಲ್ಲಿ ನಾನು ಗೆದ್ದೇ ಗೆಲ್ತೇನೆ. ರಾಜಕೀಯವಾಗಿ ಇವನ್ನೆಲ್ಲಾ ಎದುರಿಸಿ ನಿಲ್ಲುವುದು ಗೊತ್ತಿದೆ’ ಎಂದು ಹೇಳಿದರು.

ಆಟೊಮೇಟಿವ್ ಟೆಸ್ಟಿಂಗ್ ಸ್ಟೇಷನ್ ಅ.1ಕ್ಕೆ ಆರಂಭಿಸಲು ಗಡುವು ನೀಡಿದ್ದ ಕೇಂದ್ರ ಹೆದ್ದಾರಿ ಸಚಿವಾಲಯ

ಸ್ವಯಂಚಾಲಿತ ಫಿಟ್‌ನೆಸ್ ಪರೀಕ್ಷೆ ಮುಂದಕ್ಕೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ವಾಹನಗಳ ಸ್ವಯಂ ಚಾಲಿತ ಪರೀಕ್ಷಾ ಕೇಂದ್ರಗಳ (ಎಟಿಎಸ್) ಸ್ಥಾಪನೆಗೆ ಇನ್ನೂ ಸಮಯ ಬೇಕಿರುವುದರಿಂದ ಸ್ವಯಂ ಚಾಲಿತ ಸದೃಢ (ಫಿಟ್‌ನೆಸ್) ಪರೀಕ್ಷೆ ಜಾರಿ ಮುಂದಕ್ಕೆ ಹೋಗಿದೆ. ಈ ವರ್ಷ ಅನುಷ್ಠಾನಗೊಳ್ಳುವುದು ಅನುಮಾನ ಆಗಿದೆ.

ಮಾಲಿನ್ಯ, ತೈಲ ಸೋರಿಕೆ, ಬ್ರೇಕ್, ಲೈಟ್‌ಗಳು, ಚಕ್ರ ಜೋಡಣೆ, ಸ್ಪೀಡ್ ಗವರ್ನರ್ ಇತ್ಯಾದಿಗಳನ್ನು ಪರಿಶೀಲಿಸಿದ ನಂತರವೇ ಸದೃಢ ಪ್ರಮಾಣಪತ್ರವನ್ನು ನೀಡಲಾಗುತ್ತದೆ. ಸದ್ಯ ಸಿಬ್ಬಂದಿಯೇ ಈ ಪ್ರಕ್ರಿಯೆ ನಡೆಸುವುದರಿಂದ ಕೆಲವೊಮ್ಮೆ ಪ್ರಭಾವ, ಆಮಿಷ ಮತ್ತಿತರ ಕಾರಣಗಳಿಂದ ದೋಷಗಳು ಉಂಟಾಗುತ್ತಿವೆ. ಇದನ್ನು ತಪ್ಪಿಸಲು ಮಾನವ ಹಸ್ತಕ್ಷೇಪ ಇಲ್ಲದೆ ವಾಹನಗಳನ್ನು ಸ್ವಯಂಚಾಲಿತವಾಗಿ ಪರೀಕ್ಷೆ ನಡೆಸುವ ಕೇಂದ್ರಗಳನ್ನು ತೆರೆಯುವ ಯೋಜನೆಯನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು 2019ರಲ್ಲಿ ರೂಪಿಸಿತ್ತು.

2021ರಿಂದಲೇ ಎಟಿಎಸ್ ಕಾರ್ಯಾಚರಣೆ ಜಾರಿ ಮಾಡಲು ನಿರ್ಧರಿಸಿತ್ತು. ಕೋವಿಡ್ ಕಾರಣದಿಂದ ಎರಡು ವರ್ಷ ಯಾವುದೇ ಪ್ರಕ್ರಿಯೆಗಳು ನಡೆದಿರಲಿಲ್ಲ. 2023ರ ಏಪ್ರಿಲ್ 1ರಿಂದ ಎಟಿಎಸ್ ಅನುಷ್ಠಾನಗೊಳಿಸುವಂತೆ 2022ರಲ್ಲಿ ಎಲ್ಲ ರಾಜ್ಯಗಳಿಗೆ ಸೂಚನೆ ನೀಡಲಾಗಿತ್ತು.

ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಎಟಿಎಸ್ ಅನುಷ್ಠಾನಕ್ಕೆ ಬಂದಿರಲಿಲ್ಲ. ಅಕ್ಟೋಬರ್ 1ರಿಂದ ದೇಶದ ಎಲ್ಲ ರಾಜ್ಯಗಳಲ್ಲಿ ಸ್ವಯಂಚಾಲಿತ ಫಿಟ್‌ನೆಸ್ ಪರೀಕ್ಷೆ ಜಾರಿ ಮಾಡಬೇಕು ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಮತ್ತೆ ಗಡುವು ನೀಡಿತ್ತು. ಅದರಂತೆ ರಾಜ್ಯದಲ್ಲಿ ಕೆಲವು ಕಡೆ ಎಟಿಎಸ್ ಆರಂಭಗೊಂಡರೂ ಹಲವು ಕಡೆಗಳಲ್ಲಿ ಇನ್ನಷ್ಟು ಸಮಯ ಬೇಕಿರುವುದರಿಂದ ಕಡ್ಡಾಯವಾಗಿ ಜಾರಿಗೊಳಿಸಲಾಗುತ್ತಿಲ್ಲ ಎಂದು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.


'ನಮ್ಮಲ್ಲಿ ಎರಡು ಮಾದರಿಗಳಲ್ಲಿ ಎಟಿಎಸ್ ಯೋಜನೆಯನ್ನು ಜಾರಿ ಮಾಡಲಾಗುತ್ತಿದೆ. ವಿನ್ಯಾಸ, ನಿರ್ಮಾಣ, ಹೂಡಿಕೆ, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಎಫ್‌ಒಟಿ) ಮೊದಲನೆಯದ್ದು. ಎಟಿಎಸ್ ತೆರೆಯಲು ಬೇಕಾದಷ್ಟು (2 ಎಕರೆ) ಜಮೀನು ಇರುವ ನಮ್ಮ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ನಾವು ಜಮೀನು ನೀಡುತ್ತೇವೆ. ಗುತ್ತಿಗೆ ಪಡೆದವರು ಅಲ್ಲಿ ಎಟಿಎಸ್ ಆರಂಭಿಸುವುದನ್ನು ಡಿಬಿಎಫ್‌ಒಟಿ ಎಂದು ಕರೆಯಲಾಗುತ್ತದೆ. ನಿರ್ಮಾಣ, ಮಾಲೀಕತ್ವ, ಕಾರ್ಯಾಚರಣೆ (ಬಿಒಒ) ಮಾದರಿ ಎರಡನೆಯದ್ದು. ಆರ್‌ಟಿಒಗೆ ಸಂಬಂಧಿಸಿದ ಜಮೀನು ಇಲ್ಲದ ಕಡೆಗಳಲ್ಲಿ ಗುತ್ತಿಗೆ ಪಡೆದವರು ಖಾಸಗಿ ಜಮೀನಿನಲ್ಲಿ ಎಟಿಎಸ್ ತೆರೆಯುವುದಾಗಿದೆ' ಎಂದು ಸಾರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಜ್ಞಾನೇಂದ್ರಕುಮಾರ್ ವಿವರ ನೀಡಿದರು.

'ಅರ್ಹತಾ ಪತ್ರ ನವೀಕರಣಕ್ಕಾಗಿ ಬರುವ ವಾಹನಗಳನ್ನು ಕಡ್ಡಾಯವಾಗಿ ಎಟಿಎಸ್ ಮೂಲಕ ತಪಾಸಣೆಗೆ ಒಳಪಡಿಸಬೇಕಾಗಿರುತ್ತದೆ. ಅದಕ್ಕಾಗಿ ಜಮೀನು ಲಭ್ಯ ಇರುವ 13 ಕಡೆಗಳಲ್ಲಿ ಡಿಬಿಎಫ್‌ಒಟಿ ಮಾದರಿಯಲ್ಲಿ, 19 ಕಡೆಗಳಲ್ಲಿ ಬಿಒಒ ಮಾದರಿಯಲ್ಲಿ ಸ್ವಯಂಚಾಲಿತ ವಾಹನ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಸ್ಮಾರ್ಟ್ ಡಿಎಲ್ (ಚಾಲನಾ ಪರವಾನಗಿ), ಆರ್‌ಸಿ (ನೋಂದಣಿ ಪ್ರಮಾಣಪತ್ರ) ಜಾರಿಯಾಗುವ ಹೊತ್ತಿಗೆ ಎಟಿಎಸ್ ಕೂಡ ಅನುಷ್ಠಾನಗೊಳ್ಳಲಿದೆ' ಎಂದು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದರು.

'2025ಕ್ಕೆ ಎಟಿಎಸ್ ಜಾರಿ'

ಹೊಸ ಯೋಜನೆ ಆಗಿರುವುದರಿಂದ ಜಾರಿ ಮಾಡಲು ಸ್ವಲ್ಪ ಸಮಯ ಬೇಕಾಗುತ್ತದೆ. 2025ರಲ್ಲಿ ಆಟೊಮೇಟಿವ್ ಟೆಸ್ಟಿಂಗ್ ಸ್ಟೇಷನ್‌ಗಳು (ಎಟಿಎಸ್) ಕಾರ್ಯಾಚರಿಸಲಿವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ದೇವನಹಳ್ಳಿ, ಕೋಲಾರ, ಹೊಸಪೇಟೆ, ಗದಗ, ಬಳ್ಳಾರಿ, ವಿಜಯಪುರ, ಬೀದರ್, ಯಾದಗಿರಿ, ದಾವಣಗೆರೆಗಳಲ್ಲಿ ₹ 80 ಕೋಟಿ ವೆಚ್ಚದಲ್ಲಿ ಪರೀಕ್ಷಾ ಪಥ ನಿರ್ಮಿಸಲಾಗುತ್ತಿದೆ. ತುಮಕೂರು, ಯಲಹಂಕ, ಶಿರಸಿ, ಸಕಲೇಶಪುರ, ಕೆ.ಜಿ.ಎಫ್., ಚಿಂತಾಮಣಿ, ಸಾಗರ, ಗೋಕಾಕ, ರಾಣೆಬೆನ್ನೂರು, ದಾಂಡೇಲಿ, ಭಾಲ್ಕಿ, ಬೈಲಹೊಂಗಲಗಳಲ್ಲಿ ₹ 72.95 ಕೋಟಿ ವೆಚ್ಚದಲ್ಲಿ ಪರೀಕ್ಷಾ ಪಥ ನಿರ್ಮಾಣದ ಕಾಮಗಾರಿ ಕೈಗೊಳ್ಳಲಾಗಿದೆ. ಆರು ಕಡೆಗಳಲ್ಲಿ ಪಥ ನಿರ್ಮಿಸಲು ಈ ಬಾರಿಯ ಬಜೆಟ್‌ನಲ್ಲಿ ₹ 36 ಕೋಟಿ ಅನುದಾನ ಒದಗಿಸಲಾಗಿದೆ ಎಂದರು.



ಸುದ್ದಿ 2 ನಿಮಿಷ

ರಾಷ್ಟ್ರೀಯ ಸಮಿತಿ ಸದಸ್ಯರಾಗಿ ಡೆನಿಸ್ ಡೆಸಾ ನೇಮಕ

ಉಡುಪಿ: ಭಾರತದ ಕಥೋಲಿಕ್ ಬಿಷಪ್‌ಗಳ ಸಮ್ಮೇಳನದ (ಸಿಸಿಬಿಐ) ಕ್ರೈಸ್ತ ಐಕ್ಯತಾ ಆಯೋಗದ ರಾಷ್ಟ್ರೀಯ ಸಮಿತಿ ಸದಸ್ಯರಾಗಿ ಉಡುಪಿ ಧರ್ಮಪ್ರಾಂತ್ಯದ ಸಾರ್ವಜನಿಕ ಸಂಪರ್ಕಾಧಿಕಾರಿ ಡೆನಿಸ್ ಡೆಸಾ ನೇಮಕಗೊಂಡಿದ್ದಾರೆ.

ಶಿವಮೊಗ್ಗ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಫ್ರಾನ್ಸಿಸ್ ಸೆರಾವೊ ಅಧ್ಯಕ್ಷರಾಗಿರುವ ಕ್ರೈಸ್ತ ಐಕ್ಯತಾ ಆಯೋಗದ ರಾಷ್ಟ್ರೀಯ ಸಮಿತಿಯ ಸಭೆಯು ಇದೇ 10 ಮತ್ತು 11ರಂದು ನಡೆದಿದ್ದು, ಈ ವೇಳೆ ಡೆನಿಸ್ ಡೆಸಾ ಅವರನ್ನು ನೇಮಕ ಮಾಡಲಾಗಿದೆ. ಕ್ರೈಸ್ತ ಐಕ್ಯತಾ ಆಯೋಗದ ರಾಷ್ಟ್ರೀಯ ಸಮಿತಿಯ ಸದಸ್ಯರ ಅವಧಿ 4 ವರ್ಷಗಳಾಗಿದ್ದು ಅ. 1ರಿಂದ ಆರಂಭಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.



ಡೆನಿಸ್ ಡೆಸಾ ಅವರು ಪ್ರಸ್ತುತ ಧರ್ಮಗುರುಗಳಾಗಿ ಸೇವೆ ನೀಡುತ್ತಿರುವ ತೊಟ್ಟಂ ಸಂತ ಅನ್ನಮ್ಮ ದೇವಾಲಯದ ವ್ಯಾಪ್ತಿಯಲ್ಲಿ ಎಲ್ಲಾ ಧರ್ಮಗಳ ಸದಸ್ಯರನ್ನು ಒಗ್ಗೂಡಿಸಿ, ಸಮನ್ವಯ ಸರ್ವಧರ್ಮ ಸೌಹಾರ್ದ ಸಮಿತಿ ರಚಿಸಿ ಮಾದರಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ ಎಂದು ಹೇಳಿದೆ.

ಬೆದರಿಕೆ ಹಾಕಿದ್ದರಿಂದ ಹಣ ಕೊಟ್ಟೆ: ಸ್ವಾಮೀಜಿ

ಬಾಗಲಕೋಟೆ: 'ಹಣ ನೀಡದಿದ್ದರೆ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರಿಂದ ಹೆದರಿ ಹಣ ನೀಡಿದೆ' ಎಂದು ತಾಲ್ಲೂಕಿನ ಗದ್ದನಕೇರಿ ಗ್ರಾಮ ಬಳಿಯ ರಾಮಾರೂಢ ಮಠದ ಪರಮಹಂಸ ಪರಮಾರೂಢ ಸ್ವಾಮೀಜಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪ್ರಕಾಶ ಎನ್ನುವ ವ್ಯಕ್ತಿ ಡಿವೈಎಸ್‌ಪಿ, ಎಡಿಜಿಪಿ ಹೆಸರಿನಲ್ಲಿ ಕರೆ ಮಾಡಿ ಜಾಮೀನುರಹಿತ ವಾರಂಟ್ ಆಗಿದೆ. ಹಣ ಕೊಡದಿದ್ದರೆ, ಸಂಜೆಯ ವೇಳೆಗೆ ಕೊಲೆ ಮಾಡುವುದಾಗಿ ಹೇಳಿದ್ದರಿಂದ ಪ್ರಾಣ ಭಯದಿಂದ ಹಣ ಕೊಟ್ಟೆ' ಎಂದು ಭಾವುಕರಾಗಿ ಹೇಳಿದರು.

'ಭಕ್ತರಿಗೆ ಹಣ ಕೇಳಿದಾಗ, ಅವರು ಮಠಕ್ಕೆ ಹಣ ತಂದುಕೊಟ್ಟರು. ಅಪರಾಧ ಮಾಡಿದ್ದರೆ ಭಕ್ತರು ಹಣ ನೀಡುತ್ತಿದ್ದರೇ? ಯಾವುದೇ ರೀತಿಯ ತಪ್ಪು ಮಾಡಿಲ್ಲ. ತಪ್ಪು ಮಾಡಿದ್ದನ್ನು ಸಾಬೀತು ಮಾಡಿದರೆ ಶಿಕ್ಷೆ ಅನುಭವಿಸಲು ಸಿದ್ಧನಿದ್ದೇನೆ. ಭಕ್ತರು ಎದೆಗುಂದ ಬೇಕಿಲ್ಲ' ಎಂದರು.

ಪೊಲೀಸರ ಹೆಸರಿನಲ್ಲಿ ಬೆದರಿಸಿದ್ದರಿಂದ ಸ್ವಾಮೀಜಿ, ಆರೋಪಿಗಳಿಗೆ ₹1 ಕೋಟಿ ನೀಡಿದ್ದು, ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿದ್ದರಾಮಯ್ಯ ವಿರುದ್ಧ ಇ.ಡಿ.ಗೆ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಕೋರಿ ಇಲ್ಲಿನ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಶನಿವಾರ ದೂರು ಸಲ್ಲಿಸಿದ್ದಾರೆ.

ನಿರ್ದೇಶನಾಲಯದ ಬೆಂಗಳೂರು ಕಚೇರಿ ಜಂಟಿ ನಿರ್ದೇಶಕರಿಗೆ ಇ-ಮೇಲ್ ಹಾಗೂ ಅಂಚೆ ಮೂಲಕ 16 ಪುಟಗಳ ದೂರು ಸಲ್ಲಿಕೆ ಆಗಿದೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ದುರುಪಯೋಗ ಪಡಿಸಿಕೊಂಡು ಪತ್ನಿ ಬಿ.ಎಂ. ಪಾರ್ವತಿ ಹೆಸರಿನಲ್ಲಿ ಮುಡಾದಿಂದ 14 ನಿವೇಶನಗಳನ್ನು ಅಕ್ರಮವಾಗಿ ಪಡೆದಿದ್ದಾರೆ. ಈ ನಿವೇಶನಗಳ ಮೂಲಕ ಅವರು ₹55.80 ಕೋಟಿ ಮೌಲ್ಯದ ಆಸ್ತಿಯನ್ನು ಅಕ್ರಮವಾಗಿ ಸಂಪಾದಿಸಿದ್ದಾರೆ. ಮುಡಾದಲ್ಲಿ ಇಂತಹ ಸಾಕಷ್ಟು ಅಕ್ರಮಗಳು ನಡೆದಿವೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

ಕೊಟ್ಟಾಕ್ಷಣ ತನಿಖೆ ಆಗುತ್ತದೆಯೇ?– ಸಿದ್ದರಾಮಯ್ಯ: ಸ್ನೇಹಮಯಿ ಕೃಷ್ಣ ತಮ್ಮ ವಿರುದ್ಧ ಇ.ಡಿ.ಗೆ ದೂರು ಸಲ್ಲಿಸಿರುವ ಬಗ್ಗೆ ನಗರದಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ದೂರು ನೀಡಿದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ಯಾರೋ ಇ.ಡಿ.ಗೆ ದೂರು ಕೊಟ್ಟಾಕ್ಷಣವೇ ತನಿಖೆ ಆಗುತ್ತದೆಯೇ?' ಎಂದು ಕೇಳಿದರು.

'ನನ್ನ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ಮಾಡಿದ್ದಾರೆ. ಆ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ಹೆಚ್ಚು ಪ್ರತಿಕ್ರಿಯೆಯನ್ನೂ ಕೊಡುವುದಿಲ್ಲ. ಸ್ನೇಹಮಯಿ ಕೃಷ್ಣ ಯಾರೆಂದು ಗೊತ್ತಿಲ್ಲ; ಆತನ ವಿರುದ್ಧ ದೂರುಗಳು ದಾಖಲಾಗಿರುವುದೂ ತಿಳಿದಿಲ್ಲ' ಎಂದರು.

ಸ್ನೇಹಮಯಿ ಕೃಷ್ಣ ವಿರುದ್ಧ ಎಫ್‌ಐಆರ್

ನಂಜನಗೂಡು (ಮೈಸೂರು ಜಿಲ್ಲೆ): ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿರುದ್ಧ ಕೊಲೆ ಬೆದರಿಕೆ ಒಡ್ಡಿದ ಆರೋಪದ ಮೇಲೆ ಇಲ್ಲಿನ ಠಾಣೆಗೆ ಮಹಿಳೆಯೊಬ್ಬರು ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಮಹಿಳೆಯು ಕೃಷ್ಣ ಸೇರಿದಂತೆ ನಾಲ್ವರ ವಿರುದ್ಧ ದೂರು ನೀಡಿದ್ದಾರೆ.

'ಪತಿ 2020ರಲ್ಲಿ ನಿಧನರಾದರು. ಮಾವ, ಅತ್ತೆ ಹಾಗೂ ಮೈದುನ ಮನೆಕಟ್ಟಲು ನನ್ನಿಂದ ₹ 80 ಲಕ್ಷ ಮೌಲ್ಯದ ಚಿನ್ನವನ್ನು ಬ್ಯಾಂಕ್‌ನಲ್ಲಿ ಅಡವಿಟ್ಟು ₹ 35 ಲಕ್ಷ ಸಾಲ ಪಡೆದಿದ್ದರು. ನಂತರ, ಆಭರಣಗಳನ್ನು ಅತ್ತೆ ಹೆಸರಿಗೆ ಮಾಡಿಕೊಂಡು ಬೆದರಿಕೆ ಹಾಕಿದ್ದರು. ಈ ಬಗ್ಗೆ 2021ರಲ್ಲಿ ದೂರು ಸಲ್ಲಿಸಿದ್ದೆ. ಆ ಪ್ರಕರಣದ ವಿಚಾರಣೆಗೆ ಹಾಜರಾಗಿ ನ್ಯಾಯಾಲಯದಿಂದ ವಾಪಸಾಗುವಾಗ, ಜುಲೈ 18ರಂದು ಮೈದುನ ಡಾಬಾ ಜಯಕುಮಾರ್ ಹಾಗೂ ಕೃಷ್ಣ ಜೀವ ಬೆದರಿಕೆ ಹಾಕಿದ್ದಾರೆ. ಈ ಬಗ್ಗೆ ಎಸ್‌ಪಿ ಕಚೇರಿಗೆ ದೂರು ನೀಡಿದ್ದೆ' ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

ಪೊಲೀಸ್ ವರಿಷ್ಠಾಧಿಕಾರಿಗೆ ನೀಡಿದ್ದ ದೂರು ಆಧರಿಸಿ, ನಂಜನಗೂಡು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಾಗಿರುವುದರಿಂದ ಅವರು ಯಾವುದೇ ಸರ್ಕಾರಿ ಆದೇಶಗಳಿಗೆ, ಪತ್ರಗಳಿಗೆ ಸಹಿ ಹಾಕಬಾರದು. ದಸರಾ ಉದ್ಘಾಟನೆಯಲ್ಲಿ ಪಾಲ್ಗೊಳ್ಳಬಾರದು
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಗಮನಿಸಿದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದಾಖಲಾಗಿರುವ ಮುಡಾ ಪ್ರಕರಣ ಸಣ್ಣದು
ಡಾ.ಶರಣಪ್ರಕಾಶ್ ಪಾಟೀಲ, ಉನ್ನತ ವೈದ್ಯಕೀಯ ಶಿಕ್ಷಣ ಖಾತೆ ಸಚಿವ

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂಬ ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸಲಹೆಯನ್ನು ಗೌರವಿಸುತ್ತೇವೆ. ಆದರೆ, ಕೇಂದ್ರ ಸಚಿವರ ವಿರುದ್ಧ ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರ ರಾಜೀನಾಮೆಯನ್ನೂ ಕೇಳಲಿ
ಎ.ಎಸ್.ಪೊನ್ನಣ್ಣ, ಮುಖ್ಯಮಂತ್ರಿ ಕಾನೂನು ಸಲಹೆಗಾರ

ಈ ಹಿಂದೆ ಬಿ.ಎಸ್.ಯಡಿಯೂರಪ್ಪ ವಿರುದ್ಧ ಆರೋಪ ಕೇಳಿಬಂದಾಗ, ನೈತಿಕತೆಯ ಹೊಣೆ ಹೊತ್ತು ರಾಜೀನಾಮೆ ಕೊಡಬೇಕು ಎಂದು ಸಿದ್ದರಾಮಯ್ಯ ಅಗ್ರಹಿಸಿದ್ದರು. ಈಗ ಅವರ ನೈತಿಕತೆ ಎಲ್ಲಿ ಹೋಗಿದೆ
ಅಭಯ ಪಾಟೀಲ, ಶಾಸಕ

'ಅಹಂಕಾರದ ಪರಮಾವಧಿ'

ಹುಬ್ಬಳ್ಳಿ: 'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಅವಹೇಳನಕಾರಿ ಪದ ಬಳಸಿರುವ ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ವಿರುದ್ಧ ಕೇಡರ್ ಕಂಟ್ರೋಲ್ ಮೂಲಕ ಕ್ರಮ ಕೈಗೊಳ್ಳಲಾಗುವುದು. ಇದು ಅಹಂಕಾರದ ಪರಮಾವಧಿ ಆಗಿದ್ದು, ಇದಕ್ಕೆ ಅವರು ಬೆಲೆ ತೆರಬೇಕಾಗುತ್ತದೆ. ರಾಜ್ಯದಲ್ಲಿ ಈ ಸರ್ಕಾರ ಶಾಶ್ವತವಾಗಿ ಇರುವುದಿಲ್ಲ. ಎಚ್ಚರ ವಹಿಸಿ ಮಾತನಾಡಿ, ಕೆಲಸ ಮಾಡಿ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಎಚ್ಚರಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಒಬ್ಬ ಜನಪ್ರತಿನಿಧಿ ಬಗ್ಗೆ ಲೋಕಾಯುಕ್ತ ಎಡಿಜಿಪಿ ಕೆಟ್ಟ ಪದ ಬಳಸಿದ್ದು, ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತಕ್ಕೆ ಹಿಡಿದ ಕೈಗನ್ನಡಿ. ಕಾಂಗ್ರೆಸ್ ಎಂತೆಂಥ ಅಧಿಕಾರಿಗಳನ್ನು ಬೆಳೆಸುತ್ತಿದೆ ಎಂಬುದಕ್ಕೆ ಇದು ಸಾಕ್ಷಿ' ಎಂದು ಅವರು ಕಿಡಿಕಾರಿದರು.

'ಬಿಜೆಪಿಯ ನಾಯಕರು ರಾಜೀನಾಮೆ ನೀಡಬೇಕಲ್ಲವೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಬಿಜೆಪಿಯವರಿಗೆ ನೈತಿಕತೆ ಇದ್ದರೆ, ಆರೋಪ ಹೊತ್ತ ಬಿ.ಎಸ್. ಯಡಿಯೂರಪ್ಪ ಮತ್ತು ಬಿ.ವೈ. ವಿಜಯೇಂದ್ರ ಅವರನ್ನು ತಮ್ಮ ಪಕ್ಷದಿಂದ ಮೊದಲು ಹೊರಹಾಕಲಿ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸವಾಲು ಹಾಕಿದರು.

ಕಾಂಗ್ರೆಸ್ ಶಾಸಕ ಶರತ್ ಬಚ್ಚೇಗೌಡ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕರಡಿಗೆ ಎಷ್ಟು ಕೂದಲುಗಳಿವೆಯೋ ಅಷ್ಟು ಆರೋಪಗಳು ಬಿಜೆಪಿಯವರ ಮೇಲಿವೆ' ಎಂದು ಆರೋಪಿಸಿದರು.

'ಸೆಲ್ ಕಂಪನಿಗಳ ಮೂಲಕ ವಿಜಯೇಂದ್ರ ಮನಿ ಲಾಂಡರಿಂಗ್ ಮಾಡುತ್ತಿದ್ದಾರೆ. ಹಲವು ಬಾರಿ ಮಲೇಷ್ಯಾ ಸೇರಿದಂತೆ ವಿದೇಶಗಳಿಗೆ ಭೇಟಿ ನೀಡಿದ್ದಾರೆ. ಅವರು ಎಷ್ಟು ಬಾರಿ ವಿದೇಶಕ್ಕೆ ಭೇಟಿ ನೀಡಿದ್ದಾರೆ ಎಂಬ ಬಗ್ಗೆ ಪಾಸ್‌ಪೋರ್ಟ್ ತೋರಿಸಲಿ. ನಾವು ನಮ್ಮ ಪಾಸ್‌ಪೋರ್ಟ್ ತೋರಿಸುತ್ತೇವೆ' ಎಂದರು.

'ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಶಾಸಕ ಮುನಿರತ್ನ ಅವರನ್ನು ಪಕ್ಷದಿಂದ ವಜಾಗೊಳಿಸಿದ ನಂತರ ನಮ್ಮ ನಾಯಕರಾದ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರ ರಾಜೀನಾಮೆಯನ್ನು ಬಿಜೆಪಿ ನಾಯಕರು ಕೇಳಲಿ' ಎಂದೂ ಹೇಳಿದರು.

'ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿಯವರು ಆದಾಯ ತೆರಿಗೆ, ಜಾರಿ ನಿರ್ದೇಶನಾಲಯ ಹಾಗೂ ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಬಿಜೆಪಿಯವರ ಕಾರ್ಯಾಚರಣೆಗಳಿಗೆ ನಾವು ಹೆದರುವುದಿಲ್ಲ' ಎಂದು ವಾಗ್ದಾಳಿ ನಡೆಸಿದರು.

'ಚುನಾವಣಾ ಬಾಂಡ್ ವಿಚಾರದಲ್ಲಿ ಸುಲಿಗೆ ಮಾಡಲಾಗುತ್ತಿದೆ. ಇದು ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸುತ್ತಿರುವ ಬಿಜೆಪಿ ನಾಯಕರ ವಿರುದ್ಧವೇ ಈಗ ಎಫ್‌ಐಆರ್ ಆಗಿದೆ. ಅವರು ಕೂಡ ರಾಜೀನಾಮೆ ನೀಡಬೇಕಲ್ಲವೇ' ಎಂದರು.

'ಜೋಷಿಯವರು ರಾಜ್ಯಕ್ಕೆ ಯಾವುದೇ ಯೋಜನೆ ತಂದಿಲ್ಲ. ಆದರೆ, ಕ್ಷುಲ್ಲಕ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮನಿ ಲಾಂಡರಿಂಗ್ ಮಾಡಿದ್ದಾರೆ ಎಂದು ಜೋಷಿ ಹೇಳಿರುವುದು ಹಾಸ್ಯಾಸ್ಪದ' ಎಂದರು.

'ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಸಿದ್ದರಾಮಯ್ಯ ವಿಚಾರ ಮಾತನಾಡುವ ಪ್ರಲ್ಹಾದ ಜೋಷಿ ಅವರೇ, ನೀವು ಮುನಿರತ್ನ ಪ್ರಕರಣದಲ್ಲಿ ಮೌನವಾಗಿದ್ದು ಯಾಕೆ. ಇದು ಬಿಜೆಪಿ ಸಂಸ್ಕೃತಿಯಾ' ಎಂದೂ ಕೇಳಿದರು.

ರಾಜ್ಯ ಸಲಹಾ ಬೆಲೆ ಕಾಯ್ದೆ ಜಾರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು ರಾಜ್ಯ ಸಲಹಾ ಬೆಲೆ (ಎಸ್‌ಎಪಿ) ಕಾಯ್ದೆಯನ್ನು ರಾಜ್ಯದ ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸಿ, ಅದನ್ನು ಜಾರಿಗೆ ತರುವಂತೆ ದೊಡ್ಡ ಹೋರಾಟ ಮಾಡಿ ಕಾಂಗ್ರೆಸ್ ಸರ್ಕಾರದ ಮೇಲೆ ಒತ್ತಡ ತರಬೇಕು' ಎಂದು ಅಖಿಲ ಭಾರತ ಕಬ್ಬು ಬೆಳೆಗಾರರ ಸಂಘದ ರಾಷ್ಟ್ರೀಯ ಅಧ್ಯಕ್ಷ ಡಿ.ರವಿಂದ್ರನ್ ಹೇಳಿದರು.

ನಗರದಲ್ಲಿ ಭಾನುವಾರ ಕರ್ನಾಟಕ ಕಬ್ಬು ಬೆಳೆಗಾರ ಸಂಘ ಆಯೋಜಿಸಿದ್ದ ಕಬ್ಬು ಬೆಳೆಗಾರರ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿದ ಅವರು ಮಾತನಾಡಿದರು.

'ತಮಿಳುನಾಡಿನಲ್ಲಿ ಎಸ್‌ಎಪಿ ಸ್ಥಗಿತದ ಘೋಷಣೆ ಹೊರ ಬಿದ್ದಾಗ ದೊಡ್ಡ ಮಟ್ಟದ ಹೋರಾಟ ನಡೆದಿತ್ತು. ಅದರ ಪ್ರತಿಫಲವಾಗಿ ಇವತ್ತು ಬೆಳೆಗಾರರು ಪ್ರತಿ ಟನ್ ಕಬ್ಬಿನ ಮೇಲೆ ಹೆಚ್ಚುವರಿಯಾಗಿ ₹250 ಎಸ್‌ಎಪಿ ಪಡೆಯುತ್ತಿದ್ದಾರೆ. ಪಂಜಾಬ್, ಹರಿಯಾಣದ ಬೆಳೆಗಾರರಿಗೆ ಎಸ್‌ಎಪಿ ಸಿಗುತ್ತಿದೆ. ಆದರೆ, ಕರ್ನಾಟಕದಲ್ಲಿ ಉತ್ತಮ ಇಳುವರಿ ಇದ್ದಾಗಿಯೂ ಇಲ್ಲಿನ ಬೆಳೆಗಾರರಿಗೆ ಎಫ್‌ಆರ್‌ಪಿ, ಎಸ್‌ಎಪಿ ಸಿಗದಿರುವುದು ಬೇಸರ ತರಿಸಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ತಪ್ಪು ಮಾಡಿ ಅಧಿಕಾರಿ ಟೀಕಿಸುವ ಕುಮಾರಸ್ವಾಮಿ'

ಮೈಸೂರು: 'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಪ್ಪು ಮಾಡಿದ್ದಾರೆ. ಹೀಗಾಗಿ, ಅಧಿಕಾರಿಗಳನ್ನು ಟೀಕಿಸುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ಅಧಿಕಾರಿಗಳ ಮೇಲೆ ಇನ್ನೇಕೆ ಟೀಕೆ ಮಾಡುತ್ತಿದ್ದಾರೆ? ಅಧಿಕಾರಿಗಳು ಕಾನೂನು ಬಾಹಿರವಾಗಿ ಕಾರ್ಯನಿರ್ವಹಿಸಿದರೆ ಟೀಕೆ ಮಾಡಲಿ' ಎಂದು ಹೇಳಿದರು.

'ಲೋಕಾಯುಕ್ತ ವಿಶೇಷ ತನಿಖಾ ತಂಡದ ಎಡಿಜಿಪಿ ಎಂ.ಚಂದ್ರಶೇಖರ್ ವಿರುದ್ಧ ಕುಮಾರಸ್ವಾಮಿ ಆರೋಪ ಮಾಡಿದ್ದಾರೆ. ಅದಕ್ಕೆ ಪ್ರತಿಯಾಗಿ ಅಧಿಕಾರಿಯೂ ಉತ್ತರ ಕೊಟ್ಟಿದ್ದಾರೆ ಎಂಬುದಷ್ಟೆ ನನಗೆ ಗೊತ್ತು' ಎಂದರು.

'ಆ ಅಧಿಕಾರಿಯು ಕುಮಾರಸ್ವಾಮಿ ಅವರನ್ನು ಹಂದಿ ಎಂದು ಕರೆದಿದ್ದಾರೆಯೇ ಅಥವಾ ಬರೆದಿದ್ದಾರೆಯೇ? ಅವರು ಬರೆದಿರುವ ಪತ್ರದಲ್ಲಿ ಜಾರ್ಜ್ ಬರ್ನಾರ್ಡ್ ಶಾ ಅವರ ಮಾತು ಉಲ್ಲೇಖಿಸಿದ್ದಾರಷ್ಟೆ. ಆ ವಿಚಾರದ ಬಗ್ಗೆ ವಿವರಣೆ ನೀಡುವುದಿಲ್ಲ; ಮಧ್ಯಪ್ರವೇಶವನ್ನೂ ಮಾಡುವುದಿಲ್ಲ. ಕುಮಾರಸ್ವಾಮಿ ಹೇಳಿಕೆಗಳಿಗೆ ನಾನು ಉತ್ತರ ಕೊಡುವುದಿಲ್ಲ' ಎಂದರು.

ಗುರುರಾಜ ಕರಜಗಿಗೆ 'ವಿ.ಕೃ.ಗೋಕಾಕ್ ಪ್ರಶಸ್ತಿ' ಪ್ರದಾನ

'ಆದಾಯಕ್ಕಾಗಿ ಶಿಕ್ಷಣ ಸಂಸ್ಥೆ, ಆಸ್ಪತ್ರೆ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೇವಾ ಕ್ಷೇತ್ರವಾಗಿದ್ದ ಶಿಕ್ಷಣ ಹಾಗೂ ಆರೋಗ್ಯ ಈಗ ಉದ್ಯಮವಾಗಿ ಮಾರ್ಪಾಡಾಗಿದೆ. ನಿರಂತರ ಆದಾಯಕ್ಕಾಗಿ ನಮ್ಮ ಜನಪ್ರತಿನಿಧಿಗಳೇ ಇವುಗಳನ್ನು ನಡೆಸುತ್ತಿದ್ದಾರೆ' ಎಂದು ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯ ಬೇಸರ ವ್ಯಕ್ತಪಡಿಸಿದರು.

ಭಾರತೀಯ ವಿದ್ಯಾ ಭವನ ಹಾಗೂ ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರಿಗೆ 'ವಿ.ಕೃ.ಗೋಕಾಕ್ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಫಲಕವನ್ನು ಒಳಗೊಂಡಿದೆ.

ಈ ವೇಳೆ ಮಾತನಾಡಿದ ಟ್ರಸ್ಟ್‌ನ ಅಧ್ಯಕ್ಷರೂ ಆಗಿರುವ ನರಹಳ್ಳಿ ಬಾಲಸುಬ್ರಹ್ಮಣ್ಯ, 'ಬ್ರಿಟಿಷರು ಭಾರತಕ್ಕೆ ಬಂದಾಗ ನಮ್ಮ ಮೇಲೆ ರಾಜಕೀಯವಾಗಿ ಮಾತ್ರ ಆಕ್ರಮಣ ಮಾಡದೆ, ಸಾಂಸ್ಕೃತಿಕವಾಗಿಯೂ ಆಕ್ರಮಣ ಮಾಡಿದರು. ಹೀಗೆ ಆಕ್ರಮಣ ಮಾಡಲು ಅವರು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡರು.



ಕಾರ್ಯಕ್ರಮದಲ್ಲಿ ಗುರುರಾಜ ಕರಜಗಿ ಮತ್ತು ಪತ್ನಿ ಪರಿಮಳ ಕರಜಗಿ ಅವರಿಗೆ 'ವಿ.ಕೃ. ಗೋಕಾಕ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. (ಎಡದಿಂದ ನಿಂತವರು) ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ. ರಾಘವನ್, ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಅನಿಲ್ ಗೋಕಾಕ್, ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್, ಎಂ.ವೀರಪ್ಪ ಮೊಯಿಲಿ, ವಿದ್ಯಾಭವನದ ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ಕೆ. ರಾವ್ ಮತ್ತು ನರಹಳ್ಳಿ ಬಾಲಸುಬ್ರಹ್ಮಣ್ಯ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಸ್ವಾತಂತ್ರ್ಯ ನಂತರವೂ ಅತ್ಯುತ್ತಮ ಆಸ್ಪತ್ರೆ, ಶಿಕ್ಷಣ ಕೇಂದ್ರಗಳು ಬಂಡವಾಳಶಾಹಿಗಳ ಪಾಲಾಗಿವೆ. ಜನಪ್ರತಿನಿಧಿಗಳೇ ಶಾಲೆ, ಕಾಲೇಜು, ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ. ಇವು ಆದಾಯದ ಮೂಲವಾಗಿ ಮಾರ್ಪಡುತ್ತಿವೆ' ಎಂದರು.

'ಸಾಂಸ್ಕೃತಿಕ ಟ್ರಸ್ಟ್‌ಗಳು ಆರ್ಥಿಕ ಬಲವಿಲ್ಲದಂತಾಗಿವೆ. ಗ್ರಂಥಾಲಯ ಕರ ₹ 500 ಕೋಟಿಯಷ್ಟಿದೆ. ಆದರೆ, ಸರ್ಕಾರ ಈ ಹಣವನ್ನು ಗ್ರಂಥಾಲಯಗಳಿಗೆ ಪುಸ್ತಕಗಳ ಖರೀದಿಗೆ ನೀಡದೆ, ಬೇರೆ ಉದ್ದೇಶಕ್ಕೆ ಬಳಸಿಕೊಳ್ಳುತ್ತಿದೆ. ಸರ್ಕಾರದ ಗಮನ, ಆಸಕ್ತಿ ಬೇರೆ ಕಡೆಗೆ ಸಾಗಿದೆ. ಜನರೇ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸಬೇಕು' ಎಂದು ಅಭಿಪ್ರಾಯಪಟ್ಟರು.

ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, 'ವಿ.ಕೃ. ಗೋಕಾಕ್ ಅವರು ಕನ್ನಡ ಭಾಷೆಗೆ ನೀಡಿದ ಕೊಡುಗೆ ಅನನ್ಯ. ಅವರಿಂದಲೇ ಭಾಷೆಯ ಜಾಗೃತಿ ಆಗಿದೆ. ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳು ಮುಚ್ಚುತ್ತಿರುವ ಈ ಹೊತ್ತಿನಲ್ಲಿ ಶಾಲೆಗಳ ಉಳಿವಿಗೆ ಜಾಗೃತಿ ಆಂದೋಲನ ನಡೆಯಬೇಕಿದೆ' ಎಂದು ಹೇಳಿದರು.

'ವೇದ–ಉಪನಿಷತ್ತುಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದೆಯೇ ಅವನ್ನು ತಪ್ಪಾಗಿ ವ್ಯಾಖ್ಯಾನ ಮಾಡುತ್ತಿದ್ದೇವೆ. ಅವುಗಳಲ್ಲಿ ಮೌಲ್ಯಗಳು ಹಾಸು ಹೊಕ್ಕಾಗಿದ್ದು, ಆ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಗಬೇಕು' ಎಂದರು.

ಗುರುರಾಜ ಕರಜಗಿ, 'ಗೋಕಾಕ್ ಅವರು ಆಕಾರ ಮತ್ತು ಸಾಧನೆಯಿಂದ ಎತ್ತರದ ಸ್ಥಾನದಲ್ಲಿದ್ದಾರೆ. ಅವರ ಹೆಸರಿನ ಪ್ರಶಸ್ತಿ ಪಡೆದಿರುವುದು ಸಂತೋಷವನ್ನುಂಟು ಮಾಡಿದೆ. ಇನ್ನೊಂದು ಜನ್ಮವಿದ್ದರೂ ನಾನು ಮೇಷ್ಟ್ರು ಆಗಿಯೇ ಕೆಲಸ ಮಾಡಬೇಕು ಅಂತ ಬಯಸುತ್ತೇನೆ' ಎಂದು ಹೇಳಿದರು.

ಸರ್ಕಾರ ಉರುಳಿಸಲು ₹ 1,000 ಕೋಟಿ

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಮಹಾನ್ ನಾಯಕರೊಬ್ಬರು ಮುಖ್ಯಮಂತ್ರಿ ಆಗಬೇಕು ಎಂಬ ಮಹದಾಸೆಯಿಂದ ರಾಜ್ಯ ಸರ್ಕಾರವನ್ನು ಉರುಳಿಸಲು ₹ 1,000 ಕೋಟಿ ತೆಗೆದಿಟ್ಟಿದ್ದಾರೆ ಎಂದು ಆರೋಪಿಸಿದ ವಿಜಯಪುರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ, 'ಶಾಸಕರ ಖರೀದಿ, ಕುದುರೆ ವ್ಯಾಪಾರ, ಆಪರೇಷನ್‌ಗೆ ಬಿಜೆಪಿ ವರಿಷ್ಠರು ಅವಕಾಶ ನೀಡುವುದಿಲ್ಲ, ನಾವೂ ಒಪ್ಪುವುದಿಲ್ಲ' ಎಂದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯ ಸರ್ಕಾರ ತಾನಾಗಿಯೇ ಪತನವಾಗುವ ಕಾಲ ಸನ್ನಿಹಿತವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಉರುಳಿಸಲು ಬಿಜೆಪಿ ಯಾವುದೇ ಪ್ರಯತ್ನ ಮಾಡುವುದಿಲ್ಲ. ಸರ್ಕಾರ ಬೀಳಿಸಲು ಕೆಲವರ ಬಳಿ ಭ್ರಷ್ಟಾಚಾರದಿಂದ ಗಳಿಸಿರುವ ಸಾಕಷ್ಟು ಸಂಪತ್ತು ಇದೆ. ಆದರೆ, ಅಂಥ ಕೆಲಸಕ್ಕೆ ಪಕ್ಷದ ಹೈಕಮಾಂಡ್ ಒಪ್ಪಿಗೆ ನೀಡುವುದಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಹೆಸರು ಉಲ್ಲೇಖಿಸದೇ ಹೇಳಿದರು.

'ಹಣ ಮೀಸಲಿಟ್ಟುಕೊಂಡವರು ಯಾರು ಎಂಬುದನ್ನು ನೀವೇ (ಪತ್ರಕರ್ತರು) ಅಂದಾಜು ಮಾಡಬೇಕು. ಅವರ ಹೆಸರನ್ನು ನಾನು ಹೇಳುವುದಿಲ್ಲ. ಈ ಹಿಂದೆ ಅವರ ಮನೆಯಲ್ಲಿ ನೋಟು ಎಣಿಕೆ ಯಂತ್ರ ಪತ್ತೆಯಾಗಿತ್ತು. ಡಿಸೆಂಬರ್ ವೇಳೆಗೆ ರಾಜ್ಯದಲ್ಲಿ ದೊಡ್ಡ ಕ್ರಾಂತಿ ನಡೆಯುವುದಾಗಿ ಹೇಳುತ್ತಿದ್ದಾರೆ. ಮುಖ್ಯಮಂತ್ರಿಯಾಗಲು ತುದಿಗಾಲಲ್ಲಿ ನಿಂತಿದ್ದಾರೆ. ಇಷ್ಟು ತರಾತುರಿ ಬಿಜೆಪಿಗೆ ಇಲ್ಲ. ರಾಜ್ಯ ಸರ್ಕಾರ ಪತನ ಆಗುವವರೆಗೆ ನಾವು ಕಾಯುತ್ತೇವೆ. ಮುಂದೆ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬಹುಮತದಿಂದ ಅಧಿಕಾರಕ್ಕೆ ಬರಲಿದೆ' ಎಂದರು.

ಇದಕ್ಕೂ ಮುನ್ನ ಯತ್ನಾಳ ಅವರು ಮಾಜಿ ಸಂಸದರಾದ ಜಿ.ಎಂ. ಸಿದ್ದೇಶ್ವರ, ಪ್ರತಾಪಸಿಂಹ, ಶಾಸಕ ಬಿ.ಪಿ. ಹರೀಶ ಮತ್ತಿತರ ಮುಖಂಡರೊಂದಿಗೆ ಗೋಪ್ಯ ಸಭೆ ನಡೆಸಿದರು.

ಡಿಸೆಂಬರ್‌ವರೆಗೆ ಗಡುವು

'ಪಕ್ಷ ಉಳಿಸಲು ಪ್ರಯತ್ನ ಮಾಡುತ್ತಿರುವ ನಾವು ಭಿನ್ನಮತೀಯರಲ್ಲ. ಬದಲಿಗೆ, ನಿಷ್ಠಾವಂತ ಕಾರ್ಯಕರ್ತರು. ಡಿಸೆಂಬರ್‌ವರೆಗೂ ಕಾದು ನೋಡುತ್ತೇವೆ. ಪಕ್ಷದ ತೀರ್ಮಾನ ಗಮನಿಸಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ' ಎಂದು ಬಸನಗೌಡ ಪಾಟೀಲ ಯತ್ನಾಳ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆಗೆ ನಾವು ಪಟ್ಟು ಹಿಡಿದಿಲ್ಲ. ಪಕ್ಷದ ವೇದಿಕೆಯಲ್ಲಿ ಕೆಲ ವಿಚಾರಗಳ ಕುರಿತು ಚರ್ಚಿಸಿದ್ದೇವೆ. ಹೈಕಮಾಂಡ್ ಎಲ್ಲರ ಅಭಿಪ್ರಾಯ ಪಡೆದಿದೆ. ವಿಜಯೇಂದ್ರ ಕುರಿತು ಬಹಿರಂಗವಾಗಿ ಮಾತನಾಡದಂತೆ ಸೂಚನೆ ನೀಡಿದೆ. ಹೀಗಾಗಿ ಏನನ್ನೂ ಮಾತನಾಡುವುದಿಲ್ಲ' ಎಂದು ಹೇಳಿದರು.



ಬಸನಗೌಡ ಪಾಟೀಲ ಯತ್ನಾಳ



ಬಿಜೆಪಿ ಕಾರ್ಯಕರ್ತರು ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ರಾಜ್ಯದಾದ್ಯಂತ ಪಕ್ಷ ಸಂಘಟಿಸುತ್ತಿದ್ದಾರೆ. ನಾಲ್ಕೈದು ಜನ ಗುಂಪುಗಾರಿಕೆಯಲ್ಲಿ ತೊಡಗಿದ್ದು, ವರಿಷ್ಠರು ಗಮನಿಸುತ್ತಿದ್ದು, ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ
ಎಂ.ಪಿ.ರೇಣುಕಾಚಾರ್ಯ
ಮಾಜಿ ಸಚಿವ

ನಿಷೇಧಾಜ್ಞೆ ಜಾರಿ, ಪುರಭವನ ಆವರಣಕ್ಕೆ ಸೀಮಿತವಾದ ಕಾರ್ಯಕ್ರಮ

ಮಹಿಷ ಪುಷ್ಪಾರ್ಚನೆಗೆ ಅಡ್ಡಿ: ದಸರೆ ತಡೆಯುವ ಬೆದರಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: ನಾಡಹಬ್ಬ ಮೈಸೂರು ದಸರೆಗೆ ಪ್ರತಿಯಾಗಿ 'ಮಹಿಷ ದಸರಾ ಆಚರಣೆ ಸಮಿತಿ'ಯಿಂದ ಇಲ್ಲಿನ ಪುರಭವನದ ಆವರಣದಲ್ಲಿ ಭಾನುವಾರ 'ಮಹಿಷ ಮಂಡಲೋತ್ಸವ'ದ ಹೆಸರಿನಲ್ಲಿ 'ಮಹಿಷ ದಸರಾ' ಆಚರಿಸಲಾಯಿತು. ಚಾಮುಂಡಿ ಬೆಟ್ಟದಲ್ಲಿರುವ ಮಹಿಷಾಸುರ ಪ್ರತಿಮೆಗೆ 'ಪುಷ್ಪಾರ್ಚನೆ' ಮಾಡಲು ಜಿಲ್ಲಾಡಳಿತ ಅವಕಾಶ ಕೊಡಲಿಲ್ಲ.

'ದಸರಾ ಉದ್ಘಾಟನೆ ಹಾಗೂ ಮೆರವಣಿಗೆಯನ್ನು ಹೇಗೆ ನಡೆಸುತ್ತೀರಿ ನೋಡುತ್ತೇವೆ' ಎಂದು ಸಮಿತಿಯು ಸವಾಲು ಹಾಕಿದೆ.

'ಅ.12ರಂದು ನಡೆಯಲಿರುವ ಮೆರವಣಿಗೆಯಂದು ಅಶೋಕಪುರಂ ಉದ್ಯಾನದಿಂದ ಅಶೋಕ ಚಕ್ರವರ್ತಿಯ ಪ್ರತಿಮೆ ಮೆರವಣಿಗೆ ಮಾಡುತ್ತೇವೆ. ನಮ್ಮ ಧಾರ್ಮಿಕ ಭಾವನೆಯನ್ನೂ ಗೌರವಿಸಬೇಕು. ಇಲ್ಲದಿದ್ದರೆ ಪರಿಸ್ಥಿತಿ ಎದುರಿಸಿ' ಎಂದು ಮಹಿಷ ದಸರಾ ಆಚರಣಾ ಸಮಿತಿ ಅಧ್ಯಕ್ಷ ಪುರುಷೋತ್ತಮ್ ಸರ್ಕಾರಕ್ಕೆ ಸವಾಲು ಹಾಕಿದರು.

'ಸಮುದಾಯದ ಭಾವನೆಗಳಿಗೆ ಸಂವಿಧಾನದ ಅನುಸಾರ ಸಮಾನ ಪ್ರಾಶಸ್ತ್ಯ ನೀಡುತ್ತಿಲ್ಲ. ನಮ್ಮ ಆಚರಣೆ ತಡೆದಿದ್ದೀರಿ. ದಸರಾ ಹೇಗೆ ಉದ್ಘಾಟಿಸುತ್ತೀರಿ ನೋಡೋಣ. ಅಂದು ರಾಜ್ಯದೆಲ್ಲೆಡೆ ರಸ್ತೆ, ರೈಲು, ಬಸ್ ತಡೆ ನಡೆಸಿ ಬಿಸಿ ಮುಟ್ಟಿಸುತ್ತೇವೆ. ವಿಜಯದಶಮಿಯಂದು ಅಶೋಕ ಚಕ್ರವರ್ತಿ ಶಸ್ತ್ರತ್ಯಾಗ ಮಾಡಿ ಬೌದ್ಧ ಧರ್ಮ ಸ್ವೀಕರಿಸಿದ್ದ. ಹೀಗಾಗಿ, ಆತನ ಪ್ರತಿಮೆ ಮೆರವಣಿಗೆ ನಡೆಸಲಿದ್ದೇವೆ' ಎಂದು ತಿಳಿಸಿದರು.

ಬಹಿರಂಗ ಚರ್ಚೆಗೆ ಬನ್ನಿ: 'ಬೌದ್ಧರು ಶಾಂತಿ ಪ್ರಿಯರು, ಎಲ್ಲರನ್ನೂ ಗೌರವಿಸುತ್ತೇವೆ. ನಮ್ಮನ್ನು ವಿರೋಧಿಸುವವರು ಮನೆಯಲ್ಲಿ ಕುಳಿತು ಹೇಡಿಗಳಂತೆ ಮಾತನಾಡಬೇಡಿ. ಸವಾಲು ಸ್ವೀಕರಿಸಿ ಬಹಿರಂಗ ಚರ್ಚೆಗೆ ಬನ್ನಿ' ಎಂದು ಸವಾಲು ಹಾಕಿದರು.

'ಮಹಿಷ ದಸರಾ ಸಂಭ್ರಮಾಚರಣೆ ದೊಡ್ಡ ಮಟ್ಟದಲ್ಲಿ ಆಗಬೇಕಿತ್ತು. ನಾವು ಆಯ್ಕೆ ಮಾಡಿದ ಸರ್ಕಾರವೇ ಸಮುದಾಯಕ್ಕೆ ದ್ರೋಹ ಮಾಡಿದೆ' ಎಂದರು.

ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, 'ಪ್ರಚೋದಿಸುವವರ ವಿರುದ್ಧ ಕಾನೂನು ಕ್ರಮ ವಹಿಸುವ ಬದಲಿಗೆ ಮಹಿಷ ಪ್ರತಿಮೆಗೆ ನಮಿಸಿ ಶಾಂತಿಯಿಂದ ಬರಲು ಹೊರಟಿದ್ದವರ ವಿರುದ್ಧ ಸರ್ಕಾರ ನಿಂತಿದೆ. ಬಾಬಾಸಾಹೇಬರ ಸಂವಿಧಾನ ಸತ್ತು ಹೋಗಿದೆ. ನಿಮ್ಮ ದಸರೆಗೆ ನಾವು ತೊಂದರೆ ಕೊಟ್ಟಿಲ್ಲ. ನಮಗೇಕೆ ತೊಂದರೆ ಕೊಡುತ್ತಿದ್ದೀರಿ? ಚಾಮುಂಡಿ ಬೆಟ್ಟವನ್ನು ಬೇರೆ ಯಾರ ಹೆಸರಿಗಾದರೂ ಖಾತೆ ಮಾಡಿಕೊಟ್ಟಿದ್ದೀರಾ, ದಸರಾ ಮೆರವಣಿಗೆಯಲ್ಲಿ ನಂದಿಧ್ವಜ ಪೂಜೆ ಹೇಗೆ ಮಾಡುತ್ತೀರಾ ನೋಡುತ್ತೇವೆ' ಎಂದರು.

ಬಿಗುವಿನ ವಾತಾವರಣ: ಪುರಭವನದ ಆವರಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಆಯೋಜಕರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿಯೂ ನಡೆಯಿತು. ಬೆಟ್ಟಕ್ಕೆ ತೆರಳಲು ಅವಕಾಶ ಕೊಡುವಂತೆ ಮುಖಂಡರು ಪಟ್ಟು ಹಿಡಿದರು. ಕರೆದೊಯ್ಯುವುದಾಗಿ ವಾಹನ ಹತ್ತಿಸಿ ಕೊಂಡ ಪೊಲೀಸರು, ಅವರನ್ನು ಅಶೋಕಪುರಂನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿದ್ದ ಕಾರ್ಯಕ್ರಮಕ್ಕೆ ಕರೆದೊಯ್ದರು! ಅಲ್ಲಿ, ಮುಖಂಡರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು.

ಪುರಭವನ ಹೊರತುಪಡಿಸಿ ಚಾಮುಂಡಿಬೆಟ್ಟ ಸೇರಿದಂತೆ ನಗರದ ಎಲ್ಲಿಯೂ ಮಹಿಷ ದಸರಾ ಪರ ಅಥವಾ ವಿರೋಧ ಕಾರ್ಯಕ್ರಮಕ್ಕೆ ಪೊಲೀಸರು ಅವಕಾಶ ಕೊಡಲಿಲ್ಲ; ನಿಷೇಧಾಜ್ಞೆಯನ್ನೂ ಜಾರಿಗೊಳಿಸಲಾಗಿತ್ತು. ಚಾಮುಂಡಿ ಬೆಟ್ಟಕ್ಕೆ ಪ್ರವಾಸಿಗರು ಹಾಗೂ ಇತರರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು.

'ರಾತ್ರಿ 7.30ರ ಸುಮಾರಿಗೆ ಜಿಲ್ಲಾಡಳಿತದ ಅನುಮತಿ ಮೇರೆಗೆ ನಾನು, ಜ್ಞಾನಪ್ರಕಾಶ ಸ್ವಾಮೀಜಿ ಹಾಗೂ ಕಲ್ಲಹಳ್ಳಿ ಕುಮಾರ್ ಬೆಟ್ಟಕ್ಕೆ ತೆರಳಿ ಮಹಿಷ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದೆವು' ಎಂದು ಪುರುಷೋತ್ತಮ್ ನಂತರದಲ್ಲಿ ತಿಳಿಸಿದರು.



ಮೈಸೂರಿನ ಪುರಭವನ ಆವರಣದಲ್ಲಿ ಮಹಿಷ ದಸರಾ ಆಚರಣೆ ಸಮಿತಿಯು ಭಾನುವಾರ ಆಯೋಜಿಸಿದ್ದ 'ಮಹಿಷ ಮಂಡಲೋತ್ಸವ'ದಲ್ಲಿ ಬೋಧಿರತ್ನ ಭಂತೇಜಿ, ಜ್ಞಾನಪ್ರಕಾಶ ಸ್ವಾಮೀಜಿ ಅವರು ಬುದ್ಧ, ಮಹಿಷ, ಅಂಬೇಡ್ಕರ್ ಪ್ರತಿಮೆಗಳಿಗೆ ಪುಷ್ಪಾರ್ಚನೆ ಮಾಡಿದರು. ಕೃಷ್ಣಮೂರ್ತಿ ಚಮರಂ, ಪ್ರೊ.ಕೆ.ಎಸ್.ಭಗವಾನ್, ಪುರುಷೋತ್ತಮ್, ಪ್ರೊ.ಪಿ.ವಿ.ನಂಜರಾಜ ಅರಸ್, ಸಿದ್ದಸ್ವಾಮಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಸೋಮವಾರ, ಸೆಪ್ಟೆಂಬರ್ 30, 2024 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಗ್ರಾಫಿಟಿ ಉತ್ಸವ

ಅಂತರರಾಷ್ಟ್ರೀಯ ಗ್ರಾಫಿಟಿ ಉತ್ಸವ 'ಕಿಂಗ್ ರಾಯಲ್ ಪ್ರೈಡ್ 2024'ರ ಅಂಗವಾಗಿ ಇಂಡೊನೇಷ್ಯಾದ ಜಕಾರ್ತದಲ್ಲಿ ಕಲಾವಿದರೊಬ್ಬರು ಗೋಡೆಯಲ್ಲಿ ಚಿತ್ರ ಬಿಡಿಸಿದರು



'ಒಂದು ದೇಶ–ಒಂದು ಚುನಾವಣೆ' ಅನುಷ್ಠಾನಕ್ಕೆ ದಾರಿ • ಕೇಂದ್ರ ಸರ್ಕಾರದ ಯೋಚನೆ

ಸಂವಿಧಾನ ತಿದ್ದುಪಡಿಗೆ 3 ಮಸೂದೆ

ನವದೆಹಲಿ (ಪಿಟಿಐ): ತನ್ನ ಪ್ರಮುಖ ಕಾರ್ಯಸೂಚಿಯಾದ 'ಒಂದು ದೇಶ–ಒಂದು ಚುನಾವಣೆ' ಅನುಷ್ಠಾನಕ್ಕೆ ದಾರಿ ಮಾಡಿಕೊಡುವ ಮೂರು ಮಸೂದೆಗಳ ಮಂಡನೆಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮುಂದಾಗಿದೆ.

ಈ ಯೋಜನೆ ಅನುಷ್ಠಾನಕ್ಕಾಗಿ ಸಂವಿಧಾನದ ತಿದ್ದುಪಡಿಗೆ ಸಂಬಂಧಿಸಿದ ಎರಡು ಮಸೂದೆಗಳು ಸೇರಿ ಒಟ್ಟು ಮೂರು ಮಸೂದೆಗಳನ್ನು ಮಂಡಿಸಲು ನಿರ್ಧರಿಸಿದೆ.

ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಉನ್ನತ ಸಮಿತಿ ಏಕಕಾಲಕ್ಕೆ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿ ಸಲ್ಲಿಸಿದ್ದ ಶಿಫಾರಸುಗಳಿಗೆ ಇತ್ತೀಚೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿತ್ತು. ಈಗ, ಶಿಫಾರಸುಗಳ ಜಾರಿಗೆ ಮುಂದಡಿ ಇಟ್ಟಿದೆ.

ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳೊಂದಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವುದು ಉದ್ದೇಶಿತ ಮಸೂದೆಗಳಲ್ಲೊಂದು. ಈ ಮಸೂದೆ ಅಂಗೀಕಾರಕ್ಕೆ ಕನಿಷ್ಠ ಶೇ 50ರಷ್ಟು ರಾಜ್ಯಗಳ ಒಪ್ಪಿಗೆ ಅಗತ್ಯ.

ಉದ್ದೇಶಿತ ತಿದ್ದುಪಡಿಗಳು

ಮೊದಲನೇ ತಿದ್ದುಪಡಿ

ಈ ತಿದ್ದುಪಡಿಯು ಲೋಕಸಭೆ ಮತ್ತು ವಿಧಾನಸಭೆಗಳ ಚುನಾವಣೆಗಳನ್ನು ಏಕಕಾಲಕ್ಕೆ ನಡೆಸುವುದಕ್ಕೆ ಸಂಬಂಧಿಸಿದ್ದಾಗಿದೆ.

ಸಂವಿಧಾನದ 82ಎ ವಿಧಿಗೆ ಉಪ ಕಲಂ (1) ಸೇರ್ಪಡೆ ಮಾಡುವುದನ್ನು ಈ ಉದ್ದೇಶಿತ ಮಸೂದೆ ಒಳಗೊಂಡಿದೆ. ಈ ಉಪ ಕಲಂ (1), ಯೋಜನೆ ಯಾವಾಗಿನಿಂದ ಜಾರಿಗೆ ಬಂದಿದೆ ಎಂಬುದನ್ನು ವಿವರಿಸುತ್ತದೆ.

ಅದೇ ರೀತಿ, ಲೋಕಸಭೆ ಮತ್ತು ವಿಧಾನಸಭೆಗಳ ಅವಧಿಯು ಯಾವಾಗ ಅಂತ್ಯಗೊಳ್ಳಲಿದೆ ಎಂಬುದನ್ನು ಸೂಚಿಸುವ ಉಪ ಕಲಂ (2) ಅನ್ನು ಕೂಡ ಈ ವಿಧಿಗೆ ಸೇರ್ಪಡೆ ಮಾಡುವ ಅಂಶವನ್ನೂ ಒಳಗೊಂಡಿದೆ. ಈ ಎರಡು ಉಪ ಕಲಂಗಳ ಸೇರ್ಪಡೆ ಕುರಿತು ಉನ್ನತ ಸಮಿತಿ ಶಿಫಾರಸು ಮಾಡಿದೆ.

5ನೇ ಪುಟ ನೋಡಿ

ಎರಡನೇ ತಿದ್ದುಪಡಿ

ಈ ತಿದ್ದುಪಡಿಯು ರಾಜ್ಯಗಳ ವಿದ್ಯಮಾನಗಳಿಗೆ ಸಂಬಂಧಿಸಿದ್ದರಿಂದ, ಇದಕ್ಕೆ ಕನಿಷ್ಠ ಶೇ 50ರಷ್ಟು ರಾಜ್ಯಗಳ ಒಪ್ಪಿಗೆ ಅಗತ್ಯ ಎಂದು ಸಮಿತಿ ಹೇಳಿದೆ.

ಈ ತಿದ್ದುಪಡಿಯು, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದಕ್ಕಾಗಿ, ಚುನಾವಣಾ ಆಯೋಗವು (ಇ.ಸಿ) ರಾಜ್ಯ ಚುನಾವಣಾ ಆಯೋಗಗಳ (ಎಸ್.ಇ.ಸಿ) ಜೊತೆ ಸಮಾಲೋಚನೆ ನಡೆಸಿ, ಮತದಾರರ ಪಟ್ಟಿಗಳನ್ನು ಸಿದ್ಧಪಡಿಸುವ ಅವಕಾಶಗಳಿಗೆ ಸಂಬಂಧಿಸಿದ್ದಾಗಿದೆ.

ಸಾಂವಿಧಾನಿಕವಾಗಿ ಕೇಂದ್ರ ಚುನಾವಣಾ ಆಯೋಗ (ಇ.ಸಿ) ಮತ್ತು ರಾಜ್ಯ ಚುನಾವಣಾ ಆಯೋಗಗಳು (ಎಸ್.ಇ.ಸಿ) ಪ್ರತ್ಯೇಕ ಸಂಸ್ಥೆಗಳಾಗಿವೆ.

5ನೇ ಪುಟ ನೋಡಿ

ಮೂರನೇ ತಿದ್ದುಪಡಿ

ಇದು ಸಾಮಾನ್ಯ ತಿದ್ದುಪಡಿಯಾಗಿದ್ದು, ಈ ಮಸೂದೆಯು ಕೇಂದ್ರಾಡಳಿತ ಪ್ರದೇಶಗಳಾದ ಪುದುಚೇರಿ, ದೆಹಲಿ ಹಾಗೂ ಜಮ್ಮು–ಕಾಶ್ಮೀರ ವಿಧಾನಸಭೆಗಳಿಗೆ ಸಂಬಂಧಿಸಿದ್ದಾಗಿದೆ. ಈ ಮೂರು ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳ ಅವಧಿಗಳನ್ನು ಇತರ ರಾಜ್ಯಗಳ ಶಾಸನಸಭೆಗಳು ಮತ್ತು ಲೋಕಸಭೆಯ ಅವಧಿಯೊಂದಿಗೆ ಸಮೀಕರಿಸುವುದಾಗಿದೆ.

ಇದಕ್ಕಾಗಿ, ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ ಕಾಯ್ದೆ–1991, ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ ಕಾಯ್ದೆ–1963 ಹಾಗೂ ಜಮ್ಮು–ಕಾಶ್ಮೀರ ಪುನರ್‌ರಚನೆ ಕಾಯ್ದೆ–2019ಕ್ಕೆ ತಿದ್ದುಪಡಿ ತರುವುದು ಅಗತ್ಯ.

5ನೇ ಪುಟ ನೋಡಿ

ಬಿಸಿಸಿಐ ಶ್ರೇಷ್ಠತಾ ಕೇಂದ್ರ ಲೋಕಾರ್ಪಣೆ



ಬೆಂಗಳೂರು: ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕೆಂಪೇಗೌಡ ವಿಮಾನ ನಿಲ್ದಾಣದ ಸಮೀಪ ನಿರ್ಮಿಸಿರುವ ಶ್ರೇಷ್ಠತಾ ಕೇಂದ್ರವನ್ನು ಲೋಕಾರ್ಪಣೆ ಮಾಡಿತು. ಇದರೊಂದಿಗೆ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯನ್ನು (ಎನ್‌ಸಿಎ) 'ಬಿಸಿಸಿಐ ಶ್ರೇಷ್ಠತಾ ಕೇಂದ್ರ'ವೆಂದು ಮರುನಾಮಕರಣ ಮಾಡಲಾಯಿತು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದ ಎನ್‌ಸಿಎ ಈಗ ಶ್ರೇಷ್ಠತಾ ಕೇಂದ್ರಕ್ಕೆ ಸ್ಥಳಾಂತರವಾಗಲಿದೆ.

40 ಎಕರೆ ಜಾಗದಲ್ಲಿ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ವಿವಿಧ ಸೌಲಭ್ಯಗಳ ಅಭಿವೃದ್ಧಿ ಮಾಡಲಾಗಿದೆ

3 ಇಲ್ಲಿರುವ ಉನ್ನತ ದರ್ಜೆಯ ಕ್ರೀಡಾಂಗಣಗಳ ಸಂಖ್ಯೆ

45 ನೆಟ್ಸ್ ಅಭ್ಯಾಸಕ್ಕಾಗಿ ಇಲ್ಲಿರುವ ಪಿಚ್‌ಗಳು

ಲೋಕಾಯುಕ್ತ ಎಸ್‌ಐಟಿ ಎಡಿಜಿಪಿ ಪತ್ರಕ್ಕೆ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಕಿಡಿ

'ನಾನು ಆರೋಪಿ, ಆತ ಸರಣಿ ಕೃತ್ಯದ ಅಪರಾಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಆರೋಪಿಯೇ ಇರಬಹುದು. ಆದರೆ, ಲೋಕಾಯುಕ್ತ ಎಸ್‌ಐಟಿ ಎಡಿಜಿಪಿ ಎಂ.ಚಂದ್ರಶೇಖರ್ ಸರಣಿ ಅಪರಾಧಗಳನ್ನು ಎಸಗಿರುವ, ಅಧಿಕಾರಿ ಸೋಗಿನಲ್ಲಿರುವ ಕ್ರಿಮಿನಲ್. ಆ ಅಧಿಕಾರಿಯ ವಿರುದ್ಧ ನೂರಾರು ಕೋಟಿ ಭ್ರಷ್ಟಾಚಾರದ ಆರೋಪವಿದೆ' ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

'ಎಂ.ಚಂದ್ರಶೇಖರ್ ಒಬ್ಬ ಭ್ರಷ್ಟ ಅಧಿಕಾರಿ' ಎಂದು ಕುಮಾರಸ್ವಾಮಿ ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದರು. ಶನಿವಾರ ಸಂಜೆಯೇ ಈ ಬಗ್ಗೆ ಚಂದ್ರಶೇಖರ್ ತಮ್ಮ ಸಹೋದ್ಯೋಗಿಗಳಿಗೆ ಪತ್ರ ಬರೆದಿದ್ದರು.

5ನೇ ಪುಟ ನೋಡಿ

> ಅಧಿಕಾರಿ ಗೌರವಯುತವಾಗಿ ಪ್ರತಿಕ್ರಿಯೆ ನೀಡಬಹುದಿತ್ತು. ಕೇಂದ್ರ ಸಚಿವರಿಗೆ ಏಕವಚನದಲ್ಲಿ, ಹಂದಿ ಎಂಬ ಪದ ಬಳಸಿದ್ದು ಅಕ್ಷಮ್ಯ
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> ಅಧಿಕಾರಿ ಬರ್ನಾರ್ಡ್ ಶಾ ಮಾತನ್ನು ಉಲ್ಲೇಖಿಸಿದ್ದಾರೆ. ಕುಮಾರಸ್ವಾಮಿ ಅವರನ್ನು ಹಂದಿ ಎಂದು ಕರೆದಿಲ್ಲ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ


'ಕೆಪಿಸಿಸಿಯಿಂದಲೇ ಪತ್ರ'



'ಹೀಗೆಯೇ ಪತ್ರ ಬರಿ ಎಂದು ಹೇಳಿಕೊಟ್ಟು, ಅಧಿಕಾರಿಯಿಂದ ಪತ್ರ ಬರೆಸಲಾಗಿದೆ. ಆ ಪತ್ರ ಬರೆಸಿದವರು ಯಾರು ಎಂಬುದು ನನಗೆ ಗೊತ್ತಾಗಿದೆ. ಕೆಪಿಸಿಸಿ ಕಚೇರಿಯಿಂದಲೇ ಪತ್ರ ಬಹಿರಂಗವಾಗಿದೆ ಎಂಬುದೂ ಗೊತ್ತು' ಎಂದು ಕುಮಾರಸ್ವಾಮಿ ಹೇಳಿದ್ದಾರೆ.

'ಆ ಅಧಿಕಾರಿ ಶನಿವಾರ ಸಂಜೆ ಎಲ್ಲಿಗೆ ಹೋಗಿದ್ದರು, ಅಲ್ಲಿ ಎಷ್ಟೊತ್ತು ಇದ್ದರು ಮತ್ತು ಯಾರನ್ನೆಲ್ಲಾ ಭೇಟಿಯಾದರು, ಆ ಪತ್ರ ಬರೆ ಎಂದು ಹೇಳಿದ ವ್ಯಕ್ತಿ ಯಾರು ಮತ್ತು ಆಗ ಅಲ್ಲಿದ್ದ ಇನ್ನೊಬ್ಬ ವ್ಯಕ್ತಿ ಯಾರು, ಆ ಪತ್ರವನ್ನು ಬರೆದುಕೊಟ್ಟ ಕಾನೂನು ಪಂಡಿತ ಯಾರು ಎಂಬ ಮಾಹಿತಿ ಇದೆ' ಎಂದಿದ್ದಾರೆ.

'ಕೆಪಿಸಿಸಿಗೂ ಎಡಿಜಿಪಿಗೂ ಏನು ಸಂಬಂಧ?'



'ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಏನು ಮಾತನಾಡುತ್ತಾರೆ ಎಂಬುದು ಅವರಿಗೇ ಗೊತ್ತಿರುವುದಿಲ್ಲ. ಕೆಪಿಸಿಸಿ ಕಚೇರಿಗೂ, ಲೋಕಾಯುಕ್ತ ಎಡಿಜಿಪಿ ಚಂದ್ರಶೇಖರ್ ಅವರಿಗೂ ಏನು ಸಂಬಂಧ' ಎಂದು ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಪ್ರಶ್ನಿಸಿದರು.

ಕುಮಾರಸ್ವಾಮಿ ಅವರು ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಚಂದ್ರಶೇಖರ್ ಅವರನ್ನು ನಾನು ನೋಡಿಯೂ ಇಲ್ಲ. ಮಾತನಾಡಿಯೂ ಇಲ್ಲ. ನನಗೆ ಅವರು ಸಿಕ್ಕಿಲ್ಲ. ನನಗೆ ಅವರು ಗೊತ್ತೇ ಇಲ್ಲ' ಎಂದರು. 'ಕುಮಾರಸ್ವಾಮಿ ಅವರು ಕೆಪಿಸಿಸಿಯನ್ನು ನೆನೆಸಿಕೊಂಡರೆ ನಾನು ಏನು ತಾನೇ ಮಾತನಾಡಲು ಸಾಧ್ಯ' ಎಂದು ವ್ಯಂಗ್ಯವಾಡಿದರು.

ಮರು ಪರೀಕ್ಷೆ, ತಪ್ಪಿತಸ್ಥರ ಮೇಲೆ ಕ್ರಮಕ್ಕೆ ಹಿಂದೇಟು

33 ಲೋಪ: ಕೆಪಿಎಸ್‌ಸಿ ಮೌನ

• ರಾಜೇಶ್ ರೈ ಚಟ್ಲ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಆಗಸ್ಟ್ 27ರಂದು ನಡೆದ ಪೂರ್ವಭಾವಿ ಪರೀಕ್ಷೆಯ ಕನ್ನಡ ಪ್ರಶ್ನೆಪತ್ರಿಕೆಗಳಲ್ಲಿ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿದ ಪ್ರಶ್ನೆಗಳ ಪೈಕಿ ಒಟ್ಟು 33ರಲ್ಲಿ ಭಾಷಾಂತರ ವ್ಯತ್ಯಾಸ ಆಗಿದೆ ಎಂದು ಮೂವರು ವಿಷಯ ತಜ್ಞರ ಸಮಿತಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ವರದಿ ನೀಡಿದೆ.

ಪ್ರಶ್ನೆ ಪತ್ರಿಕೆ 1 ಮತ್ತು 2ರಲ್ಲಿ ಆಗಿರುವ ಲೋಪಗಳ ಕುರಿತು ತಜ್ಞರ ಸಮಿತಿ ವಿವರವಾದ ವರದಿ ನೀಡಿದ್ದರೂ ಈ ಲೋಪ ಎಸಗಿದ ಅಧಿಕಾರಿ, ನೌಕರರ ಮೇಲೆ ಕ್ರಮ ತೆಗೆದುಕೊಳ್ಳಲು ಮತ್ತು ಮರು ಪರೀಕ್ಷೆಗೆ ದಿನಾಂಕ ಘೋಷಿಸಲು ಕೆಪಿಎಸ್‌ಸಿ ಹಿಂದೇಟು ಹಾಕುತ್ತಿದೆ. ಕೆಪಿಎಸ್‌ಸಿಯ ಈ ನಡೆ ಪುನಃ ಪರೀಕ್ಷೆ ಬರೆಯಲು ಕಾಯುತ್ತಿರುವ 2 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಹತಾಶರನ್ನಾಗಿ ಮಾಡಿದೆ.

ವಿಷಯ ತಜ್ಞರ ವರದಿಯಲ್ಲಿ ಏನಿದೆ?

ಪತ್ರಿಕೆ 1ರಲ್ಲಿ ಒಟ್ಟು 18 ಪ್ರಶ್ನೆಗಳಲ್ಲಿ ಭಾಷಾಂತರದಲ್ಲಿ ಎಡವಟ್ಟು ಆಗಿದೆ. ಆದರೆ, ಈ ಪೈಕಿ ಭಾಷಾಂತರದ ತಪ್ಪಿನಿಂದಾಗಿ ಉತ್ತರಿಸಲು ಆಯ್ಕೆಗಳು ಇಲ್ಲದ ಕಾರಣ 2 ಪ್ರಶ್ನೆಗಳಿಗೆ ಕೃಪಾಂಕ ನೀಡುವ ಅವಶ್ಯಕತೆಯಿದೆ. ಅದರಲ್ಲೂ ಒಂದು ಪ್ರಶ್ನೆಯಲ್ಲಿ ಪದಗಳ ತಪ್ಪು ಬಳಕೆಯ ಕಾರಣಕ್ಕೆ ಕೃಪಾಂಕ ನೀಡಬಹುದು. ಕೆಲವು ಪ್ರಶ್ನೆಗಳಲ್ಲಿ ಭಾಷಾಂತರದಲ್ಲಿ ವ್ಯತ್ಯಾಸ ಆಗಿದ್ದರೂ ಕೀ ಉತ್ತರದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಎಂದು ತಿಳಿಸಿದೆ. ಇನ್ನು ಪತ್ರಿಕೆ 2ರಲ್ಲಿ 15 ಪ್ರಶ್ನೆಗಳಲ್ಲಿ ಭಾಷಾಂತರದಲ್ಲಿ ವ್ಯತ್ಯಾಸವಾಗಿದೆ. ಅದರಲ್ಲಿ ನಾಲ್ಕು ಪ್ರಶ್ನೆಗಳಿಗೆ ಕೃಪಾಂಕ ನೀಡಬೇಕು. ಉಳಿದ ಪ್ರಶ್ನೆಗಳಿಗೆ ಭಾಷಾಂತರದ ಸಮಸ್ಯೆ ಇದ್ದರೂ ಕೀ ಉತ್ತರದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಹೀಗಾಗಿ ಕೃಪಾಂಕ ನೀಡಬೇಕಿಲ್ಲ ಎಂದು ವರದಿಯಲ್ಲಿದೆ.

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳು

ವೃಂದ	ಒಟ್ಟು ಹುದ್ದೆಗಳು
ಗ್ರೂಪ್ 'ಎ'	159
ಗ್ರೂಪ್ 'ಬಿ'	225
ಒಟ್ಟು	384

2,10,916 ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು

1,31,885 (ಶೇ 62.52) ಆ. 27ರಂದು ಪರೀಕ್ಷೆಗೆ ಹಾಜರು

5ನೇ ಪುಟ ನೋಡಿ

ಚುನಾವಣಾ ಪ್ರಚಾರದ ವೇಳೆ ಅಸ್ವಸ್ಥಗೊಂಡ ಮಲ್ಲಿಕಾರ್ಜುನ ಖರ್ಗೆ • ಚೇತರಿಸಿಕೊಂಡು ಪ್ರಧಾನಿ ವಿರುದ್ಧ ವಾಗ್ದಾಳಿ

‘ಮೋದಿ ಇಳಿಸುವವರೆಗೂ ನಾನು ಸಾಯಲ್ಲ’

ಪ್ರಜಾವಾಣಿ ವಾರ್ತೆ/ಪಿಟಿಐ

ಜಸರೋತಾ/ಜಮ್ಮು/ಶ್ರೀನಗರ (ಪಿಟಿಐ): ‘ನನಗೆ ಈಗ 83 ವರ್ಷ. ನಾನು ಇಷ್ಟು ಬೇಗ ಸಾಯುವುದಿಲ್ಲ. ಪ್ರಧಾನಿ ಮೋದಿ ಅವರನ್ನು ಅಧಿಕಾರದಿಂದ ಇಳಿಸುವವರೆಗೂ ಬದುಕಿರುತ್ತೇನೆ. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ತಂದುಕೊಡಲು ಹೋರಾಡುತ್ತೇನೆ. ನಿಮಗೆ ಕಿವಿಯಾಗುತ್ತೇನೆ. ನಿಮಗಾಗಿ ಹೋರಾಡುತ್ತೇನೆ...’

ಹೀಗೆಂದವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ. ಜಸರೋತಾದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಭಾನುವಾರ ಮಾತನಾಡುತ್ತಿದ್ದ ವೇಳೆ ಅವರ ಆರೋಗ್ಯದಲ್ಲಿ ಏರುಪೇರಾಯಿತು. ತಲೆ ತಿರುಗಿ, ಮಾತು ತೊದಲಿತು.

ಖರ್ಗೆ ಅವರ ಅಂಗರಕ್ಷಕರು ಹಾಗೂ ವೇದಿಕೆಯಲ್ಲಿದ್ದ ಪಕ್ಷದ ನಾಯಕರು ಅವರನ್ನು ಕುರ್ಚಿಯಲ್ಲಿ ಕೂರಿಸಿದರು. ತಕ್ಷಣವೇ ವೈದ್ಯರ ತಂಡವು ಖರ್ಗೆ ಅವರಿಗೆ ಚಿಕಿತ್ಸೆ ನೀಡಿತು. ಪ್ರಥಮ ಚಿಕಿತ್ಸೆ ಬಳಿಕ ತುಸು ಸುಧಾರಿಸಿಕೊಂಡ ಖರ್ಗೆ ಅವರು ಮಾತು ಮುಂದುವರಿಸಿ, ಮೇಲಿನ ಮಾತುಗಳನ್ನಾಡಿದರು. ‘ನನಗೆ ಮಾತನಾಡುವ ಇಚ್ಛೆ ಇದೆ. ಆದರೆ, ತಲೆ ತಿರುಗುತ್ತಿರುವ ಕಾರಣ ಕುಳಿತುಕೊಳ್ಳಬೇಕಾಯಿತು. ದಯಮಾಡಿ ಕ್ಷಮಿಸಿ’ ಎಂದೂ ಹೇಳಿದರು.



ಜಮ್ಮುವಿನಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿದ್ದ ವೇಳೆ ಅಸ್ವಸ್ಥರಾದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಚೇತರಿಸಿಕೊಂಡು ಮಾತು ಮುಂದುವರಿಸಿದರು —ಪಿಟಿಐ ಚಿತ್ರ

‘ಆರಾಮವಾಗಿದ್ದಾರೆ’

‘ಮಲ್ಲಿಕಾರ್ಜುನ ಖರ್ಗೆ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ವೈದ್ಯರು ಅವರಿಗೆ ಚಿಕಿತ್ಸೆ ನೀಡಿದ್ದಾರೆ. ಅವರಿಗೆ ರಕ್ತದೊತ್ತಡ ತುಸು ಹೆಚ್ಚಾಗಿದೆ. ಆದರೆ, ಈಗ ಅವರ ಆರೋಗ್ಯ ಸ್ಥಿರವಾಗಿದೆ’ ಎಂದು ಖರ್ಗೆ ಅವರ ಮಗ ಹಾಗೂ ಕರ್ನಾಟಕದ ಐಟಿ ಸಚಿವ ಪ್ರಿಯಾಂಕ್ ಖರ್ಗೆ, ‘ಎಕ್ಸ್’ನಲ್ಲಿ ಪೋಸ್ಟ್ ಹಾಕಿದ್ದಾರೆ.

ಕರೆ: ಪ್ರಧಾನಿ ನರೇಂದ್ರ ಮೋದಿಯವರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕರೆ ಮಾಡಿ ಆರೋಗ್ಯ ವಿಚಾರಿಸಿದರು. ಅವರು ಶೀಘ್ರ ಗುಣಮುಖರಾಗಲೆಂದು ಹಾರೈಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ವಿರುದ್ಧ ‘ಎಕ್ಸ್’ನಲ್ಲಿ ಲೇವಡಿ

‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಉಗ್ರವಾದವು ಹೆಚ್ಚಾಗುತ್ತದೆ– ಸರ್ ಖರ್ಗೆ. ಅವರಿಗೆ ಆರೋಗ್ಯ ಎಷ್ಟೊಂದು ಸರಿ ಇಲ್ಲವೆಂದರೆ, ಅವರು ಸತ್ಯ ಮಾತನಾಡುತ್ತಿದ್ದಾರೆ. ಅವರನ್ನು ಮನೆಯಲ್ಲಿ ಕೂರಿಸಿ ಆರಾಮ ನೀಡಿ. ಪ್ರಚಾರ ಮಾಡುವಂತೆ ಅವರನ್ನು ಗಾಂಧಿ–ನೆಹರೂ ಕುಟುಂಬವು ಒತ್ತಾಯಿಸುತ್ತಿದೆ ಎಂದೆನಿಸುತ್ತದೆ. ಹದಗೆಟ್ಟ ಆರೋಗ್ಯ ಸ್ಥಿತಿಯನ್ನು ಬಳಸಿಕೊಂಡು ಅನುಕಂಪದಲ್ಲಿ ಮತ ಪಡೆಯಬಹುದು ಎಂಬುದು ಆ ಕುಟುಂಬದದ ಯೋಜನೆ ಇರಬಹುದು’ ಎನ್ನುವ ಪೋಸ್ಟ್‌ವೊಂದು ‘ಎಕ್ಸ್’ನಲ್ಲಿ ಹರಿದಾಡುತ್ತಿದೆ. ಈ ಪೋಸ್ಟ್‌ಗೆ 7,758 ಲೈಕ್ಸ್ ಬಂದಿದ್ದು, 2,374 ಮಂದಿ ಇದನ್ನು ರೀಪೋಸ್ಟ್ ಮಾಡಿದ್ದಾರೆ.



ಭಾಷಣ ಮಾಡುವ ವೇಳೆಯಲ್ಲಿಯೇ ಮಲ್ಲಿಕಾರ್ಜುನ ಖರ್ಗೆ ಅವರ ಆರೋಗ್ಯ ಹದಗೆಟ್ಟಿತು. ಆದರೂ ಅವರು ತಮ್ಮ ಭಾಷಣವನ್ನು ನಿಲ್ಲಿಸಲಿಲ್ಲ. ಎಚ್ಚರ ತಪ್ಪಿದ ಸ್ಥಿತಿಯಲ್ಲಿಯೇ ಸಣ್ಣ ದನಿಯಲ್ಲಿ ತೊದಲುತ್ತಾ ಮಾತು ಮುಂದುವರಿಸಿದ ವೇಳೆ, ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಉಗ್ರವಾದ ಹೆಚ್ಚಾಗುತ್ತದೆ’ ಎಂದಿದ್ದಾರೆ. ಈ ವಿಡಿಯೊವನ್ನು ಹಂಚಿಕೊಂಡು, ಹಲವರು ಮೇಲಿನಂತೆ ಪೋಸ್ಟ್ ಮಾಡುತ್ತಿದ್ದಾರೆ.

ಈ ಪೋಸ್ಟ್‌ಗೆ ಪ್ರತಿಕ್ರಿಯೆಗಳೂ ಬಂದಿದ್ದು, ‘ಖರ್ಗೆ ಅವರ ಅನಾರೋಗ್ಯವು ಕಾಂಗ್ರೆಸ್‌ನ ಹೊಸ ಅನುಕಂಪದ ಅಸ್ತ್ರ’ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಕೆಲವರು, ‘ಏನೇ ಮಾಡಿದರು ಸತ್ಯವು ಬಾಯಿಗೆ ಬಂದೇ ಬಿಡುತ್ತದೆ’ ಎಂದಿದ್ದಾರೆ. ‘ಎಷ್ಟೇ ಮುಚ್ಚಿಟ್ಟರು ಸತ್ಯ ಹೊರಗೆ ಬಂದೇ ಬರುತ್ತದೆ. ಕೊನೆಗೂ ಕಾಂಗ್ರೆಸ್ ಅಧ್ಯಕ್ಷರ ಬಾಯಿಯಿಂದ ಸತ್ಯ ಹೊರಬಂದಿದೆ’, ‘ಇಂದು ಕಟು ಸತ್ಯವನ್ನು ಹೊರಹಾಕುವ ಮೂಲಕ ಖರ್ಗೆ ಅವರು ನಮ್ಮೆಲ್ಲರ ಹೃದಯ ಗೆದ್ದಿದ್ದಾರೆ’ ಎಂಬೆಲ್ಲಾ ಪೋಸ್ಟ್‌ಗಳನ್ನು ಮಾಡುತ್ತಿದ್ದಾರೆ.

ಗೆಲುವು ಯಾರಿಗೆ?

ತೀವ್ರ ಜಿದ್ದಾಜಿದ್ದಿನಿಂದ ಕೂಡಿದ್ದ ಜಮ್ಮು ಮತ್ತು ಕಾಶ್ಮೀರದ ಚುನಾವಣಾ ಪ್ರಚಾರವು ಭಾನುವಾರ ಅಂತ್ಯಗೊಂಡಿದೆ. ಅಕ್ಟೋಬರ್ 1ರಂದು ಕೊನೇ ಹಂತದ ಮತದಾನ ನಡೆಯಲಿದೆ. ಮೂರು ದಶಕಗಳ ಬಳಿಕ, ಈ ಬಾರಿಯ ಚುನಾವಣಾ ಪ್ರಕ್ರಿಯೆಯಲ್ಲಿ ಯಾವುದೇ ದಾಳಿ ಅಥವಾ ಅಹಿತಕರ ಘಟನೆ ನಡೆದಿಲ್ಲ.

ಕಾಶ್ಮೀರದ ಮಟ್ಟಿಗೆ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಹಾಗೂ ಪಿಡಿಪಿ ಮಧ್ಯೆಯೇ ನೇರ ಹಣಾಹಣಿ ಇದೆ. ಸಣ್ಣಪುಟ್ಟ ಪಕ್ಷಗಳು ಕಣದಲ್ಲಿ ಇದ್ದರೂ ಈ ಎರಡು ಪಕ್ಷಗಳ ಪ್ರಾಬಲ್ಯವೇ ಹೆಚ್ಚು. ಪಿಡಿಪಿಯು ‘ಬಿಜೆಪಿ ವಿರೋಧ’ಕ್ಕೆ ತನ್ನ ಪ್ರಚಾರದಲ್ಲಿ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ.

ಇತ್ತ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು, ‘ಪಿಡಿಪಿಯು 2014ರಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿತ್ತು. ರಾಜ್ಯ ಸ್ಥಾನಮಾನ ರದ್ದಾದ ಬಳಿಕ ಈಗ ಬಿಜೆಪಿ ವಿರುದ್ಧ ಪ್ರಚಾರ ಮಾಡುತ್ತಿದೆ. ಇದು ಜನರಿಗೆ ಎಸಗಿದ ದ್ರೋಹ’ ಎನ್ನುವ ವಾದವನ್ನು ಮುಂದಿಟ್ಟುಕೊಂಡು ಪ್ರಚಾರ ನಡೆಸಿದೆ. ಆದರೆ ಎರಡೂ ಪಕ್ಷಗಳು, ರಾಜ್ಯ ಸ್ಥಾನಮಾನವನ್ನು ತಂದು ಕೊಡುವುದಾಗಿ ಭರವಸೆ ನೀಡಿವೆ.

ಜಮ್ಮುವಿನಲ್ಲಿ, ಬಿಜೆಪಿ ಹಾಗೂ ಕಾಂಗ್ರೆಸ್ ಮಧ್ಯೆಯೇ ನೇರ ಹಣಾಹಣಿ ಇದೆ. ರಾಜ್ಯ ಸ್ಥಾನಮಾನ ಮರಳಿ ನೀಡುತ್ತೇವೆ ಎನ್ನುವುದಕ್ಕೇ ಹೆಚ್ಚು ಒತ್ತು ನೀಡಿ ಕಾಂಗ್ರೆಸ್ ಪ್ರಚಾರ ನಡೆಸಿದೆ. ಕುಟುಂಬ ರಾಜಕಾರಣ, ಫಾರೂಕ್ ಅಬ್ದುಲ್ಲಾ–ಒಮರ್ ಅಬ್ದುಲ್ಲಾ ಹಾಗೂ ನೆಹರೂ–ಗಾಂಧಿ ಕುಟುಂಬವನ್ನು ಗುರಿಯಾಗಿಸಿ ಬಿಜೆಪಿ ಪ್ರಚಾರ ನಡೆಸಿದೆ. ಅಕ್ಟೋಬರ್ 8ರಂದು ಫಲಿತಾಂಶ ಹೊರಬೀಳಲಿದೆ.

ಸುದ್ದಿ 2 ನಿಮಿಷ

ಪ್ರಮುಖ ತಯಾರಿಕಾ ಕೇಂದ್ರವಾಗಿ ಬೆಳೆದ ಭಾರತ: ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ‘ಭಾರತವು ಪ್ರಮುಖ ತಯಾರಿಕಾ ಕೇಂದ್ರವಾಗಿ ಬೆಳೆದಿದ್ದು, ದೇಶದಲ್ಲಿರುವ ಯುವ ಶಕ್ತಿಯಿಂದಾಗಿ ಇಡೀ ಜಗತ್ತು ನಮ್ಮತ್ತ ನೋಡುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ತಮ್ಮ ಸರ್ಕಾರದ ಪ್ರಮುಖ ಉಪಕ್ರಮಗಳಲ್ಲಿ ಒಂದಾಗಿರುವ ‘ಮೇಕ್ ಇನ್ ಇಂಡಿಯಾ’ವು 10 ವರ್ಷಗಳನ್ನು ಪೂರೈಸಿರುವುದನ್ನು ಅವರು ‘ಮನ್ ಕಿ ಬಾತ್’ (ಮನದ ಮಾತು) ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದರು.

‘ಮೇಕ್ ಇನ್ ಇಂಡಿಯಾ ಪರಿಕಲ್ಪನೆಯಿಂದ ಇಂದು ಬಡವರು, ಮಧ್ಯಮ ವರ್ಗದವರು ಮತ್ತು ಎಂಎಸ್‌ಎಂಇಗಳು ಹೆಚ್ಚಿನ ಪ್ರಯೋಜನ ಪಡೆಯುತ್ತಿರುವುದನ್ನು ನೋಡಲು ಸಂತಸವಾಗುತ್ತಿದೆ. ಪ್ರತಿ ವರ್ಗದ ಜನರಿಗೂ ತಮ್ಮ ಸಾಮರ್ಥ್ಯವನ್ನು ತೋರಿಸುವ ಅವಕಾಶವನ್ನು ಇದು ಕಲ್ಪಿಸಿಕೊಟ್ಟಿದೆ’ ಎಂದರು.

‘ಭಾರತವು ವಿವಿಧ ಉತ್ಪನ್ನಗಳ ತಯಾರಿಕೆಯ ಪ್ರಮುಖ ಕೇಂದ್ರವಾಗಿ ಬೆಳೆದಿದೆ. ಆಟೊಮೊಬೈಲ್, ಜವಳಿ, ವಿಮಾನಯಾನ, ಎಲೆಕ್ಟ್ರಾನಿಕ್ಸ್ ಅಥವಾ ರಕ್ಷಣಾ ಕ್ಷೇತ್ರ... ಪ್ರತಿಯೊಂದು ವಲಯದಲ್ಲೂ ರಫ್ತಿನ ಪ್ರಮಾಣ ನಿರಂತರ ಏರುಗತಿಯಲ್ಲಿದೆ’ ಎಂದರು.

‘ಸಕಾರಾತ್ಮಕ ಮಾಹಿತಿ ಬಯಸುವ ಜನ’: ದೇಶದ ಜನರು ಸಕಾರಾತ್ಮಕ ಬೆಳವಣಿಗೆಗಳು ಹಾಗೂ ಸ್ಫೂರ್ತಿದಾಯಕ ವಿಷಯಗಳನ್ನು ಇಷ್ಟಪಡುವರು ಎಂಬುದನ್ನು ‘ಮನ್ ಕಿ ಬಾತ್’ ಕಾರ್ಯಕ್ರಮ ತೋರಿಸಿಕೊಟ್ಟಿದೆ ಎಂದು ಹೇಳಿದರು.

‘ಮನದ ಮಾತು’ 10 ವರ್ಷಗಳನ್ನು ಪೂರೈಸಿರುವುದು ತಮಗೆ ‘ಭಾವನಾತ್ಮಕ’ ವಿಚಾರ ಎಂದು ಬಣ್ಣಿಸಿದ ಪ್ರಧಾನಿ, ‘ಈ ಕಾರ್ಯಕ್ರಮವು ಭಾರತದ ಚೈತನ್ಯವನ್ನು ಸಂಭ್ರಮಿಸುವ ಮತ್ತು ದೇಶದ ಒಗ್ಗಟ್ಟಿನ ಶಕ್ತಿಯನ್ನು ಪ್ರದರ್ಶಿಸುವ ವಿಶಿಷ್ಟ ವೇದಿಕೆಯಾಗಿದೆ’ ಎಂದರು.



ಮರಳು ಅಕ್ರಮ ಗಣಿಗಾರಿಕೆ ಅರಣ್ಯಾಧಿಕಾರಿಗಳ ಮೇಲೆ ದಾಳಿ

ಛತರ್‌ಪುರ (ಮಧ್ಯಪ್ರದೇಶ) (ಪಿಟಿಐ): ಮರಳು ಅಕ್ರಮ ಗಣಿಗಾರಿಕೆ ಮಾಡುತ್ತಿದ್ದ ವ್ಯಕ್ತಿಗಳು ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ದಾಳಿ ನಡೆಸಿ, ಜಪ್ತಿ ಮಾಡಲಾಗಿದ್ದ ವಸ್ತುಗಳನ್ನು ಕೊಂಡೊಯ್ದ ಘಟನೆ ಮಧ್ಯಪ್ರದೇಶದ ಛತರ್‌ಪುರ ಜಿಲ್ಲೆಯಲ್ಲಿ ನಡೆದಿದೆ.

‘ಅರಣ್ಯ ವ್ಯಾಪ್ತಿಯಲ್ಲಿರುವ ನದಿಯಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ಗಣಿಗಾರಿಕೆ ಮೇಲೆ ಶನಿವಾರ ದಾಳಿ ನಡೆಸಿ, ಎರಡು ಟ್ರ್ಯಾಕ್ಟರ್ ಟ್ರಾಲಿಗಳನ್ನು ಜಪ್ತಿ ಮಾಡಲಾಗಿತ್ತು. ಈ ವೇಳೆ ಶೈಲೇಂದ್ರ ಸಿಂಗ್ ಎಂಬಾತ ಅಧಿಕಾರಿಗಳ ಮೇಲೆ ಟ್ರ್ಯಾಕ್ಟರ್ ಟ್ರಾಲಿ ಹರಿಸಲು ಯತ್ನಿಸಿದ್ದಾನೆ’ ಎಂದು ಅರಣ್ಯಾಧಿಕಾರಿ ರಾಜೇಂದ್ರ ಪಸ್ತಾರ್ ಅವರು ಭಾನುವಾರ ತಿಳಿಸಿದ್ದಾರೆ.

‘ಅರಣ್ಯ ಇಲಾಖೆಯ ವಾಹನಕ್ಕೂ ಹಾನಿಯಾಗಿದ್ದು, ಆರೋಪಿಗಳು ತಮ್ಮ ವಾಹನದೊಂದಿಗೆ ಸ್ಥಳದಿಂದ ಪರಾರಿಯಾಗಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

‘ಇ.ಡಿ. ಅಧಿಕಾರಿಗಳಿಂದ ಹಣ ಸುಲಿಗೆ’

ಮುಂಬೈ (ಪಿಟಿಐ): ‘ಬಿಜೆಪಿಯ ನಾಯಕರೊಂದಿಗೆ ಸೇರಿಕೊಂಡಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಕೆಲವು ಅಧಿಕಾರಿಗಳು ಜನರಿಂದ ಹಣದ ಸುಲಿಗೆ ಮಾಡುತ್ತಿದ್ದು, ನಮ್ಮ ಮೈತ್ರಿಕೂಟ ಅಧಿಕಾರಕ್ಕೆ ಬಂದ ಬಳಿಕ ಈ ಅಕ್ರಮವು ಬಹಿರಂಗಗೊಳ್ಳಲಿದೆ’ ಎಂದು ಶಿವಸೇನಾ (ಉದ್ಧವ್ ಬಣ) ಮುಖಂಡ ಸಂಜಯ್ ರಾವುತ್ ಹೇಳಿದರು.



ಸಂಜಯ್ ರಾವುತ್

‘ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಗೆ ಇಂತಹ ಅಕ್ರಮಗಳಲ್ಲಿ ತೊಡಗಿಸಿಕೊಂಡಿರುವವರ ಬಗ್ಗೆ ಗೊತ್ತಿದೆ’ ಎಂದು ಭಾನುವಾರ ದೂರಿದರು.

‘ಜಿತು ನವ್ಲಾನಿ ಅವರು ಹಣ ಸುಲಿಗೆಯಲ್ಲಿ ಇ.ಡಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಈ ಹಿಂದಿನ ಮಹಾ ವಿಕಾಸ ಆಘಾಡಿ (ಎಂವಿಎ) ಸರ್ಕಾರವು ಇವರ ವಿರುದ್ಧ ಕಾನೂನು ಕ್ರಮ ಕೈಗೊಂಡಿತ್ತು. ಆದರೆ, ಈಗ ಅವರಿಗೆ ಇ.ಡಿ ಮತ್ತು ಫಡಣವೀಸ್ ಬೆಂಬಲವಿದೆ’ ಎಂದು ರಾವುತ್ ಆರೋಪಿಸಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆಗ್ರಹ

‘ನಿರ್ಮಲಾ ರಾಜೀನಾಮೆ ನೀಡಲಿ’

ನವದೆಹಲಿ (ಪಿಟಿಐ): ‘ಚುನಾವಣಾ ಬಾಂಡ್ ಮೂಲಕ ಉದ್ಯಮಿಗಳಿಂದ ₹8 ಸಾವಿರ ಕೋಟಿ ಸುಲಿಗೆ ಮಾಡಿದ್ದಾರೆ’ ಎಂದು ಆರೋಪಿಸಿ ನೀಡಿದ್ದ ದೂರಿನ ಅನ್ವಯ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಬೆಂಗಳೂರಿನಲ್ಲಿ ಎಫ್‌ಐಆರ್ ದಾಖಲಾಗಿದ್ದು ಅವರು ಕೂಡಲೇ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಭಾನುವಾರ ಒತ್ತಾಯಿಸಿದೆ.

ಈ ಬಗ್ಗೆ ಕಾಂಗ್ರೆಸ್ ವಕ್ತಾರ, ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಇಲ್ಲಿ ಪತ್ರಿಕಾಗೋಷ್ಠಿ ನಡೆಸಿದರು.

‘ತನ್ನ ಅಸ್ತಿತ್ವ ಉಳಿಸಿಕೊಳ್ಳುವುದಕ್ಕಾಗಿ ಬಿಜೆಪಿಯು ಪ್ರಜಾಪ್ರಭುತ್ವವನ್ನು ಕಡೆಗಣಿಸುತ್ತಿದೆ. ನಿರ್ಮಲಾ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರ್ಟ್ ನಿರ್ದೇಶಿಸಿರುವುದು, ಬಿಜೆಪಿಯವರ ಅಸಲಿಯತ್ತನ್ನು ಅನಾವರಣ ಮಾಡಿದೆ. ಇಬಿಎಸ್ (ಎಲೆಕ್ಟೋರಲ್ ಬಾಂಡ್ ಸ್ಕೀಮ್) ಎಂದರೆ, ಎಕ್ಸ್‌ಟಾರ್ಷನ್ ಬಿಜೆಪಿ ಸ್ಕೀಮ್ (ಬಿಜೆಪಿಯ ಸುಲಿಗೆ ಯೋಜನೆ)’ ಎಂದು ಅಭಿಷೇಕ್ ಮನು ಸಿಂಘ್ವಿ ಲೇವಡಿ ಮಾಡಿದರು.

‘ಚುನಾವಣಾ ಬಾಂಡ್‌ಗಳ ಮೂಲಕ ನಾಲ್ಕು ರೀತಿಯಲ್ಲಿ ಸುಲಿಗೆಗೆ ಪಿತೂರಿ ಮಾಡಲಾಗಿತ್ತು. ಅವುಗಳೆಂದರೆ:

> ಈ ಪ್ರಕರಣದ ನೈತಿಕ ಹೊಣೆ ಹೊತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು
> **ಜೈರಾಮ್ ರಮೇಶ್**, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

> ಸಚಿವೆ ಒಬ್ಬರೇ ಹೀಗೆ ಮಾಡಲು ಸಾಧ್ಯವಿಲ್ಲ. ಇಲ್ಲಿ ನಂ.1, ನಂ.2 ಯಾರು ಮತ್ತು ಯಾರ ನಿರ್ದೇಶನದಲ್ಲಿ ಈ ರೀತಿ ಸುಲಿಗೆ ಮಾಡಲಾಗಿದೆ ಎಂಬುದು ನಮಗೆ ತಿಳಿದಿದೆ
> **ಅಭಿಷೇಕ್ ಮನು ಸಿಂಘ್ವಿ**, ಕಾಂಗ್ರೆಸ್ ವಕ್ತಾರ

ಅನುಕೂಲ ಮಾಡಿಕೊಡುವ ಮುಂಚೆ ಮಾಡುವ ಸುಲಿಗೆ, ಅನುಕೂಲ ಮಾಡಿಕೊಟ್ಟ ಮೇಲೆ ಮಾಡುವ ಸುಲಿಗೆ, ಇ.ಡಿ, ಐ.ಟಿ ದಾಳಿಗೂ ಮುನ್ನ ಮಾಡುವ ಸುಲಿಗೆ, ನಕಲಿ ಕಂಪನಿಗಳ ಮೂಲಕ ಮಾಡುವ ಸುಲಿಗೆ. ಹೀಗೆ ವಿವಿಧ ರೀತಿಯಲ್ಲಿ ಉದ್ಯಮಿಗಳಿಂದ ಸುಲಿಗೆ ಮಾಡಲಾಗಿದೆ’ ಎಂದು ಜೈರಾಮ್ ರಮೇಶ್ ಹೇಳಿದರು.

‘ಚುನಾವಣಾ ಬಾಂಡ್ ಯೋಜನೆಯನ್ನು ಸುಪ್ರೀಂ ಕೋರ್ಟ್ ರದ್ದು ಮಾಡುವ ಮುನ್ನ, ಆ ಯೋಜನೆ ಜಾರಿಯಾಗಿ ಅದಾಗಲೇ ಆರು ವರ್ಷಗಳ ಕಳೆದಿತ್ತು. ಇದರಲ್ಲಿ ಐದು ವರ್ಷ ನಿರ್ಮಲಾ ಅವರೇ ಹಣಕಾಸು ಸಚಿವೆಯಾಗಿದ್ದರು. ಆದ್ದರಿಂದ ದೊಡ್ಡ ಮಟ್ಟದ ಚುನಾವಣಾ ಬಾಂಡ್ ಖರೀದಿಯು ನಿರ್ಮಲಾ ಅವರ ಅವಧಿಯಲ್ಲಿಯೇ ಆಗಿವೆ’ ಎಂದೂ ರಮೇಶ್ ತಿಳಿಸಿದರು.

‘ಈ ಯೋಜನೆ ಕುರಿತು ಸುಪ್ರೀಂ ಕೋರ್ಟ್ ನೇತೃತ್ವದಲ್ಲಿ ಎಸ್‌ಐಟಿ ತನಿಖೆ ನಡೆಯಬೇಕು ಎಂದು ನಾವು ಬಹಳ ಹಿಂದಿನಿಂದಲೇ ಆಗ್ರಹಿಸಿದ್ದೇವೆ. ಈಗಲೂ ಇದೇ ರೀತಿಯ ಒತ್ತಾಯ ಮಾಡುತ್ತೇವೆ. ಬೆಂಗಳೂರಿನಲ್ಲಿ ದಾಖಲಾದ ದೂರಿಗೂ, ದೂರುದಾರರಿಗೆ ನಮ್ಮ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲ’ ಎಂದರು.

‘ಬಿಜೆಪಿಯನ್ನು ತಡೆದವರು ಯಾರು?’

‘ಬಿಜೆಪಿಯು 10 ವರ್ಷಗಳಿಂದ ಅಧಿಕಾರದಲ್ಲಿದೆ. ಈ ಅವಧಿಯಲ್ಲಿ ಪಾಕ್ ಆಕ್ರಮಿತ ಕಾಶ್ಮೀರವನ್ನು (ಪಿಒಕೆ) ಭಾರತಕ್ಕೆ ಸೇರಿಸುವುದರಿಂದ ಅವರನ್ನು ತಡೆದದ್ದು ಯಾರು’ ಎಂದು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಭಾನುವಾರ ಪ್ರಶ್ನಿಸಿದರು.



ಸಚಿನ್ ಪೈಲಟ್

‘ಜಮ್ಮು ಮತ್ತು ಕಾಶ್ಮೀರದಲ್ಲಿ ಬಿಜೆಪಿಯು ಅಧಿಕಾರಕ್ಕೇರಿದ ಕೂಡಲೇ ಪಿಒಕೆಯು ಭಾರತದ ಭಾಗವಾಗಲಿದೆ’ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಈಚೆಗೆ ನೀಡಿದ್ದ ಹೇಳಿಕೆಗೆ ಅವರು ತಿರುಗೇಟು ಕೊಟ್ಟರು.

‘ಒಂದು ರಾಜ್ಯದ ಮುಖ್ಯಮಂತ್ರಿಯೊಬ್ಬರು ಚುನಾವಣೆಯ ಸಮಯದಲ್ಲಿ ಏಕೆ ಇಂತಹ ಹೇಳಿಕೆ ನೀಡುತ್ತಿದ್ದಾರೆ ಎಂಬುದು ನನಗೆ ಆಶ್ಚರ್ಯ ಉಂಟುಮಾಡಿದೆ. ಪೂರ್ಣ ಬಹುಮತದೊಂದಿಗೆ ಕೇಂದ್ರದಲ್ಲಿ 10 ವರ್ಷ ಅಧಿಕಾರದಲ್ಲಿದ್ದ ಸಮಯದಲ್ಲಿ ಅವರು ಈ ಕೆಲಸವನ್ನು ಏಕೆ ಮಾಡಿಲ್ಲ? ಪಿಒಕೆಯನ್ನು ಭಾರತಕ್ಕೆ ಸೇರಿಸುವ ಕುರಿತ ಸರ್ವಾನುಮತದ ನಿರ್ಣಯವನ್ನು ಸಂಸತ್ತು ಮೊದಲ ಬಾರಿಗೆ 1994ರಲ್ಲಿ ಅಂಗೀಕರಿಸಿತ್ತು. ಆಗ ಕಾಂಗ್ರೆಸ್ ಅಧಿಕಾರದಲ್ಲಿತ್ತು ಎಂಬುದನ್ನು ನಿಮಗೆ ನೆನಪಿಸುತ್ತಿದ್ದೇನೆ’ ಎಂದರು.

‘ಪ್ರತಿ ಬಾರಿಯೂ ಚುನಾವಣೆಯ ಸಮಯದಲ್ಲಿ ಬಿಜೆಪಿಯು ಜನರ ಭಾವನೆಗಳನ್ನು ಕೆರಳಿಸಲು ಪ್ರಯತ್ನಿಸುತ್ತದೆ ’ ಎಂದು ಆರೋಪಿಸಿದರು.

ಸಿಪಿಎಂ ಹಂಗಾಮಿ ಸಂಯೋಜಕರಾಗಿ ಪ್ರಕಾಶ್ ಕಾರಟ್

ನವದೆಹಲಿ: ಸಿಪಿಎಂನ ಹಂಗಾಮಿ ಸಂಯೋಜಕರನ್ನಾಗಿ ಪ್ರಕಾಶ್ ಕಾರಟ್ ಅವರನ್ನು ನೇಮಕ ಮಾಡಲಾಗಿದೆ.



ಮುಂದಿನ ಏಪ್ರಿಲ್‌ನಲ್ಲಿ ಮದುರೈನಲ್ಲಿ ನಡೆಯಲಿರುವ ಪಕ್ಷದ ಸಭೆಯಲ್ಲಿ ನೂತನ ಪ್ರಧಾನ ಕಾರ್ಯದರ್ಶಿಯನ್ನು ಆಯ್ಕೆ ಮಾಡಲಾಗುತ್ತದೆ. ಅಲ್ಲಿಯವರೆಗೆ ಪ್ರಕಾಶ್ ಕಾರಟ್ ಅವರು ಪಕ್ಷವನ್ನು ಮುನ್ನಡೆಸಲಿದ್ದಾರೆ.

ಸೀತಾರಾಮ್ ಯೆಚೂರಿ ನಿಧನದಿಂದಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆ ಖಾಲಿ ಇದೆ. ಸದ್ಯಕ್ಕೆ ಪ್ರಕಾಶ್ ಕಾರಟ್ ಪಾಲಿಟ್ ಬ್ಯೂರೊ ಮತ್ತು ಕೇಂದ್ರ ಸಮಿತಿಯ ನಡುವೆ ಸಂಯೋಜಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ.



ಮ್ಯಾರಥಾನ್ ಹಿಮಾಚಲ ಪ್ರದೇಶ ಪೊಲೀಸ್ ಇಲಾಖೆ ಶಿಮ್ಲಾದಲ್ಲಿ ಆಯೋಜಿಸಿದ್ದ ಹಾಫ್ ಮ್ಯಾರಥಾನ್‌ನಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು – ಪಿಟಿಐ ಚಿತ್ರ

ಕಚೇರಿಯಲ್ಲಿ ಮೃತಪಟ್ಟ ಐ.ಟಿ ಉದ್ಯೋಗಿ

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ನಾಗ್ಪುರದಲ್ಲಿನ ಐಟಿ ಕಂಪನಿಯ ಉದ್ಯೋಗಿಯೊಬ್ಬರು ಕಚೇರಿಯ ಶೌಚಾಲಯದಲ್ಲೇ ಹೃದಯ ಸ್ತಂಭನದಿಂದ ಶುಕ್ರವಾರ ಮೃತಪಟ್ಟಿದ್ದಾರೆ.

ಎಚ್‌ಸಿಎಲ್ ಟೆಕ್ನಾಲಜಿಸ್‌ನ ಹಿರಿಯ ವಿಶ್ಲೇಷಕ ನಿತಿನ್ ಎಡ್ವಿನ್ ಮೈಕೆಲ್ (40) ಮೃತ ವ್ಯಕ್ತಿ.

ಕಂಪನಿಯ ಕಚೇರಿಯಲ್ಲಿನ ಶೌಚಾಲಯದಲ್ಲಿ ಸಂಜೆ 7 ಗಂಟೆ ಸುಮಾರಿಗೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದುದನ್ನು ಕಂಡ ಸಹೋದ್ಯೋಗಿಗಳು ನಾಗ್ಪುರದಲ್ಲಿನ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (ಏಮ್ಸ್) ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ಪರೀಕ್ಷೆ ನಡೆಸಿದ ವೈದ್ಯರು ಮೈಕೆಲ್ ಮೃತಪಟ್ಟಿರುವುದನ್ನು ಖಚಿತಪಡಿಸಿದ್ದಾರೆ.

10 ದಿನಗಳಲ್ಲಿ ಸೀಟು ಹಂಚಿಕೆ ಪೂರ್ಣ

ಬಾರಾಮತಿ/ಮುಂಬೈ (ಪಿಟಿಐ): ‘ಮಹಾ ವಿಕಾಸ ಆಘಾಡಿ’ ಮೈತ್ರಿಕೂಟವು ಮುಂದಿನ 8–10 ದಿನಗಳಲ್ಲಿ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಿದೆ’ ಎಂದು ಎನ್‌ಸಿಪಿ (ಶರದ್ ಬಣ) ಮುಖ್ಯಸ್ಥ ಶರದ್ ಪವಾರ್ ಭಾನುವಾರ ಹೇಳಿದರು.



ಶರದ್ ಪವಾರ್

ಇಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ಪ್ರತಿ ತಾಲ್ಲೂಕಿನಲ್ಲಿಯೂ ಸಮೀಕ್ಷೆ ನಡೆಸಲಾಗುತ್ತಿದೆ. ಯಾರಿಗೆ ಗೆಲ್ಲುವ ಸಾಮರ್ಥ್ಯ ಇದೆಯೊ ಅವರಿಗೆ ಮಾತ್ರವೇ ಟಿಕೆಟ್ ನೀಡಲಾಗುವುದು’ ಎಂದರು.

‘ಲೋಕಸಭೆ ಚುನಾವಣೆಯಲ್ಲಿ ಕೆಲಸ ಮಾಡಿದ ರೀತಿಯಲ್ಲಿಯೇ ಮೈತ್ರಿಕೂಟದ ಇತರ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ವಿಧಾನಸಭೆ ಚುನಾವಣೆಯಲ್ಲಿಯೂ ಗೆಲುವಿಗೆ ಶ್ರಮಿಸಬೇಕು. ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಏನೇ ಆದರೂ ನಾವು ಗೆಲ್ಲಲೇಬೇಕಿದೆ’ ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

‘ನಮ್ಮನ್ನು ಬಿಟ್ಟು ಬೇರೆ ಪಕ್ಷಗಳಿಗೆ ಹೋದವರಲ್ಲಿ ಯಾರೂ ಈ ಬಾರಿ ಗೆಲುವುದಿಲ್ಲ. ಪಕ್ಷದ ನಾಯಕರು ಏನೇ ಮಾಡಲಿ, ಕಾರ್ಯಕರ್ತರು ಮಾತ್ರ ಜನರೊಂದಿಗೆ ನಿಲ್ಲಬೇಕು’ ಎಂದರು.

ಸೀಟು ಹಂಚಿಕೆ ಕುರಿತು ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಕೂಡ ಮಾತನಾಡಿದ್ದು, ‘ಸೆಪ್ಟೆಂಬರ್ 30 ಹಾಗೂ ಅಕ್ಟೋಬರ್ 1ರಂದು ಸೀಟು ಹಂಚಿಕೆ ಕುರಿತಂತೆ ‘ಮಹಾ ವಿಕಾಸ ಆಘಾಡಿ’ಯ ಪಕ್ಷಗಳು ಸಭೆ ಸೇರಲಿದ್ದು, ಸೀಟು ಹಂಚಿಕೆ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು’ ಎಂದಿದ್ದಾರೆ.

‘ಜಾರ್ಖಂಡ್: ಎಲ್‌ಜೆಪಿ ಸ್ಪರ್ಧೆ’

ರಾಂಚಿ (ಪಿಟಿಐ): ‘ಜಾರ್ಖಂಡ್‌ನ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷವು ಸ್ಪರ್ಧಿಸಲಿದೆ. ಆದರೆ, ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧಿಸಬೇಕೇ ಅಥವಾ ಮೈತ್ರಿ ಮಾಡಿಕೊಳ್ಳಬೇಕೇ ಎನ್ನುವುದರ ಕುರಿತು ಚರ್ಚಿಸಲಾಗುತ್ತಿದೆ’ ಎಂದು ಎಲ್‌ಜೆಪಿ ಅಧ್ಯಕ್ಷ, ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಹೇಳಿದರು.

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಜಾರ್ಖಂಡ್, ನಾನು ಹುಟ್ಟಿದಾಗ ಬಿಹಾರದ್ದೇ ಭಾಗವಾಗಿತ್ತು. ಈ ಭೂಮಿಯು ನನ್ನ ತಂದೆಯವರ ಕಾರ್ಯಸ್ಥಾನವಾಗಿತ್ತು. ರಾಜ್ಯದಲ್ಲಿ ಪಕ್ಷಕ್ಕೆ ಗಟ್ಟಿ ನೆಲೆಯಿದೆ. ಇದೇ ಕಾರಣಕ್ಕಾಗಿಯೇ, ಪಕ್ಷವು ಜಾರ್ಖಂಡ್ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂದು ನಿರ್ಧರಿಸಿದೆ’ ಎಂದರು.

ಫರೀದಾಬಾದ್ ಬಿಜೆಪಿ ಸೇರಿದ ಎಎಪಿ ಅಭ್ಯರ್ಥಿ

ಚಂಡೀಗಢ (ಪಿಟಿಐ): ಫರೀದಾಬಾದ್ ಕ್ಷೇತ್ರದ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಪ್ರವೇಶ್ ಮೆಹ್ತಾ ಅವರು ಆಡಳಿತಾರೂಢ ಬಿಜೆಪಿಗೆ ಸೇರ್ಪಡೆಯಾಗಿದ್ದು, ಹರಿಯಾಣದಲ್ಲಿ ಎಎಪಿಗೆ ಹಿನ್ನಡೆಯಾಗಿದೆ.

ಫರೀದಾಬಾದ್‌ನ ಬಿಜೆಪಿ ಸಂಸದರೂ ಆಗಿರುವ ಕೇಂದ್ರ ಸಚಿವ ಕೃಷ್ಣಪಾಲ್ ಗುರ್ಜಾರ್ ಮತ್ತು ಕ್ಷೇತ್ರದ ಅಭ್ಯರ್ಥಿ ವಿಪುಲ್ ಗೋಯಲ್ ಸಮ್ಮುಖದಲ್ಲಿ ಮೆಹ್ತಾ ಕಮಲ ಪಾಳಯಕ್ಕೆ ಸೇರಿದರು.

‘ಬೃಹತ್ ಸಾರ್ವಜನಿಕ ಸಭೆಯಲ್ಲಿ ಮೆಹ್ತಾ ಅವರು ತಮ್ಮ ಬೆಂಬಲಿಗರೊಂದಿಗೆ ಬಿಜೆಪಿಗೆ ಸೇರಿದರು. ಇದರಿಂದ ಪಕ್ಷದ ಬಲ ಹೆಚ್ಚಿದೆ. ಗೆಲುವು ನಿಶ್ಚಿತವಾಗಿದೆ. ಭಾರತೀಯ ಜನತಾ ಪಕ್ಷದ ಕುಟುಂಬಕ್ಕೆ ಅವರನ್ನು ಸ್ವಾಗತಿಸುವೆ’ ಎಂದು ಗೋಯಲ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸೆಂಥಿಲ್ ಮತ್ತೆ ಸಂಪುಟಕ್ಕೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಚೆನ್ನೈ: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮೂರು ದಿನಗಳ ಹಿಂದೆಯಷ್ಟೇ ಸುಪ್ರೀಂ ಕೋರ್ಟ್‌ನಿಂದ ಜಾಮೀನು ಪಡೆದಿರುವ ಡಿಎಂಕೆ ನಾಯಕ ವಿ. ಸೆಂಥಿಲ್ ಬಾಲಾಜಿ ಅವರು ತಮಿಳುನಾಡಿನ ಸಚಿವರಾಗಿ ಭಾನುವಾರ ಪ್ರಮಾಣವಚನ ಸ್ವೀಕರಿಸಿದರು.

ರಾಜಭವನದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ ಅಧಿಕಾರ ಮತ್ತು ಗೋಪ್ಯತೆಯ ಪ್ರಮಾಣವಚನ ಬೋಧಿಸಿದರು.

ಸೆಂಥಿಲ್ ಅವರಲ್ಲದೆ ಡಿಎಂಕೆ ಶಾಸಕರಾದ ಆರ್.ರಾಜೇಂದ್ರನ್, ಗೋವಿ ಚೆಝಿಯಾನ್ ಮತ್ತು ಎಸ್.ಎಂ.ನಾಸರ್ ಅವರೂ ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಖಾತೆ ಹಂಚಿಕೆ: ಸೆಂಥಿಲ್ ಅವರು ಬಂಧನಕ್ಕೂ ಮುನ್ನ ಹೊಂದಿದ್ದ ಇಂಧನ ಮತ್ತು ಅಬಕಾರಿ ಖಾತೆಗಳನ್ನೇ ಅವರಿಗೆ ಮುಖ್ಯಮಂತ್ರಿ ಸ್ಟಾಲಿನ್ ಹಂಚಿಕೆ ಮಾಡಿದ್ದಾರೆ. ರಾಜೇಂದ್ರನ್ ಅವರಿಗೆ ಪ್ರವಾಸೋದ್ಯಮ, ಚೆಝಿಯಾನ್ ಅವರಿಗೆ ಉನ್ನತ ಶಿಕ್ಷಣ, ನಾಸರ್ ಅವರಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಖಾತೆಗಳನ್ನು ವಹಿಸಲಾಗಿದೆ.

ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಉಪ ಮುಖ್ಯಮಂತ್ರಿಯಾಗಿ ಶನಿವಾರ ರಾತ್ರಿ ಬಡ್ತಿ ಪಡೆದ ಉದಯನಿಧಿ ಸ್ಟಾಲಿನ್ ಮತ್ತು ಇತರ ಕೆಲ ಸಚಿವರು ಸಮಾರಂಭದಲ್ಲಿ ಹಾಜರಿದ್ದರು.

ಸಂಪುಟದಿಂದ ಮೂವರು ಹೊರಕ್ಕೆ: ಟಿ. ಮನೋ ತಂಗರಾಜ್, ಕೆ.ಎಸ್. ಮಸ್ತಾನ್ ಮತ್ತು ಕೆ. ರಾಮಚಂದ್ರನ್ ಅವರನ್ನು ಶನಿವಾರ ಸಚಿವ ಸ್ಥಾನದಿಂದ ಕೈಬಿಟ್ಟ ಸ್ಟಾಲಿನ್, ಸೆಂಥಿಲ್ ಸೇರಿ ನಾಲ್ವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಶಿಫಾರಸು ಮಾಡಿದ್ದರು.

ನೌಕರಿಗಾಗಿ ಹಣ ಹಗರಣದ ಜೊತೆ ನಂಟು ಹೊಂದಿದ್ದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಸೆಂಥಿಲ್ ಬಾಲಾಜಿ ಅವರನ್ನು ಇ.ಡಿ ಕಳೆದ ವರ್ಷ ಜೂನ್ 14ರಂದು ಬಂಧಿಸಿತ್ತು.

ಮುಸ್ಲಿಂ ಪ್ರಾಬಲ್ಯ ಇರುವ ಕ್ಷೇತ್ರದಲ್ಲಿ ಮೆರವಣಿಗೆ

ಜೈಪುರ: ಹಿಂದೂ ರಾಷ್ಟ್ರ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಜೈಪುರ: ರಾಜಸ್ಥಾನದ ಬಿಜೆಪಿ ಶಾಸಕರೂ ಆಗಿರುವ ಸ್ವಯಂ ಘೋಷಿತ ಕೇಸರಿ ಸಂತ ಬಾಲಮುಕುಂದ ಆಚಾರ್ಯ ಅವರು ನಗರದಲ್ಲಿ ಮುಸ್ಲಿಂ ಸಮುದಾಯದವರು ಹೆಚ್ಚಿರುವ ಪ್ರದೇಶದ ಮಾರ್ಗಗಳಲ್ಲಿ ಹಿಂದೂ ರಾಷ್ಟ್ರ ರ‍್ಯಾಲಿ ನಡೆಸಿದರು.

ಕೋಮು ಸೌಹಾರ್ದಕ್ಕೆ ಧಕ್ಕೆ ಬರುವುದರಿಂದ ಮತ್ತು ಸಮಾಜದಲ್ಲಿ ಬಿರುಕುಗಳು ಮೂಡುವ ಸಾಧ್ಯತೆ ಇರುವುದರಿಂದ ಈ ರ‍್ಯಾಲಿಗೆ ಅನುಮತಿ ನೀಡಬಾರದು ಎಂದು ಕೆಲ ಸಾಮಾಜಿಕ ಕಾರ್ಯಕರ್ತರು ಮನವಿ ಮಾಡಿದ್ದರೂ, ಪೊಲೀಸರು ರ‍್ಯಾಲಿಗೆ ಅನುಮತಿ ನೀಡಿದ್ದರು.

ನಗರದ ರಾಮನವಮಿ ಮಾರ್ಗದಿಂದ ಸಾಗಿದ ಹಿಂದೂಗಳ ರ‍್ಯಾಲಿಯು ಮುಸ್ಲಿಂ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ರಾಮಗಂಜ್, ಚೋಟಿ ಚೌಪರ್ ಸೇರಿದಂತೆ ಇತರ ಪ್ರದೇಶಗಳಲ್ಲಿ ಸಾಗಿತು. ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದ ನೂರಾರು ಜನರು ಕೇಸರಿ ಪೇಟ ಧರಿಸಿ, ಕೇಸರಿ ಧ್ವಜ ಹಾಗೂ ರಾಷ್ಟ್ರ ಧ್ವಜಗಳನ್ನು ಹಿಡಿದು ‘ಜೈ ಶ್ರೀರಾಮ್’ ಘೋಷಣೆಗಳೊಂದಿಗೆ ಹೆಜ್ಜೆ ಹಾಕಿದರು. ನೂರಾರು ಜನರು ಬೈಕ್‌ಗಳಲ್ಲಿಯೂ ಸಾಗಿದರು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಬಿಗಿ ಬಂದೋಬಸ್ತ್ ಕಲ್ಪಿಸಿ, ತೀವ್ರ ನಿಗಾ ಇರಿಸಿದ್ದರು.

ಉದ್ವಿಗ್ನ ಪರಿಸ್ಥಿತಿ ತಪ್ಪಿಸಲು ಪೊಲೀಸರು ಮುಸ್ಲಿಂ ಸಮುದಾಯದವರಿಗೆ ಮನೆಯೊಳಗೇ ಇರುವಂತೆ ಸಲಹೆ ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

ಭಾರತವನ್ನು ಹಿಂದೂ ಬಹುಸಂಖ್ಯಾತ ರಾಷ್ಟ್ರ ಮಾಡುವ ಕುರಿತು ಮತ್ತು ಸನಾತನ ಧರ್ಮದ ಪರ ಹೆಚ್ಚಾಗಿ ಪ್ರತಿಪಾದನೆ ಮಾಡುವ ಆಚಾರ್ಯ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹವಾ ಮಹಲ್ ವಿಧಾನಸಭಾ ಕ್ಷೇತ್ರದಿಂದ ಕೇವಲ 900ಕ್ಕೂ ಹೆಚ್ಚು ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ.



ಜೈಪುರದಲ್ಲಿ ಮುಸ್ಲಿಂ ಸಮುದಾಯದವರು ಹೆಚ್ಚಿರುವ ಪ್ರದೇಶಗಳಲ್ಲಿ ಭಾನುವಾರ ಹಿಂದೂ ರಾಷ್ಟ್ರ ರ‍್ಯಾಲಿ ನಡೆಯಿತು – ಪಿಟಿಐ ಚಿತ್ರ

ಲೆಬನಾನ್: ದಾಳಿ ಮುಂದುವರಿಸಿದ ಇಸ್ರೇಲ್ ಸೇನೆ, 24 ಸಾವು

ಹಿಜ್ಬುಲ್ಲಾದ ಮತ್ತೊಬ್ಬ ನಾಯಕನ ಹತ್ಯೆ

ಜೆರುಸಲೇಂ/ಬೈರೂತ್ (ಎಪಿ/ಎಎಫ್‌ಪಿ): ಹಿಜ್ಬುಲ್ಲಾ ಬಂಡುಕೋರ ಸಂಘಟನೆಯ ಮತ್ತೊಬ್ಬ ಪ್ರಮುಖ ನಾಯಕನನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಭಾನುವಾರ ಹೇಳಿದೆ.

‘ಹಿಜ್ಬುಲ್ಲಾದ ಸೆಂಟ್ರಲ್ ಕೌನ್ಸಿಲ್‌ನ ಉಪ ಮುಖ್ಯಸ್ಥ ನಬೀಲ್ ಕೌಕ್ ಅವರನ್ನು ಶನಿವಾರ ನಡೆಸಿದ ವಾಯುದಾಳಿಯಲ್ಲಿ ಹೊಡೆದು ಹಾಕಿದ್ದೇವೆ’ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಆದರೆ ನಬೀಲ್ ಅವರ ಸಾವಿನ ಬಗ್ಗೆ ಹಿಜ್ಬುಲ್ಲಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಲೆಬನಾನ್ ರಾಜಧಾನಿ ಬೈರೂತ್‌ನ ದಕ್ಷಿಣ ಭಾಗದ ಮೇಲೆ ಭಾನುವಾರ ಇಸ್ರೇಲ್ ಸೇನೆ ‘ನಿಖರ ದಾಳಿ’ ನಡೆಸಿದೆ. ‘ಈ ದಾಳಿಯಲ್ಲಿ ಒಟ್ಟು 24 ಮಂದಿ ಮೃತಪಟ್ಟಿದ್ದಾರೆ’ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ.

ಹಿಜ್ಬುಲ್ಲಾ ಕೂಡಾ ಉತ್ತರ ಇಸ್ರೇಲ್ ಮೇಲೆ ನೂರಾರು ರಾಕೆಟ್‌ಗಳು ಮತ್ತು ಕ್ಷಿಪಣಿಗಳನ್ನು ಹಾರಿಸಿದೆ. ಅವುಗಳಲ್ಲಿ ಹೆಚ್ಚಿನವನ್ನು ಇಸ್ರೇಲ್ ಸೇನೆ ಹೊಡೆದುರುಳಿಸಿದರೆ, ಕೆಲವು ನಿರ್ಜನ ಪ್ರದೇಶದಲ್ಲಿ ಬಿದ್ದಿವೆ.

ಅಲಿ ಕರ್ಕಿ ಸಾವು ದೃಢಪಡಿಸಿದ ಹಿಜ್ಬುಲ್ಲಾ: ತನ್ನ ಕಮಾಂಡರ್ ಅಲಿ ಕರ್ಕಿ ಅವರ ಸಾವನ್ನು ಹಿಜ್ಬುಲ್ಲಾ ಸಂಘಟನೆ ದೃಢಪಡಿಸಿದೆ. ಇಸ್ರೇಲ್ ಸೇನೆ ಬೈರೂತ್ ಮೇಲೆ ಶುಕ್ರವಾರ ನಡೆಸಿದ ದಾಳಿಯಲ್ಲಿ ಸಂಘಟನೆಯ ಮುಖ್ಯಸ್ಥ ಹಸನ್ ನಸ್ರಲ್ಲಾ ಮೃತಪಟ್ಟಿದ್ದರು. ಅದೇ ದಾಳಿಯಲ್ಲಿ ಕರ್ಕಿ ಅವರೂ ಹತ್ಯೆಯಾಗಿದ್ದಾರೆ ಎಂದು ಇಸ್ರೇಲ್ ಹೇಳಿತ್ತು.



ಹಿಜ್ಬುಲ್ಲಾ ಮುಖ್ಯಸ್ಥ ಹಸನ್ ನಸ್ರಲ್ಲಾ ಅವರ ಹತ್ಯೆಗೈಯಲು ಇಸ್ರೇಲ್ ನಡೆಸಿದ ವಾಯುದಾಳಿಯಲ್ಲಿ ನಾಶಗೊಂಡ ಕಟ್ಟಡದ ಅವಶೇಷಗಳನ್ನು ಸ್ಥಳೀಯರು ವೀಕ್ಷಿಸಿದರು — ಎಎಫ್‌ಪಿ ಚಿತ್ರ

ಸಿರಿಯಾ: 37 ಉಗ್ರರ ಬಲಿ

ಸಿರಿಯಾದಲ್ಲಿ ಉಗ್ರರ ನೆಲೆಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ಸೇನೆ ನಡೆಸಿದ ದಾಳಿಯಲ್ಲಿ ಅಲ್ ಖೈದಾ ಜತೆ ನಂಟು ಹೊಂದಿರುವ ಸಂಘಟನೆಯ 37 ಉಗ್ರರು ಮೃತಪಟ್ಟಿದ್ದಾರೆ. ಮೃತರಲ್ಲಿ ಇಬ್ಬರು ನಾಯಕರೂ ಸೇರಿದ್ದಾರೆ.

‘ಸಿರಿಯಾದ ವಾಯವ್ಯ ಭಾಗದಲ್ಲಿ ಸೆ.24ರಂದು ನಡೆಸಿದ ದಾಳಿಯಲ್ಲಿ ಹುರಾಸ್ ಅಲ್ ದೀನ್ ಸಂಘಟನೆಯ ಒಂಬತ್ತು ಉಗ್ರರು ಹಾಗೂ ಸೆ.16ರಂದು ಮಧ್ಯ ಸಿರಿಯಾದಲ್ಲಿ ನಡೆಸಿದ ದಾಳಿಯಲ್ಲಿ 28 ಉಗ್ರರು ಬಲಿಯಾಗಿದ್ದಾರೆ’ ಎಂದು ಅಮೆರಿಕ ಸೇನೆಯ ಮೂಲಗಳು ತಿಳಿಸಿವೆ.

ಜಾಮಿಯಾ ಇಸ್ಲಾಮಿಯಾ ಮುಖಂಡನ ಹತ್ಯೆ: ಲೆಬನಾನ್‌ನ ಬೆಕಾ ಕಣಿವೆ ಭಾಗದಲ್ಲಿ ಇಸ್ರೇಲ್ ಭಾನುವಾರ ನಡೆಸಿದ ದಾಳಿಯಲ್ಲಿ ಇಲ್ಲಿನ ಸುನ್ನಿ ಇಸ್ಲಾಮಿಸ್ಟ್ ಸಂಘಟನೆ ಜಾಮಿಯಾ ಇಸ್ಲಾಮಿಯಾದ ಮುಖಂಡ ಮೊಹಮ್ಮದ್ ದಹ್ರೋಜ್ ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ. ಈ ಸಂಘಟನೆಯು ಹಲವು ಸಲ ಇಸ್ರೇಲ್ ಮೇಲೆ ರಾಕೆಟ್ ದಾಳಿ ನಡೆಸಿದೆ.

ಸಂಘರ್ಷ ನಿಲ್ಲಿಸಲು ಚೀನಾ ಕರೆ (ಬೀಜಿಂಗ್ ವರದಿ): ಪಶ್ಚಿಮ ಏಷ್ಯಾದಲ್ಲಿ ಉದ್ಭವಿಸಿರುವ ಸಂಘರ್ಷವನ್ನು ನಿಲ್ಲಿಸಲು ಸಂಬಂಧಪಟ್ಟ ಎಲ್ಲರೂ ಮುಂದಾಗಬೇಕು ಎಂದು ಚೀನಾ ಹೇಳಿದೆ.

‘ಸಂಘರ್ಷವು ಉಲ್ಬಣಗೊಳ್ಳದಂತೆ ಅಥವಾ ಕೈಮೀರಿ ಹೋಗದಂತೆ ನೋಡಿಕೊಳ್ಳಲು ಸಂಬಂಧಪಟ್ಟವರು ಅದರಲ್ಲೂ ಮುಖ್ಯವಾಗಿ, ಇಸ್ರೇಲ್ ತಕ್ಷಣವೇ ಕ್ರಮಗಳನ್ನು ತೆಗೆದುಕೊಳ್ಳುವಂತೆ ಚೀನಾ ಒತ್ತಾಯಿಸುತ್ತದೆ’ ಎಂದು ವಿದೇಶಾಂಗ ಇಲಾಖೆಯ ಹೇಳಿಕೆ ತಿಳಿಸಿದೆ.

ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದ ಬಿಬಿಎಂಪಿ ಮುಖ್ಯ ಆಯುಕ್ತ

₹39 ಸಾವಿರ ಕೋಟಿ ಸಾಲಕ್ಕೆ ಪ್ರಸ್ತಾವ

• ನವೀನ್ ಮಿನೇಜಸ್

ಬಿಬಿಎಂಪಿ ಸುದ್ದಿ

ಬೆಂಗಳೂರು: ನಗರದಲ್ಲಿ ಮೂಲಸೌಕರ್ಯದ ಕೊರತೆಯನ್ನು ನೀಗಿಸಲು ₹59 ಸಾವಿರ ಕೋಟಿ ಅಂದಾಜು ವೆಚ್ಚದ ಯೋಜನೆಯನ್ನು ತಯಾರಿಸಿರುವ ಬಿಬಿಎಂಪಿ, ಇದಕ್ಕಾಗಿ ₹39,000 ಕೋಟಿ ಸಾಲ ಪಡೆಯಲು ಅನುಮತಿಗಾಗಿ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದೆ.

'ಮುಂದಿನ ಹತ್ತು ವರ್ಷಗಳಲ್ಲಿ ಬೆಂಗಳೂರು ಜನಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿಪಡಿಸಲು ₹1 ಲಕ್ಷ ಕೋಟಿ ಹೂಡಿಕೆ ಮಾಡಬೇಕಿದೆ. ಸಂಚಾರ ದಟ್ಟಣೆಯನ್ನು ನಿವಾರಿಸಲು ನಾವು ಒಟ್ಟು ₹59 ಸಾವಿರ ಕೋಟಿ ವೆಚ್ಚದಲ್ಲಿ ಪ್ರಾಥಮಿಕವಾಗಿ ಕೆಲವು ದೊಡ್ಡ ಯೋಜನೆಗಳ ಪ್ರಸ್ತಾವ ಮಾಡಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಸುರಂಗ ರಸ್ತೆಗಳು, 17 ಎತ್ತರಿಸಿದ ಕಾರಿಡಾರ್‌ಗಳು, ಡಬಲ್ ಡೆಕರ್ ಮೇಲ್ಸೇತುವೆಗಳು, ಸ್ಕೈಡೆಕ್‌ನಂತಹ ದೊಡ್ಡ ಯೋಜನೆಗಳಿಗೆ ಬಾಹ್ಯ ಮೂಲಗಳಿಂದ ₹39 ಸಾವಿರ ಕೋಟಿ ಸಂಗ್ರಹಿಸಲಾಗುವುದು. ಸರ್ಕಾರದ ಭದ್ರತೆಯ ಆಧಾರದಲ್ಲಿ ದೇಶೀಯ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಒಪ್ಪಿಗೆ ಪಡೆಯಬೇಕಿದೆ. 'ನಮ್ಮ ಮೆಟ್ರೊ' ವಿಸ್ತರಣೆಗೆ ಹಣಕಾಸು ಹೊಂದಾಣಿಕೆ ಮಾಡಿಕೊಂಡ ರೀತಿಯಲ್ಲಿಯೇ ಉಳಿದ ಯೋಜನೆಗಳಿಗೂ ನಿಧಿ ಕ್ರೋಡೀಕರಿಸಲಾಗುವುದು ಎಂದು ವಿವರಿಸಿದ್ದಾರೆ.

ಈಗ ಪ್ರಸ್ತಾವಿಸಿರುವ ನಾಲ್ಕು ಯೋಜನೆಗಳಲ್ಲಿ 45 ಕಿ.ಮೀ. ಉದ್ದದ ಸುರಂಗ ರಸ್ತೆಗಳ ನಿರ್ಮಾಣಕ್ಕೆ ₹36 ಸಾವಿರ ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಬಿಬಿಎಂಪಿ ಸುಮಾರು ₹16 ಸಾವಿರ ಕೋಟಿ ಸಂಗ್ರಹಿಸಲಿದೆ. ಉಳಿದ ಹಣವನ್ನು ಬೇರೆ ಹೊಸ ಹಣಕಾಸು ಮೂಲಗಳಿಂದ ಸಂಗ್ರಹಿಸಲು ಉದ್ದೇಶಿಸಲಾಗಿದೆ. ವಾಹನಗಳಿಗೆ ಸುಂಕ ವಿಧಿಸುವ ಯೋಜನೆಯೂ ಇದೆ ಎಂದು ಹೇಳಿದ್ದಾರೆ.

100 ಕಿಮೀ ಉದ್ದದ 17 ಎತ್ತರಿಸಿದ ಕಾರಿಡಾರ್‌ಗಳನ್ನು ನಿರ್ಮಿಸುವುದು ಮತ್ತು ಮೆಟ್ರೊ ಮಾರ್ಗಗಳಲ್ಲಿ ಡಬಲ್ ಡೆಕರ್ ಮೇಲ್ಸೇತುವೆ ನಿರ್ಮಿಸುವ ಯೋಜನೆಗಳನ್ನೂ ಪ್ರಸ್ತಾವಿಸಲಾಗಿದೆ. ಸ್ಕೈಡೆಕ್ ನಿರ್ಮಾಣ ನಾಲ್ಕನೇ ಯೋಜನೆಯಾಗಿದೆ. ಪ್ರಮುಖ ಕಾಮಗಾರಿಗಳಿಗಾಗಿ ರಾಜ್ಯ ಸರ್ಕಾರವು ಬಿಬಿಎಂಪಿಗೆ ವಾರ್ಷಿಕ ಅಂದಾಜು ₹3,000 ಕೋಟಿ ಮಂಜೂರು ಮಾಡುತ್ತಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದರು.

ನಾಲ್ಕು ಯೋಜನೆಗಳಿಗಾಗಿ ಮುಂದಿನ ನಾಲ್ಕು ವರ್ಷಗಳಲ್ಲಿ ₹2,000 ಕೋಟಿಯನ್ನು ಹೆಚ್ಚುವರಿಯಾಗಿ ಸರ್ಕಾರವು ಹಂಚಿಕೆ ಮಾಡಬೇಕು ಎಂದು ಮನವಿ ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಪ್ರೀಮಿಯಂ ಫ್ಲೋರ್ ಏರಿಯಾ ಅನುಪಾತ (ಎಫ್‌ಎಆರ್) ನೀತಿ ಮತ್ತು ಹೊಸ ಜಾಹೀರಾತು ನೀತಿಯನ್ನು ಜಾರಿಗೊಳಿಸುವ ಮೂಲಕ ವಾರ್ಷಿಕ ₹3,000 ಕೋಟಿ ಸಾಲ ಮರುಪಾವತಿ ಹೊರೆಯನ್ನು ಹಂಚಿಕೊಳ್ಳುವುದಾಗಿ ಬಿಬಿಎಂಪಿ ಭರವಸೆ ನೀಡಿದೆ.

ಮುಂದಿನ ನಾಲ್ಕು ವರ್ಷಗಳಲ್ಲಿ ಸರ್ಕಾರ ಮತ್ತು ಬಿಬಿಎಂಪಿ ₹20,000 ಕೋಟಿಯನ್ನು ಭರಿಸಲಿದ್ದು, ಉಳಿದ ₹39 ಸಾವಿರ ಕೋಟಿಗೆ ಬಾಹ್ಯ ಮೂಲಗಳನ್ನು ಅವಲಂಬಿಸಬೇಕಾಗಿದೆ.

ಇದೇ ಮೊದಲು: 'ಬಿಬಿಎಂಪಿ ಬಹುತೇಕ ಸಂದರ್ಭಗಳಲ್ಲಿ ತನ್ನ ಯೋಜನೆಗೆ ಸರ್ಕಾರದ ಬೆಂಬಲ ಮತ್ತು ತನ್ನದೇ ಆಂತರಿಕ ಸಂಪನ್ಮೂಲಗಳನ್ನು ಅವಲಂಬಿಸುತ್ತಿತ್ತು. ಇದೇ ಮೊದಲನೇ ಬಾರಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಮುಂದಾಗಿದೆ. 1999-2000ರಲ್ಲಿ ಬಾಂಡ್‌ಗಳ ಮೂಲಕ ₹250 ಕೋಟಿ ಸಂಗ್ರಹಿಸಿದ್ದನ್ನು ಹೊರತುಪಡಿಸಿ ಇಲ್ಲಿವರೆಗೆ ಬಾಹ್ಯ ಮೂಲವನ್ನು ಅವಲಂಬಿಸಿರಲಿಲ್ಲ' ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು ನೆನಪಿಸಿಕೊಂಡರು.

'ಮೂಲಸೌಕರ್ಯ ಅನಿವಾರ್ಯ'



ಶಿವಕುಮಾರ್

'ರಾಜ್ಯದ ಒಟ್ಟು ಜನಸಂಖ್ಯೆಯ ನಾಲ್ಕನೇ ಒಂದು ಭಾಗದಷ್ಟು ಜನರು ಬೆಂಗಳೂರಿನಲ್ಲಿದ್ದಾರೆ. ಅವರಿಗೆ ಮೂಲಸೌಕರ್ಯಗಳನ್ನು ಒದಗಿಸಬೇಕಿದೆ. ಅದಕ್ಕಾಗಿ ಆಸ್ತಿ ತೆರಿಗೆಯಲ್ಲಿನ ಸೋರಿಕೆಯನ್ನು ಸರಿಪಡಿಸಲಾಗುತ್ತಿದೆ. ಕೆಲವು ಯೋಜನೆಗಳನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಮಾಡಲಾಗುವುದು. ಉಳಿದ ಮೊತ್ತವನ್ನು ಬಾಹ್ಯ ಸಾಲದ ಮೂಲಕ ಭರಿಸಲಾಗುವುದು' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.



ನಗರದಲ್ಲಿ ಭಾನುವಾರ ನಡೆದ ನಾರಾಯಣಗುರು ಜಯಂತಿ ಕಾರ್ಯಕ್ರಮದಲ್ಲಿ ವಿನಯ್ ಗುರೂಜಿ ಮತ್ತು ಆರ್ಯ ಈಡಿಗ ಮಹಾಸಂಸ್ಥಾನದ ಪೀಠಾಧ್ಯಕ್ಷ ವಿಖ್ಯಾತಾನಂದ ಸ್ವಾಮೀಜಿ ಅವರು 'ವರ್ಕಿಂಗ್ ವುಮೆನ್ಸ್ ಹಾಸ್ಟೆಲ್' ಯೋಜನೆಗೆ ಚಾಲನೆ ನೀಡಿದರು. ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ದೀಪಾ ನಾಯಕ್, ಬ್ರಹ್ಮಶ್ರೀ ನಾರಾಯಣ ಗುರು ಧರ್ಮ ಪರಿಪಾಲನಾ ಸಂಘದ ರಾಜ್ಯ ಅಧ್ಯಕ್ಷ ಸೈದಪ್ಪ ಕೆ. ಗುತ್ತೇದಾರ್, ವಿಧಾನ ಪರಿಷತ್ ಸದಸ್ಯ ಜಗದೇವ ಗುತ್ತೇದಾರ್, ಶಾಸಕ ವಿ. ಸುನೀಲ್ ಕುಮಾರ್, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ನಾರಾಯಣಗುರು ಮಹಿಳಾ ಸಮಾವೇಶ

'ಉನ್ನತ ಹುದ್ದೆಗಳಲ್ಲಿ ಈಡಿಗರು ಕಡಿಮೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಎಎಸ್, ಐಪಿಎಸ್ ಸಹಿತ ಉನ್ನತ ಸ್ಥಾನಗಳಲ್ಲಿ ಈಡಿಗ ಸಮುದಾಯದವರು ಬಹಳ ಕಡಿಮೆ ಇದ್ದಾರೆ. ಶಿಕ್ಷಣ ಮತ್ತು ಜಾಗೃತಿಗೆ ಮಹತ್ವ ನೀಡಿದರೆ ಸಂಘಟನೆ ಯಶಸ್ವಿಯಾಗುತ್ತದೆ ಎಂದು ಶಾಸಕ ವಿ. ಸುನೀಲ್ ಕುಮಾರ್ ತಿಳಿಸಿದರು.

ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘವು ನಾರಾಯಣ ಗುರು ಜಯಂತಿ ಪ್ರಯುಕ್ತ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪರಿವರ್ತನಶ್ರೀ ಪ್ರಶಸ್ತಿ ಪ್ರದಾನ, ರಾಜ್ಯಮಟ್ಟದ ನಾರಾಯಣ ಗುರು ಮಹಿಳಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ಆಯಕಟ್ಟಿನ ಸ್ಥಾನಗಳಲ್ಲಿ ಈಡಿಗ ಸಮುದಾಯದವರು ಇರಬೇಕಿದ್ದರೆ ನಮ್ಮ ತಾಯಂದಿರು ಮಕ್ಕಳಿಗೆ ಶಿಕ್ಷಣ ನೀಡಲು ಮುತುವರ್ಜಿ ವಹಿಸಬೇಕು' ಎಂದರು.

ಗೌರಿಗದ್ದೆ ಸ್ವರ್ಣಪೀಠಿಕಾಪುರ ದತ್ತಾಶ್ರಮದ ವಿನಯ್ ಗುರೂಜಿ ಮಾತನಾಡಿ, 'ಆಗಿನ ಕಾಲದಲ್ಲಿಯೇ ನಾರಾಯಣ ಗುರುಗಳು ಹೋರಾಟದ ಮೂಲಕ ಮಹಿಳೆಯರಿಗೆ ನ್ಯಾಯ ಒದಗಿಸಿಕೊಟ್ಟಿದ್ದರು' ಎಂದರು.

ಬ್ರಹ್ಮಶ್ರೀ ನಾರಾಯಣಗುರು ಧರ್ಮ-ಪರಿಪಾಲನಾ ಸಂಘದ ಅಧ್ಯಕ್ಷ ಸೈದಪ್ಪ ಗುತ್ತೇದಾರ್ ಮಾತನಾಡಿ, 'ಈಡಿಗ, ಬಿಲ್ಲವ ಸಮಾಜದ 26 ಉಪ ಪಂಗಡಗಳು ಒಂದಾಗಬೇಕು. ಈ ಸಮುದಾಯಗಳಲ್ಲಿರುವ ಬಡವರನ್ನು ಮೇಲೆತ್ತುವ ಕಾರ್ಯವಾಗಬೇಕು' ಎಂದರು.

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಮಾತನಾಡಿ, 'ಮಹಿಳೆಗೆ ಇನ್ನೂ ಸಮಾನತೆ ಬಂದಿಲ್ಲ' ಎಂದು ವಿಷಾದಿಸಿದರು. 'ಉದ್ಯೋಗಸ್ಥ ಮಹಿಳೆಯರಿಗೆ ವಸತಿ' ಯೋಜನೆಗೆ ಚಾಲನೆ ನೀಡಲಾಯಿತು. ಮಹಿಳಾ ಸಬಲೀಕರಣಕ್ಕಾಗಿ 'ಆಚಾರದ ಶರಣೆ ಅಕ್ಕಮ್ಮ ಟ್ರಸ್ಟ್' ಉದ್ಘಾಟಿಸಲಾಯಿತು

ವಾಹನಗಳ ಸಂಚಾರಕ್ಕೆ ಅಡ್ಡಿ • ಕಾರು ಜಖಂ

ಭಾರಿ ಮಳೆ: ಧರೆಗುರುಳಿದ ಮರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಶನಿವಾರ ತಡರಾತ್ರಿ ಬಿರುಗಾಳಿ ಸಹಿತ ಮಳೆಯಾಗಿದ್ದು, ಆರ್.ಟಿ.ನಗರದಲ್ಲಿ ಮರಗಳು ಉರುಳಿಬಿದ್ದಿವೆ.

ಶನಿವಾರ ರಾತ್ರಿ 8.30ರಿಂದ ಭಾನುವಾರ ಬೆಳಿಗ್ಗೆ 8.30ರವರೆಗಿನ ಮಾಹಿತಿ ಪ್ರಕಾರ, ಮಹದೇವಪುರ ವಲಯದ ದೊಡ್ಡ ನೆಕ್ಕುಂದಿಯಲ್ಲಿ 10.7 ಸೆಂ.ಮೀ ಮಳೆಯಾಗಿದೆ. ಇದೇ ವಲಯದ ಎಚ್‌ಎಎಲ್ ವಿಮಾನ ನಿಲ್ದಾಣ, ಹಗದೂರು, ವರ್ತೂರು ಸುತ್ತಮುತ್ತ 8 ಸೆಂ.ಮೀಗೂ ಹೆಚ್ಚು ಮಳೆಯಾದ ವರದಿಯಾಗಿದೆ.

ಮಾರತ್ತಹಳ್ಳಿಯಲ್ಲಿ 6.2 ಸೆಂ.ಮೀ, ಗೊಟ್ಟಿಗೆರೆ, ಬೇಗೂರು ವ್ಯಾಪ್ತಿಯಲ್ಲಿ 4.3 ಸೆಂ.ಮೀ, ವಿಜ್ಞಾನ ನಗರ, ಬೆಳ್ಳಂದೂರು, ಜಕ್ಕೂರು, ಹೊರಮಾವು ಮತ್ತು ವಿ. ನಾಗೇನಹಳ್ಳಿಯಲ್ಲಿ 3.3 ಸೆಂ.ಮೀಗೂ ಹೆಚ್ಚು ಮಳೆಯಾಗಿದೆ. ದೊಮ್ಮಲೂರು, ಹೂಡಿ, ಬೆನ್ನಿಗಾನಹಳ್ಳಿ, ರಾಮಮೂರ್ತಿ ನಗರದಲ್ಲಿ 1.9 ಸೆಂ,ಮೀ, ಜಕ್ಕೂರು, ಬ್ಯಾಟರಾಯನಪುರ ವ್ಯಾಪ್ತಿಯಲ್ಲಿ 1.7 ಸೆಂ.ಮೀ ಮಳೆ ಪ್ರಮಾಣ ದಾಖಲಾಗಿದೆ.

ಆರ್.ಟಿ.ನಗರದ 2ನೇ ಬ್ಲಾಕ್‌ನ 14ನೇ ಕ್ರಾಸ್ ರಸ್ತೆಯಲ್ಲಿ ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಗೆ ಮರವೊಂದು ಕಾರಿನ ಮೇಲೆ ಬಿದ್ದ ಪರಿಣಾಮ ಜಖಂಗೊಂಡಿದೆ. ಬಿಬಿಎಂಪಿ ಸಿಬ್ಬಂದಿ, ಭಾನುವಾರ ಬೆಳಿಗ್ಗೆ ಉರುಳಿಬಿದ್ದ ಮರಗಳ ತೆರವು ಕಾರ್ಯಾಚರಣೆ ಕೈಗೊಂಡರು.

ಚನ್ನಸಂದ್ರ, ಜೆ.ಬಿ.ನಗರ ದಲ್ಲಿ ನೀರು ನಿಂತಿದ್ದರಿಂದ ತಿರುಮಲಶೆಟ್ಟಿ ಕ್ರಾಸ್ ಕಡೆಗೆ ಸಂಚಾರ ನಿಧಾನಗತಿಯಲ್ಲಿತ್ತು. ಎಚ್‌ಎಸ್‌ಬಿಸಿ ಜಂಕ್ಷನ್‌ನಲ್ಲಿ ನೀರು ನಿಂತಿರುವುದರಿಂದ ಅರೆಕೆರೆ ಕಡೆಗೆ ನಿಧಾನಗತಿಯ ಸಂಚಾರವಿತ್ತು.



ಆರ್‌.ಟಿ.ನಗರದಲ್ಲಿ ಬೃಹತ್ ಮರವೊಂದು ವಾಹನದ ಮೇಲೆ ಬಿದ್ದಿರುವುದು. ಬಿಬಿಎಂಪಿ ಸಿಬ್ಬಂದಿ ಭಾನುವಾರ ಬೆಳಿಗ್ಗೆ ತೆರವುಗೊಳಿಸಿದರು



ಎಚ್‌ಎಸ್‌ಬಿಸಿ ಜಂಕ್ಷನ್‌ನಲ್ಲಿ ನೀರು ನಿಂತಿರುವುದರಿಂದ ಅರೆಕೆರೆ ಕಡೆಗೆ ವಾಹನಗಳು ನಿಧಾನಗತಿಯಲ್ಲಿ ಚಲಿಸಿದವು

ವಿಧಾನ ಮಂಡಲ: ಸ್ಥಾಯಿ ಸಮಿತಿಗಳಿಗೆ ನಾಮನಿರ್ದೇಶನ

ಬೆಂಗಳೂರು: ವಿಧಾನ ಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ 2024–25ನೇ ಸಾಲಿಗೆ ಅಧ್ಯಕ್ಷರು, ಸದಸ್ಯರನ್ನು ವಿಧಾನ ಸಭಾಧ್ಯಕ್ಷ ಯು.ಟಿ ಖಾದರ್ ಅವರು ನಾಮನಿರ್ದೇಶನ ಮಾಡಿದ್ದಾರೆ.

ವಿವಿಧ ಸ್ಥಾಯಿ ಸಮಿತಿಗಳ ಅಧ್ಯಕ್ಷರು– ಸಿ.ಸಿ. ಪಾಟೀಲ (ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ), ಬಸವರಾಜ್ ಶಿವಣ್ಣನವರ್ (ಸಾರ್ವಜನಿಕ ಉದ್ದಿಮೆಗಳ ಸಮಿತಿ), ಪಿ.ಎಂ. ನರೇಂದ್ರಸ್ವಾಮಿ (ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ), ಎ.ಆರ್. ಕೃಷ್ಣಮೂರ್ತಿ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ), ಬಿ. ಶಿವಣ್ಣ (ಅಧೀನ ಶಾಸನ ರಚನಾ ಸಮಿತಿ), ಎಚ್.ಡಿ. ರೇವಣ್ಣ (ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ), ಎನ್. ಎಚ್. ಕೋನರಡ್ಡಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ) ಅವರನ್ನು ನೇಮಿಸಲಾಗಿದೆ.

ಉಳಿದಂತೆ, ಗ್ರಂಥಾಲಯ ಸಮಿತಿಗೆ ಯು.ಬಿ. ಬಣಕಾರ್, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿಗೆ ರಿಜ್ವಾನ್ ಅರ್ಷದ್, ಅಂದಾಜುಗಳ ಸಮಿತಿಗೆ ಹಂಪನಗೌಡ ಬಾದರ್ಲಿ, ಸರ್ಕಾರಿ ಭರವಸೆಗಳ ಸಮಿತಿಗೆ ಕೆ.ವೈ. ನಂಜೇಗೌಡ, ಹಕ್ಕುಬಾಧ್ಯತೆಗಳ ಸಮಿತಿಗೆ ಶಿವಾನಂದ ಮಹಾಂತೇಶ ಕೌಜಲಗಿ, ಖಾಸಗಿ ಸದಸ್ಯರುಗಳ ವಿಧೇಯಕ ಹಾಗೂ ನಿರ್ಣಯಗಳ ಸಮಿತಿ, ಅರ್ಜಿಗಳ ಸಮಿತಿ ಹಾಗೂ ವಸತಿ ಸೌಕರ್ಯಗಳ ಸಮಿತಿಗೆ ರುದ್ರಪ್ಪ ಲಮಾಣಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಈ ಎಲ್ಲ ಸಮಿತಿಗಳಿಗೆ ವಿಧಾನಸಭೆ ಮತ್ತು ವಿಧಾನ ಪರಿಷತ್ ಸದಸ್ಯರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ ಎಂದು ವಿಧಾನಸಭೆ ಸಚಿವಾಲಯ ತಿಳಿಸಿದೆ.

ಸಚಿವೆ ನಿರ್ಮಲಾ ಪ್ರಕರಣ ಸಿಐಡಿಗೆ ವಹಿಸಲು ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣಾ ಬಾಂಡ್ ಹೆಸರಿನಲ್ಲಿ ಉದ್ಯಮಗಳ ಮೇಲೆ ಒತ್ತಡ ತಂದು ಕೋಟ್ಯಂತರ ರೂಪಾಯಿ ಸುಲಿಗೆ ಮಾಡಲಾಗಿದೆ' ಎಂಬ ಆರೋಪದ ಅಡಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಹಲವರ ವಿರುದ್ಧ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾಯಿಸುವ ಕುರಿತು ಚಿಂತನೆ ನಡೆದಿದೆ.

ಪ್ರಕರಣ ವರ್ಗಾವಣೆಗೆ ನ್ಯಾಯಾಲಯದ ಅನುಮತಿ ಪಡೆಯುವ ಕುರಿತು ಭಾನುವಾರ ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ, ಮೈಕೋ ಲೇಔಟ್ ಎಸಿಪಿ ಮತ್ತು ತಿಲಕ್ ನಗರದ ಠಾಣಾಧಿಕಾರಿ ಸಭೆ ನಡೆಸಿ, ಚರ್ಚೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಾಮಾನ್ಯವಾಗಿ ₹ 3 ಕೋಟಿಗೂ ಹೆಚ್ಚು ಮೊತ್ತದ ಪ್ರಕರಣಗಳನ್ನು ಸಿಐಡಿಗೆ ವರ್ಗಾವಣೆ ಮಾಡಲಾಗುತ್ತದೆ. ಈ ಪ್ರಕರಣದಲ್ಲಿ 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯ ಎಫ್‌ಐಆರ್ ದಾಖಲಿಸಲು ಆದೇಶಿಸಿತ್ತು. ಹಾಗಾಗಿ ಕೋರ್ಟ್ ಅನುಮತಿ ಕಡ್ಡಾಯವಾಗಿದೆ' ಎಂದು ಮೂಲಗಳು ತಿಳಿಸಿವೆ.

ನ್ಯಾಯಾಲಯದ ನಿರ್ದೇಶನದ ಬೆನ್ನಲ್ಲೇ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಬಿಜೆಪಿ ಕೇಂದ್ರ–ರಾಜ್ಯ ಘಟಕದ ಪದಾಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು.

30 ದ್ವಿಚಕ್ರ ವಾಹನ ಕದ್ದವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ನಿಲ್ಲಿಸಿದ್ದ ದ್ವಿಚಕ್ರ ವಾಹನಗಳ ಹ್ಯಾಂಡಲ್ ಲಾಕ್ ಮುರಿದು ಕಳ್ಳತನ ಮಾಡಿದ್ದ ಆರೋಪಿಯನ್ನು ಕೆ.ಆರ್.ಪುರ ಪೊಲೀಸರು ಬಂಧಿಸಿದ್ದಾರೆ.

ಸುಂಕದಕಟ್ಟೆ ಮುದ್ದಿನ ಪಾಳ್ಯದ ಹನುಮೇಶ್ ಅಲಿಯಾಸ್ ಚಿನ್ನ ಹನುಮಯ್ಯ (32) ಎಂಬುವವರನ್ನು ಬಂಧಿಸಿ, ₹22.50 ಲಕ್ಷ ಮೌಲ್ಯದ 30 ದ್ವಿಚಕ್ರ ವಾಹನಗಳನ್ನು ವಶ ಪಡಿಸಿಕೊಳ್ಳಲಾಗಿದೆ.

ಕೆ.ಆರ್.ಪುರ ಸಮೀಪದ ಕೌದೇನಹಳ್ಳಿ ಮನೆಯೊಂದರ ಬಳಿ ನಿಲುಗಡೆ ಮಾಡಿದ್ದ ಬೈಕ್ ಕಳ್ಳತನವಾಗಿತ್ತು. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಾರ್ಯಾಚರಣೆ ನಡೆಸಿದರು. ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ವೇಳೆ ಸಿಕ್ಕ ಸುಳಿವು ಹಾಗೂ ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಮೇರೆಗೆ ಮುದ್ದಿನಪಾಳ್ಯದಲ್ಲಿ ದ್ವಿಚಕ್ರ ವಾಹನ ಸಹಿತ ಆರೋಪಿಯನ್ನು ವಶಕ್ಕೆ ಪಡೆದರು.

ಆರೋಪಿ ನೀಡಿದ ಮಾಹಿತಿ ಮೇರೆಗೆ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಕಂದಕೂರು ಗ್ರಾಮದ ಖಾಲಿ ಜಾಗದಲ್ಲಿ ನಿಲುಗಡೆ ಮಾಡಿದ್ದ ಎಂಟು ದ್ವಿಚಕ್ರ ವಾಹನ, ಕೆ.ಆರ್.ಪುರದ ಜಾಲಿ ಜಾಗದಲ್ಲಿ ನಿಲುಗಡೆ ಮಾಡಿದ್ದ 10 ಹಾಗೂ ಯಲಹಂಕದ ಬಿಎಸ್‌ಎಫ್ ಕಾಂಪೌಂಡ್ ಸಮೀಪದ ನೀಲಗಿರಿ ತೋಪಿನಲ್ಲಿ ನಿಲುಗಡೆ ಮಾಡಿದ್ದ 11 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಬೆಂಗಳೂರು ಮತ್ತು ಗ್ರಾಮಾಂತರ ಜಿಲ್ಲೆಗಳ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ. ಕದ್ದ ವಾಹನಗಳನ್ನು ಖಾಲಿ ಜಾಗದಲ್ಲಿ ನಿಲುಗಡೆ ಮಾಡಿ, ಗ್ರಾಹಕರನ್ನು ಹುಡುಕಿ ಮಾರಾಟ ಮಾಡಿ ಹಣ ಪಡೆಯುತ್ತಿದ್ದ. ಆಂಧ್ರಪ್ರದೇಶದಲ್ಲೂ ವಾಹನ ಮಾರಾಟಕ್ಕೆ ಯತ್ನಿಸಿದ್ದ' ಎಂದು ತಿಳಿಸಿದ್ದಾರೆ.

'ಬೈಕ್ ಕಳವು ಪ್ರಕರಣಗಳಲ್ಲಿ ಹನುಮೇಶ್ ಈ ಹಿಂದೆ ಪರಪ್ಪನ ಅಗ್ರಹಾರ ಜೈಲಿನಲ್ಲಿ ಮೂರು ವರ್ಷ ಜೈಲು ವಾಸ ಅನುಭವಿಸಿದ್ದ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನಗರದಲ್ಲಿ ಇಂದು

ಹಾರ್ಟ್ ಫಾರ್ ಆ್ಯಕ್ಷನ್ 'ವಾಕಥಾನ್' ಆಯೋಜನೆ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಸ್ಥಳ: ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಳಿಗ್ಗೆ 8.30

'ಜಾನಪದ ಹಬ್ಬ': ಉದ್ಘಾಟನೆ: ಎಸ್. ಆರ್. ವಿಶ್ವನಾಥ್, ಅತಿಥಿಗಳು: ಎಸ್. ಜಾನಪದ ಬಾಲಾಜಿ, ಕಡಬಗೆರೆ ಮುನಿರಾಜು, 'ಜನಪದ ಸಿರಿ' ಪ್ರಶಸ್ತಿ ಪ್ರದಾನ: ಸೋಬಾನೆ ರಾಮಯ್ಯ, ಏಕತಾರಿ ರಾಮಯ್ಯ, ಅಧ್ಯಕ್ಷತೆ: ಗೀತಾ ಎನ್., ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಳಿಗ್ಗೆ 10.30

'ಅಕ್ಷಯ ಪಾತ್ರದ 75ನೇ ಕಿಚನ್' ಉದ್ಘಾಟನೆ: ಅತಿಥಿಗಳು: ಸಿದ್ದರಾಮಯ್ಯ, ಶೋಭಾ ಕರಂದ್ಲಾಜೆ, ಕೃಷ್ಣ ಬೈರೇಗೌಡ, ಮಧು ಬಂಗಾರಪ್ಪ, ಉಪಸ್ಥಿತಿ: ಮಧು ಪಂಡಿತ್ ದಾಸ, ಚಂಚಲಾಪತಿ ದಾಸ, ಎನ್.ಆರ್. ನಾರಾಯಣಮೂರ್ತಿ, ಜ್ಯೋತಿಂದ್ರ ಠಾಕ್ರೆ, ಆಯೋಜನೆ: ಅಕ್ಷಯ ಪಾತ್ರ ಫೌಂಡೇಶನ್, ಮೀನಕುಂಟೆ, ಚಿಕ್ಕಜಾಲ, ಬೆಳಿಗ್ಗೆ 11

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–18 'ಆರ್.ಆರ್. ದಿವಾಕರ್' ಕುರಿತು ಉಪನ್ಯಾಸ: ಮನು ಬಳಿಗಾರ್, ಆಶಯ ನುಡಿ: ರಾ.ನಂ. ಚಂದ್ರಶೇಖರ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ನ್ಯಾಷನಲ್ ಕಾಲೇಜಿನ ವೃತ್ತ ಬಸವನಗುಡಿ, ಬೆಳಿಗ್ಗೆ 11

ಸಿದ್ದೇಶ್ವರ ಸ್ವಾಮೀಜಿ ಅವರ ಕುರಿತು 'ಯೋಗಸ್ಥಃ' ಪುಸ್ತಕ ಬಿಡುಗಡೆ, 'ಭೀಮೆಯಿಂದ ಬೆಂಗಳೂರಿನೆಡೆಗೆ–ರಾಗಂ ನಡಿಗೆ' ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಜಂಬುನಾಥ ಮಳಿಮಠ, ಉದ್ಘಾಟನೆ: ಬಸವರಾಜ ಹೊರಟ್ಟಿ, ಪುಸ್ತಕ ಬಿಡುಗಡೆ: ಬಿ.ಎಸ್. ಪಾಟೀಲ, ವಿ.ಆರ್. ಸುದರ್ಶನ್, ಅಧ್ಯಕ್ಷತೆ: ಜಿ.ಸಿ. ಚಂದ್ರಶೇಖರ್, ಮುಖಪುಟ ಅನಾವರಣ: ರಮೇಶ್ ಬಾಬು, ಅಭಿನಂದನಾ ನುಡಿ: ಪಟೇಲ್ ಪಾಂಡು, ಉಪಸ್ಥಿತಿ: ಕುಮಾರ್ ಕೆ.ಎಚ್., ಗುಂಡೀಗೆರೆ ವಿಶ್ವನಾಥ್, ಎಂ. ಪ್ರಿಯದರ್ಶಿನಿ, ಆಯೋಜನೆ: ರಂಗೋತ್ರಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ನಿರ್ಮಾಣ • ವಿರಳ ಕಾಯಿಲೆಗಳ ತಡೆಗೂ ಸಹಕಾರಿ

ಭ್ರೂಣದ ಆರೋಗ್ಯ ವೃದ್ಧಿಗೆ 'ಎಫ್‌ಎಂಸಿ'

• ವರುಣ ಹೆಗಡೆ

500 ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿರುವ ಹಾಸಿಗೆಗಳು

500 ರಿಂದ 600 ಸಂಸ್ಥೆಗೆ ಪ್ರತಿನಿತ್ಯ ಭೇಟಿ ನೀಡುವ ಹೊರರೋಗಿಗಳು



ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ

ಬೆಂಗಳೂರು: ಭ್ರೂಣದ ಆರೋಗ್ಯ ವೃದ್ಧಿಯ ಜೊತೆಗೆ ವಿರಳ ಕಾಯಿಲೆಗಳೂ ಸೇರಿದಂತೆ ವಂಶವಾಹಿ ಸಂಬಂಧಿ ಸಮಸ್ಯೆಗಳ ಚಿಕಿತ್ಸೆಗಾಗಿ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ 'ಫೀಟಲ್ ಮೆಡಿಸಿನ್ ಸೆಂಟರ್' (ಎಫ್‌ಎಂಸಿ) ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿದೆ.

ಸರ್ಕಾರಿ ವ್ಯವಸ್ಥೆಯಡಿ ಕಾರ್ಯಾರಂಭಿಸುವ ಪ್ರಥಮ ಕೇಂದ್ರ ಎಂಬ ಹೆಗ್ಗಳಿಕೆಗೂ ಇದು ಪಾತ್ರವಾಗಲಿದೆ. ಭ್ರೂಣದ ಬೆಳವಣಿಗೆ ಮತ್ತು ಆರೋಗ್ಯದ ಮೌಲ್ಯಮಾಪನ, ಭ್ರೂಣ ಕಾಯಿಲೆಗಳ ಪತ್ತೆ, ನಿರ್ವಹಣೆ ಹಾಗೂ ಚಿಕಿತ್ಸೆಗೆ ಈ ಕೇಂದ್ರ ಸಹಕಾರಿಯಾಗಲಿದೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕೆಪಿಟಿಸಿಎಲ್) ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಈ ಕೇಂದ್ರ ನಿರ್ಮಾಣಕ್ಕೆ ₹ 1 ಕೋಟಿ ದೇಣಿಗೆ ನೀಡಿದೆ. ಒಟ್ಟು 1.5 ಕೋಟಿ ವೆಚ್ಚದಲ್ಲಿ ಕೇಂದ್ರ ನಿರ್ಮಾಣವಾಗಲಿದ್ದು, ಅಗತ್ಯ ವೈದ್ಯಕೀಯ ಪರಿಕರಗಳ ಖರೀದಿ ಪ್ರಕ್ರಿಯೆ ನಡೆಯುತ್ತಿದೆ.

ವಂಶವಾಹಿ ಸಂಬಂಧಿ ಸಮಸ್ಯೆಯಿಂದ ಸಿಕಲ್–ಸೆಲ್, ಅನೀಮಿಯಾ, ಥಲಸ್ಸೇಮಿಯಾ ಸೇರಿ ವಿವಿಧ ವಿರಳ ಕಾಯಿಲೆಗಳಿಂದ ಬಾಧಿತರಾಗುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಈ ಕಾಯಿಲೆಗಳ ಚಿಕಿತ್ಸಾ ವೆಚ್ಚ ದುಬಾರಿಯಾಗಿರುವುದರಿಂದ ಜೀವನಪೂರ್ತಿ ಸಮಸ್ಯೆ ಎದುರಿಸಬೇಕಾಗುತ್ತದೆ. ಆದ್ದರಿಂದ ಜನನಪೂರ್ವವೇ ಈ ಸಮಸ್ಯೆಗಳನ್ನು ಪತ್ತೆ ಮಾಡಿ, ಚಿಕಿತ್ಸೆ ಒದಗಿಸಲು ಸಂಸ್ಥೆ ಕ್ರಮವಹಿಸಿದೆ.

ಶಿಶು ಮರಣ ತಡೆ: ಅವಧಿ ಪೂರ್ವ ಜನನ, ಜನ್ಮಜಾತ ಅಂಗವೈಕಲ್ಯ, ಹೃದಯ ಕಾಯಿಲೆ, ನರ ಸಂಬಂಧಿ ಸಮಸ್ಯೆ ಸೇರಿ ವಿವಿಧ ಕಾರಣದಿಂದ ಶಿಶು ಮರಣ ಪ್ರಕರಣಗಳು ವರದಿಯಾಗುತ್ತಲೇ ಇವೆ. ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ, ನಗರದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 2,557 ನವಜಾತ ಶಿಶುಗಳು ಮೃತಪಟ್ಟಿವೆ. ಶಿಶು ಮರಣ ತಡೆಗೆ ವಿಶೇಷ ನವಜಾತ ಶಿಶು ಆರೈಕೆ ಘಟಕ, ಕಾಂಗರೂ ಮದರ್ ಕೇರ್, ನವಜಾತ ಶಿಶುಗಳ ಆಂಬುಲೆನ್ಸ್ ಸೇವೆ ಸೇರಿ ವಿವಿಧ ಕ್ರಮಗಳನ್ನು ಕೈಗೊಂಡರೂ ನಿರೀಕ್ಷಿತ ಮಟ್ಟದ ಸಾಧನೆ ಮಾಡಲು ಸಾಧ್ಯವಾಗಿಲ್ಲ. ಆದ್ದರಿಂದ ಎಫ್‌ಎಂಸಿ ಮೂಲಕ ಭ್ರೂಣಾವಸ್ಥೆಯಿಂದಲೇ ಮೇಲ್ವಿಚಾರಣೆಗೆ ಕ್ರಮಕೈಗೊಳ್ಳಲಾಗಿದೆ. ಇದರಿಂದ ನವಜಾತ ಶಿಶು ಮರಣ ಪ್ರಮಾಣ ತಗ್ಗಿಸಲು ಸಾಧ್ಯ ಎನ್ನುತ್ತಾರೆ ಸಂಸ್ಥೆಯ ವೈದ್ಯರು.

'ಗರ್ಭಾವಸ್ಥೆಯ ಮೊದಲ ಮೂರು ತಿಂಗಳ ಒಳಗೆ ಭ್ರೂಣದ ಅಸಹಜತೆ, ಅಂಗ ನ್ಯೂನತೆ, ರಚನಾತ್ಮಕ ಹಾಗೂ ಆನುವಂಶಿಕ ಸಮಸ್ಯೆಗಳು ಸೇರಿ ಒಟ್ಟಾರೆ ಆರೋಗ್ಯವನ್ನು ನಿರ್ಣಯಿಸಲಾಗುತ್ತದೆ. ಅಗತ್ಯ ಇದ್ದಲ್ಲಿ ಭ್ರೂಣಾವಸ್ಥೆಯಲ್ಲಿಯೇ ಚಿಕಿತ್ಸೆ ನೀಡಿ, ಸಮಸ್ಯೆ ಪರಿಹರಿಸಲಾಗುವುದು. ವಿವಿಧ ಸರ್ಕಾರಿ ಆರೋಗ್ಯ ವಿಮೆಯಡಿ ಬಿಪಿಎಲ್ ಕುಟುಂಬದವರಿಗೆ ಕೇಂದ್ರದಲ್ಲಿ ಉಚಿತ ವೈದ್ಯಕೀಯ ಸೇವೆ ಸಿಗಲಿದೆ' ಎಂದು ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.



ಫೀಟಲ್ ಮೆಡಿಸಿನ್‌ನಲ್ಲಿ ಪರಿಣತಿ ಹೊಂದಿದ ವೈದ್ಯರು ನಮ್ಮಲ್ಲಿದ್ದಾರೆ. ಕೇಂದ್ರವನ್ನು ಸಜ್ಜುಗೊಳಿಸಲಾಗುತ್ತಿದ್ದು, ಮುಂದಿನ ಎರಡು ತಿಂಗಳಲ್ಲಿ ಕಾರ್ಯಾರಂಭಿಸಲಿದೆ

ಡಾ. ಸಂಜಯ್ ಕೆ.ಎಸ್., ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

'ಆರೋಗ್ಯಯುತ ಮಗುವಿಗೆ ಸಹಕಾರಿ'

'ಭ್ರೂಣದಲ್ಲಿ ಸರಿಪಡಿಸಲಾಗದ ಗಂಭೀರ ಸ್ವರೂಪದ ಸಮಸ್ಯೆ ಕಂಡು ಬಂದಲ್ಲಿ, ಜನಿಸಿದ ಒಂದು ವರ್ಷದೊಳಗೆ ಮಗು ಮರಣ ಹೊಂದುವ ಸಾಧ್ಯತೆಗಳು ಹೆಚ್ಚಿದ್ದ ಸಂದರ್ಭದಲ್ಲಿ, ತಾಯಿಯ ಆರೋಗ್ಯಕ್ಕೆ ತೊಂದರೆ ಆಗುವ ಮುನ್ನವೇ ಕಾನೂನು ಅನ್ವಯ ಗರ್ಭಪಾತಕ್ಕೆ ಕೇಂದ್ರ ನೆರವಾಗಲಿದೆ. ಈ ಮೂಲಕ ನ್ಯೂನತೆಯುಳ್ಳ ಶಿಶುಗಳ ಜನನ, ಹೆರಿಗೆ ಸಂದರ್ಭದಲ್ಲಿ ಹಾಗೂ ನಂತರ ಒಂದು ವರ್ಷದ ಅವಧಿಯಲ್ಲಿ ಶಿಶು ಮರಣದಂತಹ ಸಮಸ್ಯೆಗಳನ್ನು ತಡೆಯಲು ಕೇಂದ್ರ ಸಹಕಾರಿಯಾಗಲಿದೆ' ಎಂದು ಸಂಸ್ಥೆಯ ವೈದ್ಯರು ವಿವರಿಸಿದರು.

'ಅಂಗ ನ್ಯೂನತೆ, ಬುದ್ಧಿ ಮಾಂದ್ಯತೆ, ದೃಷ್ಟಿ ಮತ್ತು ಶ್ರವಣ ದೋಷ, ಮಿದುಳಿನ ಸಮಸ್ಯೆ, ರಕ್ತ ಕಣಗಳ ಸಮಸ್ಯೆ, ಶ್ವಾಸಕೋಶದ ಸಮಸ್ಯೆ ಸೇರಿ ನವಜಾತ ಶಿಶುಗಳಲ್ಲಿ ಕಾಣಿಸಿಕೊಳ್ಳುವ ವಿವಿಧ ಸಮಸ್ಯೆಗಳನ್ನು ತಡೆಯಲು ಈ ಕೇಂದ್ರ ನೆರವಾಗಲಿದೆ. ಕೇಂದ್ರಕ್ಕೆ ಬರುವವರಿಗೆ ಆಪ್ತ ಸಮಾಲೋಚನೆಯನ್ನೂ ಒದಗಿಸಲಾಗುತ್ತದೆ. ಈಗಾಗಲೇ ಮೊದಲ ಮಗು ಆನುವಂಶಿಕ ಸಮಸ್ಯೆಗೆ ಒಳಗಾಗಿದ್ದಲ್ಲಿ, ಎರಡನೇ ಮಗು ಈ ಸಮಸ್ಯೆಗೆ ಒಳಗಾಗದಂತೆ ತಡಯಲು ಕೇಂದ್ರ ನೆರವಾಗುತ್ತದೆ' ಎಂದರು.

ಸುದ್ದಿ 2 ನಿಮಿಷ

ರೌಡಿಶೀಟರ್ ಮೇಲೆ ಹಲ್ಲೆ: ಮೂವರು ಪೊಲೀಸರ ವಶಕ್ಕೆ

ಬೆಂಗಳೂರು: ಕಪಿಲಾನಗರದಲ್ಲಿ ಮನೆಗೆ ನುಗ್ಗಿ ರೌಡಿಶೀಟರ್ ಮೇಲೆ ಹಲ್ಲೆ ನಡೆಸಿ, ಚಾಕುವಿನಿಂದ ಇರಿದಿದ್ದ ಪ್ರಕರಣ ಸಂಬಂಧ ರೌಡಿ ಶೀಟರ್‌ಗಳು ಸೇರಿದಂತೆ ಮೂರು ಮಂದಿಯನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಭಾನುವಾರ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಘಟನೆಯಲ್ಲಿ ನಂದಿನಿ ಲೇಔಟ್ ಪೊಲೀಸ್ ಠಾಣೆಯ ರೌಡಿ ಪಟ್ಟಿಯಲ್ಲಿರುವ ನರೇಂದ್ರ ಅಲಿಯಾಸ್ ದಾಸ್ ಸೇರಿದಂತೆ ಐವರು ಹಲ್ಲೆಗೆ ಒಳಗಾಗಿದ್ದರು. ರಮೇಶ್ ಅಲಿಯಾಸ್ ಬಿಳಿಲು, ಸಂಕೇತ್ (ಇಬ್ಬರೂ ರೌಡಿಶೀಟರ್), ತೇಜಸ್ ಅಲಿಯಾಸ್ ಟೈಗರ್, ಮಂಜುನಾಥ್, ದೀಕ್ಷಿತ್, ಅರುಣ್ ವಿರುದ್ಧ ಪ್ರಕರಣ ದಾಖಲಾಗಿತ್ತು.

'ನರೇಂದ್ರ ಹಾಗೂ ರಮೇಶ್ ಸಹಚರರ ಮಧ್ಯೆ ಹಳೇ ದ್ವೇಷವಿತ್ತು. ಎರಡೂ ಕಡೆಯವರು ಹಲವು ಬಾರಿ ಗಲಾಟೆ ಮಾಡಿಕೊಂಡಿದ್ದರು. ರಮೇಶ್ ಮತ್ತು ಸಹಚರರು ನರೇಂದ್ರ ಅವರ ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದರು. ಪ್ರಕರಣ ಸಂಬಂಧ ಮೂವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಲಾಂಗ್ ಹಾಗೂ ಇತರೆ ಮಾರಕಾಸ್ತ್ರಗಳನ್ನು ಹಿಡಿದು ರಸ್ತೆಯಲ್ಲಿ ಓಡಾಡಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

ಖಾಲಿ ಕೆರೆಗೆ ಇಳಿದ ಹೆಲಿಕಾಪ್ಟರ್!



ಬಂಗಾರಪೇಟೆ: ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ ಭಾನುವಾರ ತಾಲ್ಲೂಕಿನ ದೊಡ್ಡೂರು ಕರಪಹಳ್ಳಿಯ ಖಾಲಿ ಕೆರೆಯಲ್ಲಿ ಸುರಕ್ಷಿತವಾಗಿ ಇಳಿದಿದೆ.

ಬೆಂಗಳೂರಿನ ಯಲಹಂಕದಿಂದ ಮಧ್ಯಾಹ್ನ ಮೂರು ಗಂಟೆಗೆ ಹಾರಿದ ವಾಯುಪಡೆಯ ಎರಡು ಹೆಲಿಕಾಪ್ಟರ್ ಚೆನ್ನೈನ ತಾಂಬರಂ ವಾಯುನೆಲೆಗೆ ಹೊರಟಿದ್ದವು. ಮಾರ್ಗಮಧ್ಯೆ ಒಂದು ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ದೊಡ್ಡೂರು ಕರಪನಹಳ್ಳಿ ಮೇಲೆ ಕೆಲ ಹೊತ್ತು ಹಾರಾಟ ನಡೆಸಿ, ಕೊನೆಗೆ ಸಂಜೆ 4ಕ್ಕೆ ಖಾಲಿ ಕೆರೆಯಲ್ಲಿ ಸುರಕ್ಷಿತವಾಗಿ ಇಳಿದಿದೆ. ಮತ್ತೊಂದು ಹೆಲಿಕಾಪ್ಟರ್ ಚೆನ್ನೈನ ತಾಂಬರಂ ಕಡೆಗೆ ಹೊರಟು ಹೋಗಿದೆ.

ತುರ್ತು ಭೂಸ್ಪರ್ಶ ಮಾಡಿದ ಹೆಲಿಕಾಪ್ಟರ್‌ನಲ್ಲಿ ಇಬ್ಬರು ಪೈಲಟ್ ಮತ್ತು ಒಬ್ಬ ಗ್ರೌಂಡ್ ಸ್ಟಾಫ್ ಇದ್ದರು. ಬೆಂಗಳೂರಿನಿಂದ ಮತ್ತೊಂದು ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ತಂಡವೊಂದು ಸ್ಥಳಕ್ಕೆ ಆಗಮಿಸಿ ದುರಸ್ತಿ ಕಾರ್ಯ ಕೈಗೊಂಡಿದೆ. ಪೊಲೀಸ್ ವರಿಷ್ಠಾಧಿಕಾರಿ ಶಾಂತರಾಜು ಸ್ಥಳಕ್ಕೆ ಭೇಟಿ ನೀಡಿದ್ದರು.



ಯಲಹಂಕ ಉಪನಗರದಲ್ಲಿ ಆಯೋಜಿಸಿದ್ದ ಪತ್ರಿಕಾ ವಿತರಕರ ದಿನಾಚರಣೆಯಲ್ಲಿ ದಿನಪತ್ರಿಕೆ ವಿತರಕರ ಸಂಘದ ಪದಾಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರೊಂದಿಗೆ ಶಾಸಕ ಎಸ್‌.ಆರ್‌.ವಿಶ್ವನಾಥ್ ಪಾಲ್ಗೊಂಡಿದ್ದರು

'ಪತ್ರಿಕಾ ವಿತರಕರ ಸೇವೆ ಶ್ಲಾಘನೀಯ'

ಪ್ರಜಾವಾಣಿ ವಾರ್ತೆ

ಯಲಹಂಕ: 'ಚಳಿ, ಮಳೆಯನ್ನು ಲೆಕ್ಕಿಸದೆ, ಎಂಥ ಸಂಕಷ್ಟ ಕಾಲದಲ್ಲಿಯೂ ದಿನಪತ್ರಿಕೆಗಳನ್ನು ಮನೆ ಮನೆಗೆ ತಲುಪಿಸುವ ಪತ್ರಿಕಾ ವಿತರಕರ ಸೇವೆಗೆ ಬೆಲೆಕಟ್ಟಲು ಸಾಧ್ಯವಿಲ್ಲ. ಅವರ ಸೇವೆ ಶ್ಲಾಘನೀಯ' ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಪ್ರಶಂಸಿಸಿದರು.

ಯಲಹಂಕ ದಿನಪತ್ರಿಕೆ ವಿತರಕರ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ 'ಪತ್ರಿಕಾ ವಿತರಕರ ದಿನಾಚರಣೆ' ಉದ್ಘಾಟಿಸಿ ಅವರು ಮಾತನಾಡಿದರು.

'ತಮಗೆಷ್ಟೇ ಕಷ್ಟಗಳಿದ್ದರೂ, ಸಮಯಕ್ಕೆ ಸರಿಯಾಗಿ ಓದುಗರಿಗೆ ಪತ್ರಿಕೆಗಳನ್ನು ತಲುಪಿಸುವ ಪತ್ರಿಕಾ ವಿತರಕರನ್ನು ನಾನು ಸಹೋದರರಂತೆ ಭಾವಿಸಿದ್ದೇನೆ' ಎಂದರು.

'ಈ ಭಾಗದ ಪತ್ರಿಕಾ ವಿತರಕರ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ. ಮುಂದೆಯೂ ಅವರ ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು' ಎಂದು ಭರವಸೆ ನೀಡಿದರು.

ಪತ್ರಿಕಾ ವಿತರಕರಿಗೆ ಸೈಕಲ್, ಸಾಧ್ಯವಾದರೆ ದ್ವಿಚಕ್ರವಾಹನ ಹಾಗೂ ಪತ್ರಿಕಾ ವಿತರಕರ ಮಕ್ಕಳಿಗೆ ಶೈಕ್ಷಣಿಕ ನೆರವು ನೀಡುವಂತೆ ಸಂಘದ ಪದಾಧಿಕಾರಿಗಳು ಇದೇ ವೇಳೆ ಶಾಸಕರಿಗೆ ಮನವಿ ಮಾಡಿದರು.

ಅತ್ಯುತ್ತಮ ಕಾರ್ಯನಿಷ್ಠೆಗಾಗಿ ಹಿರಿಯ ಪತ್ರಿಕಾ ವಿತರಕರಾದ ರಮೇಶ್, ಪಿ.ಕೆ.ಎಸ್.ಶಂಕರ್, ಕುಮಾರ್, ರಾಜಶೇಖರ ರೆಡ್ಡಿ, ರವೀಂದ್ರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಎಸ್.ಎಸ್.ಎಲ್.ಸಿ ಮತ್ತು ಪದವಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಿದ ಪತ್ರಿಕಾ ವಿತರಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮಾಡಿ ಸನ್ಮಾನಿಸಲಾಯಿತು.

ಪತ್ರಿಕಾ ವಿತರಕರ ಸಂಘದ ರಾಜ್ಯಘಟಕದ ಅಧ್ಯಕ್ಷ ಶಂಭುಲಿಂಗ, ಯಲಹಂಕ ದಿನಪತ್ರಿಕೆ ವಿತರಕರ ಸಂಘದ ಅಧ್ಯಕ್ಷ ಎಂ.ಸತೀಶ್, ಪದಾಧಿಕಾರಿಗಳಾದ ವೈ.ಎಂ.ಮಂಜುನಾಥ್, ಪಿ.ಕೆ. ಎಸ್. ಶಂಕರ್, ಕೆ.ಎಸ್.ಸುರೇಶ್, ವೈ.ಸಿ.ವೀರಭದ್ರ, ಪ್ರಶಾಂತ್, ವೆಂಕಟೇಶಮೂರ್ತಿ, ಉಮೇಶ್, ವೀರೇಶ್, ಶಶಿ, ರವೀಂದ್ರಕುಮಾರ್, ಪ್ರದೀಪ್, ಮನು, ದೇವರಾಜ್, ನವೀನ್, ಮುನಿರಾಜು, ಚಂದ್ರು, ಮಧು, ಪವನ್ ಉಪಸ್ಥಿತರಿದ್ದರು.

ತಾಂತ್ರಿಕ ಸಮಸ್ಯೆ: ಮೆಟ್ರೊ ಸಂಚಾರ ವ್ಯತ್ಯಯ

ಬೆಂಗಳೂರು: ವೈಟ್‌ಫೀಲ್ಡ್ ಮೆಟ್ರೊ ನಿಲ್ದಾಣದಲ್ಲಿ ತಾಂತ್ರಿಕ ದೋಷದಿಂದಾಗಿ ನೇರಳೆ ಮಾರ್ಗದ ವೈಟ್‌ಫೀಲ್ಡ್ ಮತ್ತು ಐಟಿಪಿಎಲ್ ನಡುವೆ ಭಾನುವಾರ ಬೆಳಿಗ್ಗೆ ಅರ್ಧ ಗಂಟೆ ಮೆಟ್ರೊ ಸಂಚಾರ ಸ್ಥಗಿತಗೊಂಡಿತು.

ವೈಟ್‌ಫೀಲ್ಡ್ ನಿಲ್ದಾಣದಲ್ಲಿ ಬೆಳಿಗ್ಗೆ 8.25ಕ್ಕೆ ಸಿಗ್ನಲಿಂಗ್ ಸಮಸ್ಯೆ ಉಂಟಾಯಿತು. ತಾಂತ್ರಿಕ ಸಿಬ್ಬಂದಿ ಅರ್ಧ ಗಂಟೆಯಲ್ಲಿ ಸಮಸ್ಯೆ ಸರಿಪಡಿಸಿದರು. ಈ ವೇಳೆ ಚಲ್ಲಘಟ್ಟದಿಂದ ಐಟಿಪಿಎಲ್ ಮೆಟ್ರೊ ನಿಲ್ದಾಣಗಳ ನಡುವೆ ಶಾರ್ಟ್ ಲೂಪ್ ರೈಲು ಸಂಚಾರ ನಡೆಸಲಾಯಿತು. ಬೆಳಿಗ್ಗೆ 8.55ರಿಂದ ಪೂರ್ಣ ಪ್ರಮಾಣದಲ್ಲಿ ಸಂಚಾರ ಆರಂಭವಾಯಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹಸಿರು ಮಾರ್ಗದಲ್ಲಿ ಯಾವುದೇ ವ್ಯತ್ಯಯವಾಗಿಲ್ಲ ಎಂದು ಮಾಹಿತಿ ನೀಡಿದ್ದಾರೆ. ಭಾನುವಾರ ಆದ ಕಾರಣದಿಂದ ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು. ಈ ಪ್ರಯಾಣಿಕರು ಅರ್ಧ ಗಂಟೆ ಪರದಾಡುವಂತಾಯಿತು.

ದೊಣ್ಣೆಯಿಂದ ಹಲ್ಲೆ ನಡೆಸಿ ಸ್ನೇಹಿತನ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಹಣದ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ದೊಣ್ಣೆಯಿಂದ ಹಲ್ಲೆ ನಡೆಸಿ, ಸ್ನೇಹಿತನನ್ನೇ ಕೊಲೆ ಮಾಡಿದ ಘಟನೆ ನೆಲಮಂಗಲದ ಮಹಿಮಾಪುರದ ಕಾರ್ಮಿಕರ ಶೆಡ್‌ನಲ್ಲಿ ಶನಿವಾರ ನಡೆದಿದೆ.

ರಾಜೀವ್ ಗಾಂಧಿ ಪೆರುಮಾಳ್ (40) ಎಂಬುವರು ಕೊಲೆಯಾಗಿದ್ದು, ಆರೋಪಿಯನ್ನು ಪೊಲೀಸರು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

'ರಾಜೀವ್ ಗಾಂಧಿ ಪೆರುಮಾಳ್ ಮತ್ತು ಆರೋಪಿ ಇಬ್ಬರೂ ತಮಿಳುನಾಡಿನ ಸೇಲಂನವರು. ಇಬ್ಬರೂ ಒಂದೇ ಕೊಠಡಿಯಲ್ಲಿ ವಾಸವಾಗಿದ್ದರು. ಆದರೆ, ಹಣದ ವಿಚಾರಕ್ಕೆ ಜಗಳ ಮಾಡಿಕೊಂಡಿದ್ದಾರೆ. ಕೋಪದಲ್ಲಿ ಆರೋಪಿ ದೊಣ್ಣೆಯಿಂದ ರಾಜೀವ್ ಮೇಲೆ ಹಲ್ಲೆ ಮಾಡಿದ್ದಾನೆ. ತೀವ್ರ ರಕ್ತಸ್ರಾವದಿಂದ ಕುಸಿದು ಬಿದ್ದ ರಾಜೀವ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆಗೆ ಸ್ಪಂದಿಸಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ಬೆರಳಚ್ಚು ತಜ್ಞರು ಭೇಟಿ ನೀಡಿ ಸಾಕ್ಷ್ಯಗಳನ್ನು ಕಲೆ ಹಾಕಿದ್ದಾರೆ. ಬೆಂಗಳೂರು ಗ್ರಾಮಾಂತರ ಎಸ್‌ಪಿ ಸಿ.ಕೆ.ಬಾಬಾ, ಹೆಚ್ಚುವರಿ ಎಸ್‌ಪಿ ನಾಗೇಶ್, ಡಿವೈಎಸ್ಪಿ ರವಿ, ಇನ್‌ಸ್ಪೆಕ್ಟರ್ ನರೇಂದ್ರ ಬಾಬು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗುಂಡಿ ಮುಚ್ಚಲು ಸಾರ್ವಜನಿಕರ ಆಗ್ರಹ

ಪ್ರಜಾವಾಣಿ ವಾರ್ತೆ


ಬಾಗಲಗುಂಟೆ ವಾರ್ಡ್ ಅಂದಾನಪ್ಪ ಬಡಾವಣೆಯ 5ನೇ ಅಡ್ಡರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ಪೀಣ್ಯ ದಾಸರಹಳ್ಳಿ: ಬಿಬಿಎಂಪಿ ದಾಸರಹಳ್ಳಿ ವಲಯದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ಪ್ರಗತಿಯಲ್ಲಿದೆ. ಆದರೆ, ಇಲ್ಲಿನ ವಾರ್ಡ್‌ಗಳ ರಸ್ತೆಗಳಲ್ಲಿ ಗುಂಡಿಗಳಿಗಿಂತ ಹೆಚ್ಚಾಗಿ, ಬೇರೆ ಕಾಮಗಾರಿಗಳಿಗಾಗಿ ರಸ್ತೆ ಅಗೆದು ಹಾಗೇ ಬಿಟ್ಟಿರುವುದರಿಂದ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ.

ಒಳಚರಂಡಿ ಕಾಮಗಾರಿ, ಕುಡಿಯುವ ನೀರು ಪೂರೈಕೆ ಪೈಪ್‌ಗಳ ಅಳವಡಿಕೆ, ವಿದ್ಯುತ್ ಕೇಬಲ್ ಅಳವಡಿಕೆ ಹೀಗೆ ಭಿನ್ನ ಕಾರಣಗಳಿಗೆ ರಸ್ತೆಗಳನ್ನು ಅಗೆಯಲಾಗಿದೆ. ಹಾಗೆಯೇ ಬಿಡಲಾಗಿದೆ. ಈ ರಸ್ತೆಗಳಲ್ಲಿನ ಸಮಸ್ಯೆ, ಬಿಬಿಎಂಪಿಯ ಹಳೆಯ ವಾರ್ಡ್‌ಗಳಿಗಿಂತ, 110 ಹಳ್ಳಿಗೆ ಸೇರಿದ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣುತ್ತದೆ.

'ರಾಜಗೋಪಾಲ ಬಡಾವಣೆಯ ಎಲ್ಲಾ ಕಡೆಗಳಲ್ಲೂ ಅಡ್ಡರಸ್ತೆಗಳು ಹಾಳಾಗಿವೆ. ಈಗ ಬಿಬಿಎಂಪಿ ಸಿಬ್ಬಂದಿ ಗುಂಡಿಗಳನ್ನು ಮುಚ್ಚುತ್ತಿದ್ದಾರೆ. ಕೆಲವೆಡೆ ಹಾಗೆ ಇದ್ದು, ಸಮರ್ಪಕವಾಗಿ ಗುಂಡಿಗಳನ್ನು ಮುಚ್ಚುವ ಕಾರ್ಯ ಕೈಗೊಳ್ಳಬೇಕು ಎಂದು' ಎಂದು ನಿವಾಸಿ ಕುಮಾರ್ ಆಗ್ರಹಿಸಿದ್ದಾರೆ.

'ಈಗ ನಮ್ಮ ಭಾಗದಲ್ಲಿ ಡಾಂಬರೀಕರಣ ಆಗಿದೆ. ಚಿಕ್ಕಸಂದ್ರ, ಶೆಟ್ಟಿಹಳ್ಳಿ, ಗೆಳೆಯರ ಬಳಗ ಬಡಾವಣೆಗಳಲ್ಲಿ ಕಾವೇರಿ ನೀರಿನ ಸಂಪರ್ಕ ಹಾಗೂ ಒಳಚರಂಡಿ ಕಾಮಗಾರಿಗಾಗಿ ಅಗೆದಿದ್ದ ರಸ್ತೆಗಳನ್ನು ಹಾಗೇ ಬಿಟ್ಟಿದ್ದಾರೆ. ಅದನ್ನು ತಕ್ಷಣವೇ ಮುಚ್ಚಿ ಸರಿಪಡಿಸಬೇಕು' ಎಂದು ಚಿಕ್ಕಸಂದ್ರ ನಿವಾಸಿ ಕಿರಣ್ ಒತ್ತಾಯಿಸಿದರು.

'ದಾಸರಹಳ್ಳಿ ವಲಯದ ಕೆಲವು ಬಡಾವಣೆಗಳಲ್ಲಿ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವ ಕಾರ್ಯ ಮುಗಿದಿದೆ. ಉಳಿದಿರುವ ಬಡಾವಣೆಗಳಲ್ಲೂ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತದೆ' ಎಂದು ಬಿಬಿಎಂಪಿ ವಲಯ ಸಹಾಯಕ ಎಂಜಿನಿಯರ್ ವೆಂಕಟೇಶ್ ಅವರು ಪ್ರತಿಕ್ರಿಯಿಸಿದರು.

'ಅನುದಾನ ಅಗತ್ಯ'

'ದಾಸರಹಳ್ಳಿ ವಲಯದ ಎಲ್ಲಾ ವಾರ್ಡ್‌ಗಳಲ್ಲೂ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ನಡೆಯುತ್ತಿದೆ. ಕೆಲ ಅಡ್ಡ ರಸ್ತೆಗಳಲ್ಲಿ ರೋಡ್ ಕಟ್ಟಿಂಗ್ ಮಾಡಿದ್ದು, ರಸ್ತೆ ಹಾಳಾಗಿದೆ. ಅಂತಹ ಕಡೆಗಳಲ್ಲಿ ಡಾಂಬರೀಕರಣ ಮಾಡಬೇಕು. ಈಗಿರುವ ಅನುದಾನ ಸಾಕಾಗುತ್ತಿಲ್ಲ' ಎಂದು ದಾಸರಹಳ್ಳಿ ವಲಯ ಬಿಬಿಎಂಪಿ ಮುಖ್ಯ ಎಂಜಿನಿಯರ್ ರವಿ ತಿಳಿಸಿದರು.

ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ದಶಮಾನೋತ್ಸವ ಸಮಾರಂಭದಲ್ಲಿ ಡಿಕೆಶಿ ಭರವಸೆ

ಸೋಲೂರನ್ನು ನೆಲಮಂಗಲಕ್ಕೆ ಸೇರಿಸಲು ಬದ್ಧ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನಲ್ಲಿರುವ ಸೋಲೂರನ್ನು ನೆಲಮಂಗಲ ತಾಲ್ಲೂಕಿಗೆ ಸೇರಿಸುವುದು, ಪಟ್ಟಣಕ್ಕೆ ಮೆಟ್ರೊ ವಿಸ್ತರಿಸುವುದು, ವೃಷಭಾವತಿ ಹಾಗೂ ಎತ್ತಿನಹೊಳೆ ಮೂಲಕ ಶಾಶ್ವತ ನೀರಾವರಿ ಕಲ್ಪಿಸುವುದು– ಈ ಮೂರು ಕೆಲಸಗಳನ್ನು ಮಾಡಿ ಕೊಡಲು ನಾನು ಬದ್ಧನಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು.

ಇಲ್ಲಿನ ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ದಶಮಾನೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

'ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿರುವ ಸೋಲೂರನ್ನು ನೆಲಮಂಗಲ ತಾಲ್ಲೂಕಿಗೆ ಸೇರಿಸುವ ವಿಚಾರದಲ್ಲಿ ಸಂಸದ ಡಾ.ಕೆ.ಸುಧಾಕರ್ ರಾಜಕೀಯ ಮಾಡುತ್ತಿದ್ದಾರೆ. ಆ ಪ್ರಯತ್ನದ ಫಲ ಶಾಸಕ ಎನ್. ಶ್ರೀನಿವಾಸ್ ಅವರಿಗೆ ಸಲ್ಲಬೇಕು' ಎಂದು ಹೇಳಿದರು.

'ವಿದ್ಯಾರ್ಥಿಗಳು ಉದ್ಯೋಗಿಗಳಾಗುವ ಬದಲು, ಉದ್ಯೋಗದಾತರಾಗಲು ಪ್ರಯತ್ನಿಸಬೇಕು. ವಿದ್ಯಾರ್ಥಿಗಳು ದೊಡ್ಡದಾಗಿ ಕನಸು ಕಾಣಬೇಕು. ಆ ಕನಸು ನನಸಾಗಿಸಲು ಹಂಬಲಿಸಬೇಕು. ಅದಕ್ಕಾಗಿ ಬದ್ಧತೆ, ಪರಿಶ್ರಮ ಹಾಕಬೇಕು' ಎಂದರು.

ಶಾಸಕ ಎನ್.ಶ್ರೀನಿವಾಸ್ ಮಾತನಾಡಿ, 'ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ಭವನ ನಿರ್ಮಾಣಕ್ಕೆ ನಗರದ ವ್ಯಾಪ್ತಿಯಲ್ಲಿ 1 ಎಕರೆ 19 ಗುಂಟೆ ಜಮೀನು ಮಂಜೂರಾತಿ ಪ್ರಕ್ರಿಯೆ ಚಾಲನೆಯಲ್ಲಿದೆ. ಭವನದ ಶಂಕು ಸ್ಥಾಪನೆಗೆ ₹ 1 ಕೋಟಿ ವೈಯಕ್ತಿಕ ನೆರವು ನೀಡಲಾಗುವುದು. ₹400 ಕೋಟಿ ವೆಚ್ಚದಲ್ಲಿ ಕೆ.ಸಿ ವ್ಯಾಲಿ ಮೂಲಕ ತಾಲ್ಲೂಕಿನ 69 ಕೆರೆಗಳನ್ನು ತುಂಬಿಸಲಾಗುವುದು' ಎಂದು ಭರವಸೆ ನೀಡಿದರು.

ವಿಧಾನ ಪರಿಷತ್ ಸದಸ್ಯ ರವಿ ಮಾತನಾಡಿ, ದೊಡ್ಡ ಹಿಡುವಳಿದಾರರಾಗಿದ್ದ ಒಕ್ಕಲಿಗರು ವಿಭಕ್ತ ಕುಟುಂಬಗಳಾಗಿ ಸಣ್ಣ ಹಿಡುವಳಿದಾರರಾಗುತ್ತಿದ್ದಾರೆಂದು ವಿಷಾಧಿಸಿದ ಅವರು, ಯಾವುದೇ ಕಾರಣಕ್ಕೂ ಜಮೀನುಗಳನ್ನು ಮಾರದಂತೆ ಎಚ್ಚರಿಸಿದರು. ಕಾರ್ಯಕ್ರಮದಲ್ಲಿ, ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಉತ್ತಮ ಅಂಕ ಪಡೆದ 200ಕ್ಕೂ ಹೆಚ್ಚು ಪ್ರತಿಭಾವಂತರನ್ನು ಪುರಸ್ಕರಿಸಲಾಯಿತು.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಿದರು. ಶಾಸಕ ರವಿ, ಕಾರ್ಯದರ್ಶಿ ಎನ್‌. ಸತೀಶ್, ರಮಣಾನಂದ ಸ್ವಾಮೀಜಿ, ಕುಮಾರಚಂದ್ರಶೇಖರನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಟ್ರಸ್ಟ್ ಉಪಾಧ್ಯಕ್ಷ ಬಿ.ರಮೇಶ್, ಶಾಸಕ ಎನ್‌.ಶ್ರೀನಿವಾಸ್, ರಾಜ್ಯ ಒಕ್ಕಲಿಗರ ಸಂಘದ ಉಪಾಧ್ಯಕ್ಷ ಆರ್‌.ಪ್ರಕಾಶ್, ಮಧುಸೂದನ್, ಕಾಂಗ್ರೆಸ್‌ನ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಆರ್‌.ಗೌಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಪರಾಧ ನಿಯಂತ್ರಣಕ್ಕೆ 'ಎಫ್‌ಆರ್‌ಎಸ್'

ಪ್ರಾಯೋಗಿಕ ಅನುಷ್ಠಾನ: ಎಐ ತಂತ್ರಜ್ಞಾನವುಳ್ಳ 1,000ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾ ಅಳವಡಿಕೆ

• ಚೇತನ್ ಬಿ.ಸಿ.

ಬೆಂಗಳೂರು: 'ಸೇಫ್ ಸಿಟಿ' ಯೋಜನೆಯಡಿ ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತಂದಿರುವ ಮುಖಚಹರೆ ಗುರುತಿಸುವ ವ್ಯವಸ್ಥೆ (ಎಫ್‌ಆರ್‌ಎಸ್) ಬೀದಿಗಳಲ್ಲಿ ನಡೆಯುವ ಅಪರಾಧ ಕೃತ್ಯಗಳ ನಿಯಂತ್ರಣಕ್ಕೆ ಪೊಲೀಸರಿಗೆ ನೆರವಾಗುತ್ತಿದೆ.

ಈ ಯೋಜನೆಯಡಿ ನಗರದ ವಿವಿಧೆಡೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವುಳ್ಳ 1,000ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಈ ಕ್ಯಾಮೆರಾಗಳು ಕಳೆದ 90 ದಿನಗಳ ಅವಧಿಯಲ್ಲಿ ಅಪರಾಧ ಹಿನ್ನೆಲೆಯ 2.5 ಲಕ್ಷ ವ್ಯಕ್ತಿಗಳನ್ನು ಗುರುತಿಸಿವೆ. ಈ ಕ್ಯಾಮೆರಾಗಳಲ್ಲಿ ಸೆರೆಸಿಕ್ಕ ಫೋಟೊಗಳ ನೆರವಿನಲ್ಲಿ ಕನಿಷ್ಠ 10 ಮಂದಿಯನ್ನು ಬಂಧಿಸಿರುವ ಮಾಹಿತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ನಗರದ ವಿವಿಧೆಡೆ ಅಳವಡಿಸಿರುವ ಕ್ಯಾಮೆರಾಗಳನ್ನು ಪೊಲೀಸ್ ಕಮಾಂಡ್ ಕೇಂದ್ರದಲ್ಲಿರುವ ಎಫ್‌ಆರ್‌ಎಸ್ ಘಟಕದ ಜೊತೆ ಜೋಡಿಸಲಾಗಿದೆ. ಪೊಲೀಸರು ಈಗ ಹೊಸ ವ್ಯವಸ್ಥೆಯಲ್ಲಿ ಮತ್ತಷ್ಟು ಸುಧಾರಣೆ ತರುವ ದಿಕ್ಕಿನಲ್ಲಿ ಪ್ರಯತ್ನಿಸುತ್ತಿದ್ದಾರೆ.

'ಅಪರಾಧ ಕೃತ್ಯಗಳಿಗೆ ಸಂಬಂಧಿಸಿದ ದತ್ತಾಂಶ ಮತ್ತು ಎಫ್‌ಆರ್‌ಎಸ್ ಕ್ಯಾಮೆರಾಗಳು ಸೆರೆಹಿಡಿಯುವ ವ್ಯಕ್ತಿಗಳ ಭಾವಚಿತ್ರವನ್ನು ತಾಳೆಮಾಡಿ, ನಿಖರ ಮಾಹಿತಿ ಒದಗಿಸುವ ವ್ಯವಸ್ಥೆಯನ್ನು ರೂಪಿಸಬೇಕಿದೆ. ಇದಕ್ಕಾಗಿ ಮುಖಚಹರೆ ಗುರುತಿಸುವ ಎರಡು ಸಾಫ್ಟ್‌ವೇರ್‌ಗಳನ್ನು ಕಮಾಂಡ್ ಕೇಂದ್ರದಲ್ಲಿ ಪರೀಕ್ಷಿಸಲಾಗುತ್ತಿದೆ. ಯಾವುದು ಉತ್ತಮವೋ ಅದನ್ನು ಅಳವಡಿಸಿಕೊಳ್ಳುತ್ತೇವೆ' ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ವಾಹನಗಳ ನೋಂದಣಿ ಸಂಖ್ಯೆಯನ್ನು ಸ್ವಯಂಚಾಲಿತವಾಗಿ ನಿಖರವಾಗಿ ಗುರುತಿಸುವ (ಎಎನ್‌ಪಿಆರ್) ವ್ಯವಸ್ಥೆ ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ. ಅದೇ ಮಾದರಿಯಲ್ಲಿ ಎಫ್‌ಆರ್‌ಎಸ್ ಅನ್ನೂ ಮೇಲ್ದರ್ಜೆಗೇರಿಸುವ ಗುರಿ ಪೊಲೀಸರ ಮುಂದಿದೆ ಎಂದರು.

ಒಟ್ಟು 7,500 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಅವುಗಳ ಪೈಕಿ 1,000 ಕ್ಯಾಮೆರಾಗಳ ಬಳಕೆಗೆ ಮಾತ್ರ 'ಸಾಫ್ಟ್‌ವೇರ್ ಲೈಸೆನ್ಸ್' ಇದೆ. ಒಂದು ಬಾರಿಗೆ 1,000 ಕ್ಯಾಮೆರಾಗಳನ್ನು ಬಳಸಬಹುದು. ಆ ಕ್ಯಾಮೆರಾಗಳನ್ನು ಬೇಕಾದ ದಿಕ್ಕಿಗೆ ತಿರುಗಿಸಿ ಚಿತ್ರ ಸೆರೆಹಿಡಿಯಬಹುದು ಎನ್ನುತ್ತಾರೆ ಪೊಲೀಸರು.

'40ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿಯೊಬ್ಬನನ್ನು ಕೊರಟಗೆರೆ ಠಾಣೆಯ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರು ಇತ್ತೀಚೆಗೆ ನಗರದಲ್ಲಿ ಸೆರೆ ಹಿಡಿದಿದ್ದರು. ಎಫ್‌ಆರ್‌ಎಸ್ ವ್ಯವಸ್ಥೆಯ ನೆರವಿನಲ್ಲೇ ಅವರು ಆರೋಪಿಯನ್ನು ಪತ್ತೆಹಚ್ಚಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕಾರ್ಯಾಚರಣೆಯ ವಿಧಾನ ಹೇಗೆ?

ಎಐ ತಂತ್ರಜ್ಞಾನವುಳ್ಳ ಕ್ಯಾಮೆರಾಗಳನ್ನು ಎಫ್‌ಆರ್‌ಎಸ್ ಘಟಕಕ್ಕೆ ಜೋಡಿಸಲಾಗಿದೆ. ಅಲ್ಲಿ ಮುಖ ಚಹರೆ ಗುರುತಿಸುವ ತಂತ್ರಾಂಶದ ಜೊತೆ ರಾಜ್ಯ ಅಪರಾಧ ದಾಖಲೆಗಳ ಬ್ಯೂರೊದ ದತ್ತಾಂಶವನ್ನು ಜೋಡಿಸಲಾಗಿದೆ. ಅಪರಾಧ ಚಹರೆಯ ವ್ಯಕ್ತಿಗಳ ಭಾವಚಿತ್ರ ಸೆರೆಯಾಗುತ್ತಿದ್ದಂತೆಯೇ ಎಫ್‌ಆರ್‌ಎಸ್ ವ್ಯವಸ್ಥೆ ಕ್ಷಿಪ್ರ ಕಾರ್ಯಾಚರಣೆ ಪಡೆಗೆ ಎಚ್ಚರಿಕೆಯ ಸಂದೇಶ ರವಾನಿಸುತ್ತದೆ.

'ಪೊಲೀಸರ ಸೇವೆ ಶ್ಲಾಘನೀಯ'

ಪ್ರಜಾವಾಣಿ ವಾರ್ತೆ



ಸಂಚಾರ ಪೊಲೀಸ್ ವಿಭಾಗದ ಸಹಾಯಕ ಸಬ್‌ಇನ್‌ಸ್ಪೆಕ್ಟರ್ ಆರ್.ರಘು ಕುಮಾರ್ ಅವರಿಗೆ 'ಆರಕ್ಷಕ ಜನರ ಜೀವ ರಕ್ಷಕ' ಪ್ರಶಸ್ತಿ ನೀಡಿ ಗೌರವಿಸಲಾಯಿತು

ರಾಜರಾಜೇಶ್ವರಿನಗರ: 'ನ್ಯಾಯ, ರಕ್ಷಣೆ ಕೇಳಿ ಬರುವ ನಾಗರಿಕರಿಗೆ ನ್ಯಾಯ ಒದಗಿಸಿ ನೆರವಾಗುವ ಪೊಲೀಸ್‌ನವರೆ ನಿಜವಾದ ರಾಷ್ಟ್ರ ರಕ್ಷಕರು' ಎಂದು ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಅವರು ಅಭಿಪ್ರಾಯಪಟ್ಟರು.

ಜಯಪ್ರಕಾಶ್ ನಾರಾಯಣ್ ವಿಚಾರ ವೇದಿಕೆ. ಜನಪರ ಸಮಾನ ಮನಸ್ಕರ ತಂಡ, ಪತ್ರಕರ್ತರ ವೇದಿಕೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಂಚಾರ ವಿಭಾಗದ ಸಹಾಯಕ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಆರ್. ರಘುಕುಮಾರ್ ಅವರಿಗೆ 'ಆರಕ್ಷಕ ಜನರ ಜೀವ ರಕ್ಷಕ' ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಶಾಂತಿನಗರ ಬಸ್‌ನಿಲ್ದಾಣದ ಸಮೀಪ ಬಿಎಂಟಿಸಿ ಬಸ್ ಚಾಲಕ ವೀರೇಶ್ ವಾಹನ ಚಲಾಯಿಸುತ್ತಿದ್ದಾಗ ಎದೆನೋವಿನಿಂದ ಕುಸಿಯುತ್ತಿದ್ದರು. ಅಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದ ಎಎಸ್‌ಐ ರಘುಕುಮಾರ್ ಅವರು, ವೀರೇಶ್ ಅವರಿಗೆ ನೆರವು ನೀಡಿ, ಸಂಭವನೀಯ ದೊಡ್ಡ ಅನಾಹುತವನ್ನು ತಪ್ಪಿಸಿದ್ದರು' ಎಂದು ಶ್ಲಾಘಿಸಿದರು.

ವೇದಿಕೆ ಅಧ್ಯಕ್ಷ ಬಿ.ಎಂ. ಶಿವಕುಮಾರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಲಕ್ಷ್ಮಿನಾರಾಯಣ್, ಕೆ.ವೈ.ಕೃಷ್ಣ, ಟಿ.ಪ್ರಭಾಕರ್, ರಾಘವೇಂದ್ರಸ್ವಾಮಿ ಮಠದ ಅಧ್ಯಕ್ಷ ಎಚ್.ಎಸ್.ಸುದೀಂದ್ರ ಕುಮಾರ್, ಅನುಪಮಾ ಪಂಚಾಕ್ಷರಿ, ಎಸ್.ಸಂತೋಷ್, ಟಿ.ಪ್ರಭಾಕರ್, ಎನ್.ಗುರುದೇವ್, ಎ.ಪಿ.ಕುಮಾರ್, ಲಕ್ಷ್ಮಿಪ್ರಭು ಮಾತನಾಡಿದರು.



ವಾಕಥಾನ್

ವಿಶ್ವ ಹೃದಯ ದಿನದ ಪ್ರಯುಕ್ತ ಕಾವೇರಿ ಆಸ್ಪತ್ರೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಾಕಥಾನ್‌ನಲ್ಲಿ ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಯಿತು. ಮೂರು ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು

ವೈಯ್ಯಾಲಿಕಾವಲ್ ಮಹಾಲಕ್ಷ್ಮಿ ಕೊಲೆ ಪ್ರಕರಣ: ಸಿಮ್‌ಗಳ ಬದಲಾವಣೆ

ಪ.ಬಂಗಾಳದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ

ಪ್ರಜಾವಾಣಿ ವಾರ್ತೆ



ಮಹಾಲಕ್ಷ್ಮಿ

ಬೆಂಗಳೂರು: ವೈಯ್ಯಾಲಿಕಾವಲ್ ನಿವಾಸಿ ಮಹಾಲಕ್ಷ್ಮಿ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿ ಮುಕ್ತಿ ರಂಜನ್ ರಾಯ್, ಪೊಲೀಸರಿಗೆ ಸಿಕ್ಕಿ ಬೀಳಬಹುದೆಂಬ ಭಯದಿಂದ ಪಶ್ಚಿಮ ಬಂಗಾಳದಲ್ಲಿ ನಾಲ್ಕು ದಿನ ತಲೆಮರೆಸಿಕೊಂಡಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ.

'ಮಹಾಲಕ್ಷ್ಮಿ ಮತ್ತು ಮುಕ್ತಿ ರಂಜನ್ ರಾಯ್ ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಸಣ್ಣಪುಟ್ಟ ವಿಚಾರಕ್ಕೆ ಇಬ್ಬರ ನಡುವೆ ಗಲಾಟೆ ನಡೆಯುತ್ತಿತ್ತು. ಮದುವೆ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ಜಗಳದಲ್ಲಿ ಸೆ.3ರಂದು ಆಕೆಯನ್ನು ಕೊಲೆ ಮಾಡಲಾಗಿತ್ತು. ಬಂಧನ ಭೀತಿಯಿಂದ ಆರೋಪಿ, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ ಮಾರ್ಗವಾಗಿ ಸ್ವಗ್ರಾಮ ಒಡಿಶಾದ ಭದ್ರಕ್ ಬಳಿಯ ಬೋನಿಪುರಗೆ ತೆರಳಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪಶ್ಚಿಮ ಬಂಗಾಳಕ್ಕೆ ಹೋಗುತ್ತಿದ್ದಂತೆ ಆರೋಪಿ ತಾನು ಬಳಸುತ್ತಿದ್ದ ಏರ್‌ಟೆಲ್ ಸಿಮ್ ಎಸೆದು, ಬಿಎಸ್ ಎನ್ ಎಲ್ ಸಿಮ್ ಖರೀದಿಸಿದ್ದ. ಕೊಲೆ ಮಾಡಿದ ವಿಚಾರವನ್ನು ತಾಯಿ ಮತ್ತು ಸಹೋದರನಿಗೆ ಕರೆ ಮಾಡಿ ತಿಳಿಸಿದ ಬಳಿಕ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದ. ನಂತರ ಸ್ವಗ್ರಾಮದ ಒಡಿಶಾದ ಭದ್ರಕ್ ಬಳಿಯ ಬೋನಿಪುರ ತಲುಪಿದ. ಸೆಪ್ಟೆಂಬರ್ 22ರ ವೇಳೆಗೆ ಆರೋಪಿಯ ತಮ್ಮನನ್ನು ಪೊಲೀಸರು ವಶಕ್ಕೆ ಪಡೆದು ಕುಟುಂಬಸ್ಥರನ್ನು ಸಂಪರ್ಕಿಸಿದ್ದರು. ಈ ವಿಚಾರ ತಾಯಿಯ ಮೂಲಕ ಆರೋಪಿಗೆ ಗೊತ್ತಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬೆಂಗಳೂರು ಪೊಲೀಸರು ಒಡಿಶಾಗೆ ಬಂದಿರುವ ವಿಚಾರ ಗೊತ್ತಾಗುತ್ತಿದ್ದಂತೆ ಆರೋಪಿ, ಕೆಲಸ ಇದೆ ಎಂದು ತಾಯಿಯ ಬಳಿ ಹೇಳಿ ರಾತ್ರಿ ಮನೆಯಿಂದ ಹೊರ ಹೋಗಿದ್ದ. ಆ ಬಳಿಕ ವಾಪಸ್ ಬರಲಿಲ್ಲ. ಒಡಿಶಾದ ಧುಸುರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆರೋಪಿ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಸ್ಥಳೀಯ ಪೊಲೀಸರ ಮೂಲಕ ಗೊತ್ತಾಯಿತು' ಎಂದು ಮೂಲಗಳು ಹೇಳಿವೆ.

'ಬೆಂಗಳೂರು ಪೊಲೀಸರ ತಂಡ ಮುಕ್ತಿ ರಂಜನ್ ಕುಟುಂಬ ಸದಸ್ಯರು ಹಾಗೂ ಗ್ರಾಮಸ್ಥರ ವಿಚಾರಣೆ ನಡೆಸಿ, ಮಾಹಿತಿ ಸಂಗ್ರಹಿಸಿದೆ. ಮರಣ ಪತ್ರದ ದೃಢೀಕೃತ ಪ್ರತಿಯನ್ನು ಸಹ ಪಡೆದುಕೊಂಡಿದ್ದು, ಬೆಂಗಳೂರಿನತ್ತ ಪ್ರಯಾಣ ಬೆಳೆಸಿದೆ' ಎಂದು ಮೂಲಗಳು ತಿಳಿಸಿವೆ.

ಕಾಲ್ ಸೆಂಟರ್ ಉದ್ಯೋಗಿ ಸಾವು

ಬೆಂಗಳೂರು: ನಗರದ ಕಾಫಿ ಬೋರ್ಡ್ ಜಂಕ್ಷನ್ ಸಮೀಪ ಟ್ರಾಫಿಕ್ ಸಿಗ್ನಲ್ ಜಂಪ್ ಮಾಡಿದ ಲಾರಿಯೊಂದು ಆಟೊಗೆ ಡಿಕ್ಕಿ ಹೊಡೆದ ಪರಿಣಾಮ ಯುವತಿ ಮೃತಪಟ್ಟಿದ್ದು, ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನೆ ಬಳಿಕ ಕಬ್ಬಿಣದ ಸರಳುಗಳನ್ನು ತುಂಬಿದ್ದ ಲಾರಿಯನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದ ಚಾಲಕ ಸಕಲೇಶಪುರದ ಅಭಿ ಎಂಬುವವರನ್ನು ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉಪ್ಪಾರಪೇಟೆಯಲ್ಲಿ ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದ ಕೇರಳದ ಶಾಲಿನಿ (24) ಮೃತರು. ಬೆನ್ಸ್ನ್ ಟೌನ್‌ನಲ್ಲಿ ನೆಲೆಸಿದ್ದ ಶಾಲಿನಿ, 'ನಮ್ಮ ಯಾತ್ರಿ' ಆ್ಯಪ್ ಮೂಲಕ ಮೆಜೆಸ್ಟಿಕ್‌ಗೆ ಆಟೊ ಬುಕ್ ಮಾಡಿದ್ದರು. ಚಾಲಕ ಇಮ್ರಾನ್ ಅವರು ಮುಂಜಾನೆ ನಾಲ್ಕು ಗಂಟೆಗೆ ಶಾಲಿನಿ ಅವರನ್ನು ಕರೆದೊಯ್ಯುತ್ತಿದ್ದಾಗ ಘಟನೆ ಸಂಭವಿಸಿದೆ.

ಕಾಫಿ ಬೋರ್ಡ್ ಜಂಕ್ಷನ್ ಬಳಿ ಹಿಂದಿನಿಂದ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಆಟೊ ಚಾಲಕ ಕೆಳಕ್ಕೆ ಬಿದ್ದಿದ್ದಾರೆ. ಯುವತಿ ಆಟೊದೊಳಗೆ ಸಿಲುಕಿಕೊಂಡು ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ .

'ನಿದ್ರೆಯ ಮಂಪರಿನಲ್ಲಿ ಸಿಗ್ನಲ್ ಜಂಪ್ ಮಾಡಿ ಆಟೊಗೆ ಡಿಕ್ಕಿ ಹೊಡೆದೆ' ಎಂದು ಲಾರಿ ಚಾಲಕ ಪೊಲೀಸರಿಗೆ ತಿಳಿಸಿದ್ದಾರೆ.

ಬೌರಿಂಗ್ ಆಸ್ಪತ್ರೆಯಲ್ಲಿ ಶಾಲಿನಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಕೇರಳದಿಂದ ಬಂದಿದ್ದ ಪೋಷಕರು ಮೃತದೇಹ ಪಡೆದು, ಅಂತ್ಯಸಂಸ್ಕಾರ ನಡೆಸಿದರು.

ಈ ಘಟನೆ ಸಂಬಂಧ ಶಾಲಿನಿ ಅವರ ದೂರದ ಸಂಬಂಧಿಯೊಬ್ಬರು ಲಾರಿ ಚಾಲಕನ ವಿರುದ್ಧ ದೂರು ದಾಖಲಿಸಿದ್ದಾರೆ.

'ಶಾಲಿನಿ ಅವರು ನನ್ನ ಸಹೋದರನ ಪತ್ನಿಯ ಸಂಬಂಧಿ. ಕೇರಳದಲ್ಲಿರುವ ಸಹೋದರ ಬೆಳಿಗ್ಗೆ 6 ಗಂಟೆಗೆ ಕರೆ ಮಾಡಿ ಅಪಘಾತದ ವಿಷಯ ತಿಳಿಸಿದರು. ಆಸ್ಪತ್ರೆಗೆ ಭೇಟಿ ನೀಡಿ ನೋಡಿದಾಗ ಶಾಲಿನಿ ಅವರ ಮುಖ ಸಂಪೂರ್ಣ ಜಜ್ಜಿ, ಗುರುತಿಸಲಾಗದ ಸ್ಥಿತಿ ತಲುಪಿತ್ತು. ಎಡ ಮತ್ತು ಬಲ ತೋಳು ಮುರಿದಿತ್ತು' ಎಂದು ಹೇಳಿದ್ದಾರೆ.

ಸಾಲ ತೀರಿಸಲು ಸರಗಳ್ಳತನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾಲ ತೀರಿಸುವ ಸಲುವಾಗಿ ಮಹಿಳೆಯರ ಚಿನ್ನದ ಸರಗಳನ್ನು ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ತಲಘಟ್ಟಪುರ ಪೊಲೀಸರು, ₹1.5 ಲಕ್ಷ ಮೌಲ್ಯದ 32 ಗ್ರಾಂ ಚಿನ್ನದ ಸರಗಳನ್ನು ವಶಪಡಿಸಿಕೊಂಡಿದ್ದಾರೆ.

ಉತ್ತರಹಳ್ಳಿ ನಿವಾಸಿ ರಂಗಸ್ವಾಮಿ ಅಲಿಯಾಸ್ ರಂಗ ಮತ್ತು ರಾಜರಾಜೇಶ್ವರಿ ನಗರದ ಕೃಷ್ಣಪ್ಪ ಲೇಔಟ್ ನಿವಾಸಿ ಶಿವಕುಮಾರ್ ಬಂಧಿತರು.

ದ್ವಾರಕಾನಗರದ ಚನ್ನಸಂದ್ರದ ಮಹಿಳೆಯೊಬ್ಬರು ಬನಶಂಕರಿಯ ಬಿಡಿಎ ರಸ್ತೆಯಲ್ಲಿ ವಾಯುವಿಹಾರ ಮಾಡುತ್ತಿದ್ದ ವೇಳೆ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು, ಅವರ ಕುತ್ತಿಗೆಯಲ್ಲಿದ್ದ ಸರ ಕಿತ್ತುಕೊಂಡು ಪರಾರಿಯಾಗಿದ್ದರು.

ಈ ಬಗ್ಗೆ ತನಿಖೆ ನಡೆಸಿದ ಪೊಲೀಸರು, ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಕೋಣನಕುಂಟೆ ಕ್ರಾಸ್ ಬಳಿ ಇಬ್ಬರು ಆರೋಪಿಗಳನ್ನು ದ್ವಿಚಕ್ರ ವಾಹನ ಸಮೇತ ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

'ಸರಗಳವು ಮಾಡಿದ್ದಾಗಿ ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡರು. ಹೊಸಕೆರೆಹಳ್ಳಿ ಆಭರಣ ಅಂಗಡಿಗೆ ಮಾರಾಟ ಮಾಡಿದ್ದ ಚಿನ್ನದ ಸರವನ್ನು ವಶಕ್ಕೆ ಪಡೆಯಲಾಗಿದೆ. ರಂಗಸ್ವಾಮಿ ಕಾರು ಚಾಲಕನಾಗಿದ್ದರೆ, ಶಿವಕುಮಾರ್ ಆಟೊ ಚಾಲಕ. ಇಬ್ಬರೂ ದುಶ್ಚಟ ಮತ್ತು ಶೋಕಿಗಾಗಿ ಕೈ ಸಾಲ ಮಾಡಿಕೊಂಡಿದ್ದರು. ಸಾಲ ತೀರಿಸಲು ಸರಗಳ್ಳತನಕ್ಕೆ ಇಳಿದಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಮಾಂಗಲ್ಯ ಸರ ಕಳ್ಳತನ: ಕಿರಾಣಿ ಅಂಗಡಿಯೊಂದರಲ್ಲಿ ಸಕ್ಕರೆ ಖರೀದಿ ನೆಪದಲ್ಲಿ ಬಂದು ಮಹಿಳೆಯ ಮಾಂಗಲ್ಯ ಸರ ಕಸಿದು ಪರಾರಿಯಾಗಿದ್ದ ತಿರುಪತಿ ಮೂಲದ ವಿನಯ್ ಕುಮಾರ್ ಎಂಬುವರನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೆ.4ರಂದು ಠಾಣಾ ವ್ಯಾಪ್ತಿಯ ವಿನಾಯಕ ನಗರದಲ್ಲಿ ಮಹಿಳೆಯೊಬ್ಬರು ತಮ್ಮ ಅಂಗಡಿಯಲ್ಲಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದ ವಿನಯ್, ಸಕ್ಕರೆ ಖರೀದಿಸುವ ನೆಪದಲ್ಲಿ ಸಮೀಪ ಬಂದು ಅವರ ಕೊರಳಲ್ಲಿದ್ದ ಮಾಂಗಲ್ಯ ಸರ ಕಸಿದು ಪರಾರಿಯಾಗಿದ್ದ. ವಿಚಾರಣೆ ವೇಳೆ ಹನುಮಂತನಗರದಲ್ಲಿ ಮಹಿಳೆಯೊಬ್ಬರಿಂದ ಚಿನ್ನದ ಸರ ಕಸಿದ ವಿಚಾರ ಬಾಯ್ಬಿಟ್ಟಿದ್ದ. ಆರೋಪಿಯಿಂದ ₹5 ಲಕ್ಷ ಮೌಲ್ಯದ 77 ಗ್ರಾಂ. ಮಾಂಗಲ್ಯ ಸರ ಜಪ್ತಿ ಮಾಡಲಾಗಿದೆ.

ಬೈಕ್ ಅಡ್ಡಗಟ್ಟಿ ಚಿನ್ನದ ಸರ ಸುಲಿಗೆ: ನಗರದ ಸೇಂಟ್ ಮಾರ್ಕ್ಸ್ ರಸ್ತೆಯ ಎಸ್‌ಬಿಐ ಸರ್ಕಲ್ ಬಳಿ ಬೈಕ್‌ನಲ್ಲಿ ಹೋಗುತ್ತಿದ್ದ ಇಬ್ಬರು ಯುವಕರನ್ನು ಅಡಗಟ್ಟಿ, ಚಿನ್ನದ ಸರ ಸುಲಿಗೆ ಮಾಡಲಾಗಿದೆ.

ನಂಬರ್ ಪ್ಲೇಟ್ ಇಲ್ಲದ ಬೈಕ್‌ನಲ್ಲಿ ಬಂದ ಅಪರಿಚಿತರಿಬ್ಬರು, ಯುವಕನೊಬ್ಬನ ಬಳಿ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದರು. ಆದರೆ, ಯುವಕರು ಬೈಕ್ ಹಿಂಬಾಲಿಸಿಕೊಂಡು ಹೋದರು. ಬೈಕ್ ನಿಲ್ಲಿಸಿದ ಕಳ್ಳರು, ಮತ್ತೊಬ್ಬ ಯುವಕನ ಬಳಿಯೂ ಚಿನ್ನದ ಸರ ಕಿತ್ತು ಪರಾರಿಯಾಗಿದ್ದಾರೆ.

ಗಣೇಶ ಮೂರ್ತಿಗೆ ಟಿಪ್ಪರ್ ಲಾರಿ ಡಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿಲ್ಸನ್ ಗಾರ್ಡನ್‌ನಲ್ಲಿ ನಿಂತಿದ್ದ ಟಿಪ್ಪರ್ ಲಾರಿ ಏಕಾಏಕಿ ಚಲಿಸಿ ವಿದ್ಯುತ್ ಕಂಬ ಹಾಗೂ ರಸ್ತೆ ಬದಿ ಮಾರಾಟಕ್ಕೆ ಇಟ್ಟಿದ್ದ ಗಣೇಶ ಮೂರ್ತಿಗೆ ಡಿಕ್ಕಿ ಹೊಡೆದಿದೆ.

ಶನಿವಾರ ರಾತ್ರಿ 1.30ರ ಸುಮಾರಿಗೆ ಚಾಲಕ, ಜಲ್ಲಿ ಕಲ್ಲು ಅನ್‌ಲೋಡ್ ಮಾಡಲು ಟಿಪ್ಪರ್ ನಿಲ್ಲಿಸಿದ್ದರು. ಈ ವೇಳೆ ಟಿಪ್ಪರ್ ಏಕಾಏಕಿ ಚಲಿಸಿ ವಿದ್ಯುತ್ ಕಂಬ ಹಾಗೂ ಮೂರ್ತಿಗೆ ಡಿಕ್ಕಿ ಹೊಡೆದು ನಿಂತಿದೆ.

ಹಾನಿಯಾಗಿದ್ದ ವಿದ್ಯುತ್ ಕಂಬವನ್ನು ಬೆಸ್ಕಾಂ ಸಿಬ್ಬಂದಿ ಭಾನುವಾರ ತೆರವುಗೊಳಿಸಿದ್ದು, ಸ್ಥಳಕ್ಕೆ ವಿಲ್ಸನ್ ಗಾರ್ಡನ್ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗಣೇಶ ಮೂರ್ತಿಗಳ ವ್ಯಾಪಾರಿ ಚೇತನ್ ಕುಮಾರ್, 'ಶನಿವಾರ ರಾತ್ರಿ 1 ಗಂಟೆಗೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಗಣೇಶ ಮೂರ್ತಿಗೆ ಹಾನಿಯಾಗಿದೆ. ಈ ಮೂರ್ತಿಯನ್ನು ಗ್ರಾಹಕರೊಬ್ಬರು ₹ 75 ಸಾವಿರ ಮುಂಗಡ ನೀಡಿ ಕಾಯ್ದಿರಿಸಿದ್ದರು. ಭಾನುವಾರ ಸಂಜೆ ತೆಗೆದುಕೊಂಡು ಹೋಗುತ್ತಿದ್ದರು. ನಷ್ಟಕ್ಕೆ ಪರಿಹಾರ ಕೊಡಬೇಕು. ಈ ಸಂಬಂಧ ಪೊಲೀಸರಿಗೆ ದೂರು ನೀಡಲಾಗುವುದು' ಎಂದು ಹೇಳಿದರು.

ಫುಟ್‌ಬಾಲ್: ಸೆಮಿಗೆ ಅಗ್ನಿಪುತ್ರ, ಕೊಡಗು

ಬೆಂಗಳೂರು: ಹಾಲಿ ಚಾಂಪಿಯನ್ ಎಫ್‌ಸಿ ಅಗ್ನಿಪುತ್ರ ಮತ್ತು ಕೊಡಗು ಎಫ್‌ಸಿ ತಂಡಗಳು ಇಲ್ಲಿ ನಡೆಯುತ್ತಿರುವ ಸಿ.ಪುಟ್ಟಯ್ಯ ಸ್ಮಾರಕ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಸೆಮಿಫೈನಲ್‌ಗೆ ಮುನ್ನಡೆದವು.

ಎ ಗುಂಪಿನಲ್ಲಿ ಅಗ್ರಸ್ಥಾನ ಪಡೆದಿರುವ ಕೊಡಗು (4 ಅಂಕ) ಮತ್ತು ಸಿ ಗುಂಪಿನಲ್ಲಿ ಅಗ್ರಸ್ಥಾನ ಹೊಂದಿರುವ ಅಗ್ನಿಪುತ್ರ (6 ಅಂಕ) ತಂಡಗಳು ಅ.4ರಂದು ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಮುಖಾಮುಖಿಯಾಗಲಿವೆ.

ಭಾನುವಾರ ನಡೆದ ಎ ಗುಂಪಿನ ಪಂದ್ಯದಲ್ಲಿ ಎಫ್‌ಸಿ ರಿಯಲ್ ಬೆಂಗಳೂರು ತಂಡವು 2–1ರಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ರಿಯಲ್ ತಂಡ ಪರ ಸಾಹಿಲ್ ಸುರೇಶ ಲಮಾಣಿ (44ನೇ ನಿಮಿಷ), ಆರ್. ಕಾರ್ತಿಕೇಯನ್ (47ನೇ) ಗೋಲು ಗಳಿಸಿದರು. ರೆಬೆಲ್ಸ್‌ನ ದಿನೇಶ್ ಎಸ್ (75ನೇ) ಏಕೈಕ ಗೋಲು ದಾಖಲಿಸಿದರು.

ಸಿ ಗುಂಪಿನ ಪಂದ್ಯದಲ್ಲಿ ಅಗ್ನಿಪುತ್ರ ತಂಡವು 1–0ಯಿಂದ ಸೌತ್ ಯುನೈಟೆಡ್ ತಂಡವನ್ನು ಮಣಿಸಿತು. ಲಾಲ್ ರುವಾಟ್ಫೆಲಾ (49ನೇ) ಅವರು ಅಗ್ನಿಪುತ್ರ ಪರ ಗೆಲುವಿನ ಗೋಲು ಹೊಡೆದರು.

ಇಂದಿನ ಪಂದ್ಯಗಳು

ರೂಟ್ಸ್ ಎಫ್‌ಸಿ– ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ (ಮಧ್ಯಾಹ್ನ 1)

ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ– ಕಿಕ್‌ಸ್ಟಾರ್ಟ್ ಎಫ್‌ಸಿ (ಸಂಜೆ 4)

ಅಪಘಾತ: ಏರ್‌ಬ್ಯಾಗ್ ತೆರೆದುಕೊಂಡಿದ್ದರೂ ಬಾಲಕಿ ಸಾವು

ಮಲಪ್ಪುರಂ (ಕೇರಳ) (ಪಿಟಿಐ): ಅಪಘಾತದ ವೇಳೆ ಏರ್ ಬ್ಯಾಗ್ ತೆರೆದುಕೊಂಡಿದ್ದರೂ, ಉಸಿರುಗಟ್ಟಿದ ಪರಿಣಾಮ ಎರಡು ವರ್ಷದ ಬಾಲಕಿ ಮೃತಪಟ್ಟ ಘಟನೆ ಮಲಪ್ಪುರಂ ಜಿಲ್ಲೆಯಲ್ಲಿ ಸಂಭವಿಸಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಬಾಲಕಿಯ ಕುಟುಂಬವು ಕೊಟ್ಟಕ್ಕಲ್–ಪಡಪರಂಬ ಮೂಲಕ ಶುಕ್ರವಾರ ಪ್ರಯಾಣಿಸುತ್ತಿದ್ದ ವೇಳೆ, ಕಾರು ಟ್ಯಾಂಕರ್ ಲಾರಿಗೆ ಡಿಕ್ಕಿ ಹೊಡೆದಿತ್ತು. ಆಗ, ತಕ್ಷಣವೇ ಕಾರಿನ ಏರ್‌ಬ್ಯಾಗ್ ತೆರೆದುಕೊಂಡಿದೆ.

ಬಾಲಕಿಯು ತಾಯಿ ತೊಡೆ ಮೇಲೆ ಕುಳಿತಿದ್ದಳು. ಏರ್‌ಬ್ಯಾಗ್ ತೆರೆದುಕೊಂಡ ತೀವ್ರತೆಯಿಂದಾಗಿ ಉಸಿರುಗಟ್ಟಿ ಬಾಲಕಿ ಮೃತಪಟ್ಟಳು. ಇತರ ನಾಲ್ವರು ಪ್ರಯಾಣಿಕರಿಗೆ ಸಣ್ಣ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವೈದ್ಯಾಧಿಕಾರಿ ನಿಗೂಢ ಸಾವು

ಮೈಸೂರು: ನಗರದ ಚೆಲುವಾಂಬ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ.ವಿದ್ಯಾಧರೆ (42) ಲಕ್ಷ್ಮೀಪುರಂನ ಅಪಾರ್ಟ್‌ಮೆಂಟ್‌ನಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ಪತಿ ಕೆ.ಆರ್.ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಡಾ.ಷಣ್ಮುಖ ಹಾಗೂ ಮೂವರು ಮಕ್ಕಳೊಂದಿಗೆ ವಾಸವಿದ್ದರು.

'ಕೆಲಸ ಮುಗಿಸಿ ಶನಿವಾರ ರಾತ್ರಿ ಮನೆಗೆ ಬಂದ ವಿದ್ಯಾಧರೆ, ಮಕ್ಕಳೊಂದಿಗೆ ಕೋಣೆಯಲ್ಲಿ ಮಲಗಿದ್ದಾರೆ. ಭಾನುವಾರ ಬೆಳಿಗ್ಗೆ 9ರವರೆಗೂ ಹೊರ ಬಾರದ್ದರಿಂದ ಅನುಮಾನಗೊಂಡು ಡಾ.ಷಣ್ಮುಖ ಅವರು ಗಮನಿಸಿದಾಗ, ಮೃತಪಟ್ಟಿರುವುದು ಗೊತ್ತಾಗಿದೆ' ಎನ್ನಲಾಗಿದೆ.

'ಅವರ ಸಾವಿನ ಬಗ್ಗೆ ಅನುಮಾನವಿದೆ' ಎಂದು ಮೃತರ ಸಹೋದರ ಶ್ರೀಕಾಂತ್ ದೂರು ನೀಡಿದ್ದಾರೆ. ಬೆರಳಚ್ಚು ತಂಡದೊಂದಿಗೆ ವಿಧಿ ವಿಜ್ಞಾನ ಪ್ರಯೋಗಾಲಯದ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ರೇವ್ ಪಾರ್ಟಿ' 60 ಮಂದಿ ವಶಕ್ಕೆ

ಮೈಸೂರು: ತಾಲ್ಲೂಕಿನ ಮೀನಾಕ್ಷಿಪುರ ಕೆಆರ್‌ಎಸ್ ಹಿನ್ನೀರು ಪ್ರದೇಶದ ಸಮೀಪದ ಖಾಸಗಿ ಜಾಗದಲ್ಲಿ ಶನಿವಾರ ರಾತ್ರಿ ಆಯೋಜನೆಗೊಂಡಿದ್ದ 'ರೇವ್ ಪಾರ್ಟಿ' ಮೇಲೆ ಇಲವಾಲ ಠಾಣೆ ಪೊಲೀಸರು ದಾಳಿ ನಡೆಸಿ, ಯುವತಿಯರು ಸೇರಿ 60 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ವ್ಯಕ್ತಿಯೊಬ್ಬರು ಪಾರ್ಟಿ ಬಗ್ಗೆ ಪ್ರಚಾರ ಮಾಡಿದ್ದ ಕಾರಣ ಪಾಲ್ಗೊಳ್ಳಲು 25ಕ್ಕೂ ಹೆಚ್ಚು ಜೋಡಿಗಳು ನೋಂದಾಯಿಸಿದ್ದರು. ಈ ಖಚಿತ ಮಾಹಿತಿ ಆಧರಿಸಿ ಎಸ್ಪಿ ಎನ್. ವಿಷ್ಣುವರ್ಧನ್, ಎಎಸ್‌ಪಿ ನಾಗೇಶ್, ಡಿವೈಎಸ್‌ಪಿ ಕರೀಂ ರಾವರ್ತ ಹಾಗೂ ಸಿಬ್ಬಂದಿ ದಾಳಿ ನಡೆಸಿದ್ದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256


'ಪಾದಚಾರಿ ಮಾರ್ಗ ಸರಿಪಡಿಸಿ'

ನಗರದ ಪಿ. ಕಾಳಿಂಗರಾವ್ ರಸ್ತೆಯ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಸಿಮೆಂಟ್ ಸ್ಲ್ಯಾಬ್‌ಗಳು ಮುರಿದು ಬಿದ್ದಿವೆ. ಸಾರ್ವಜನಿಕರು ಈ ಪಾದಚಾರಿ ಮಾರ್ಗದಲ್ಲಿ ಓಡಾಡುವುದು ಕಷ್ಟವಾಗಿದೆ. ಈ ಪಾದಚಾರಿ ಮಾರ್ಗಕ್ಕೆ ಹಾಕಿದ್ದ ಸಿಮೆಂಟ್ ಸ್ಲ್ಯಾಬ್‌ಗಳು ಒಡೆದು ಹೋಗಿ ಬಹಳ ದಿನಗಳಾಗಿವೆ. ಈ ಬಗ್ಗೆ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಪಾದಚಾರಿ ಮಾರ್ಗ ಹಾಳಾಗಿರುವುದರಿಂದ ಸಾರ್ವಜನಿಕರು ಮುಖ್ಯ ರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಇದರಿಂದ, ಸಂಚಾರ ದಟ್ಟಣೆ ಆಗುತ್ತಿದೆ. ಅಪಘಾತಗಳು ಸಂಭವಿಸುವ ಸಾಧ್ಯತೆ ಇದ್ದು, ಕೂಡಲೇ ಬಿಬಿಎಂಪಿ ಈ ಪಾದಚಾರಿ ಮಾರ್ಗದ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ಚಿಕ್ಕಪೇಟೆ



ಪಿ. ಕಾಳಿಂಗರಾವ್ ರಸ್ತೆಯ ಪಾದಚಾರಿ ಮಾರ್ಗಕ್ಕೆ ಅಳವಡಿಸಿದ್ದ ಸಿಮೆಂಟ್ ಸ್ಲ್ಯಾಬ್ ಮುರಿದು ಬಿದ್ದಿರುವುದು



ವೈಟ್‌ಫೀಲ್ಡ್‌ನ ಬೋರ್‌ವೆಲ್ ರಸ್ತೆಯಲ್ಲಿರುವ ವಿದ್ಯುತ್ ಕಂಬ ವಾಲಿರುವುದು

'ವಾಲಿದ ವಿದ್ಯುತ್ ಕಂಬ'

ವೈಟ್‌ಫೀಲ್ಡ್‌ನ ಬೋರ್‌ವೆಲ್ ರಸ್ತೆ ಎಸ್.ಎಸ್. ಫೆಲಿಸಿಟಿ ಹೋಮ್ಸ್ ಮುಂಭಾಗದ ರಸ್ತೆಯ ಬದಿಯಲ್ಲಿರುವ ವಿದ್ಯುತ್ ಕಂಬ ವಾಲಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ವಾಲಿದ ವಿದ್ಯುತ್ ಕಂಬ ಯಾವ ಕ್ಷಣ ಬೀಳುತ್ತದೆಯೋ ಎಂಬ ಭಯದಲ್ಲಿ ಸವಾರರು ಸಂಚರಿಸುವಂತಹ ಪರಿಸ್ಥಿತಿ ಇದೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಆದರೆ, ಇದುವರೆಗೂ ಸಮಸ್ಯೆ ಪರಿಹಾರವಾಗಿಲ್ಲ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ವಿದ್ಯುತ್ ಕಂಬವನ್ನು ತೆರವುಗೊಳಿಸಿ, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು.

ವಿವೇಕ ಶಾಸ್ತ್ರಿ, ವೈಟ್‌ಫೀಲ್ಡ್

ವರದಿಗೆ ಸ್ಪಂದನೆ

ರಾಜಾಜಿನಗರ ಒಣಗಿದ ಮರ ತೆರವುಗೊಳಿಸಲಾಗಿದೆ



ರಾಜಾಜಿನಗರದ ಆರನೇ ಬ್ಲಾಕ್‌ನ ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ಶ್ರೀಸಾಗರ್ ಹೋಟೆಲ್ ಮುಂಭಾಗದಲ್ಲಿರುವ ಒಣಗಿದ ಮರವನ್ನು ತೆರವುಗೊಳಿಸಲಾಗಿದೆ.

'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ಸೆಪ್ಟೆಂಬರ್ 23ರಂದು 'ಒಣಗಿರುವ ಮರ ತೆರವುಗೊಳಿಸಿ' ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬಿಬಿಎಂಪಿ ಸಿಬ್ಬಂದಿ ಮರವನ್ನು ತೆರವುಗೊಳಿಸಿದ್ದಾರೆ.

'ಗೊಟ್ಟಿಗೆರೆ ರಸ್ತೆ ದುರಸ್ತಿಗೊಳಿಸಿ'

ಗೊಟ್ಟಿಗೆರೆಯಿಂದ ಜಂಬೂಸವಾರಿ ದಿಣ್ಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳಾಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಮಳೆ ಬಂದರೆ ರಸ್ತೆಯಲ್ಲ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಗುಂಡಿಗಳ ಕಾರಣ ಈ ಭಾಗದಲ್ಲಿ ಸಂಚಾರ ದಟ್ಟಣೆ ಹಾಗೂ ಅಪಘಾತಗಳು ಸಂಭವಿಸುತ್ತಿವೆ. ಇತ್ತೀಚೆಗೆ ಬಿಬಿಎಂಪಿ ಗುಂಡಿ ಮುಚ್ಚುವ ಕಾರ್ಯ ಕೈಗೊಂಡಿತ್ತು. ಆದರೆ, ಈ ಭಾಗದ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವ ಕೆಲಸವಾಗಿಲ್ಲ.

ರಾಘವೇಂದ್ರ ರಾಧಾಕೃಷ್ಣ, ಗೊಟ್ಟಿಗೆರೆ



ಗೊಟ್ಟಿಗೆರೆಯಿಂದ ಜಂಬೂಸವಾರಿದಿಣ್ಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿ

ಮೌಢ್ಯದ ವಿರುದ್ಧ ಜಾಗೃತಿ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ



ಗುರುದೇವ ಸೇವಾ ಸಂಸ್ಥೆಯಲ್ಲಿ ನಡೆದ ಗುರುಹಿರಿಯರ ವಂದನೆ ಕಾರ್ಯಕ್ರಮದಲ್ಲಿ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಯಡಿಯೂರಪ್ಪ ಅವರನ್ನು ಗೌರವಿಸಲಾಯಿತು

ದಾಬಸ್ ಪೇಟೆ: 'ಮೌನ ತಪಸ್ವಿ ಜಡೆಯ ಶಾಂತಲಿಂಗೇಶ್ವರ ಸ್ವಾಮೀಜಿ ಅವರು ಸಮಾಜದಲ್ಲಿ ಬೇರೂರಿರುವ ಅಜ್ಞಾನ ಮತ್ತು ಮೂಢನಂಬಿಕೆಗಳ ವಿರುದ್ಧ ಜನ ಜಾಗೃತಿ ಮೂಡಿಸಿದ್ದಾರೆ' ಎಂದು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಹೇಳಿದರು.

ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಕೆರೆಕತ್ತಿಗನೂರು ಗ್ರಾಮದಲ್ಲಿನ ಗುರುದೇವ ಸೇವಾ ಸಂಸ್ಥೆಯ (ಸಮಾಧಾನ ಮಠ) ಮೌನ ತಪಸ್ವಿ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳ 'ಗುರುಹಿರಿಯರ ವಂದನೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.


'ಶಾಂತಲಿಂಗೇಶ್ವರ ಸ್ವಾಮೀಜಿ, ಪ್ರಾಣಿ ಬಲಿ, ಅಂದ ಶ್ರದ್ದೆ, ಬಾಲ್ಯ ವಿವಾಹದಂತಹ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನೆ ಮಾಡಿ, ಮಹಾತ್ಮ ಗಾಂಧೀಜಿಯವರ ಆಶಯದಂತೆ ಗ್ರಾಮಗಳ ಅಭಿವೃದ್ದಿಗೆ ಮುಂದಾಗಿದ್ದಾರೆ' ಎಂದು ಹೇಳಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, 'ಶಾಂತಲಿಂಗೇಶ್ವರ ಸ್ವಾಮೀಜಿ ಅವರು, ಮೌನವಾಗಿದ್ದುಕೊಂಡೇ ಅನೇಕ ಸಮಾಜ ಮುಖಿ ಕಾರ್ಯಗಳನ್ನು ಮಾಡಿದ್ದಾರೆ. ಇವರ ಸಹಕಾರದಿಂದ ಗ್ರಾಮಗಳು ಅಭಿವೃದ್ದಿಯಾಗುತ್ತವೆ' ಎಂದರು.

ಮೇಲಣ ಗವಿ ಮಠದ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಹಳೇನಿಜಗಲ್ ತಪೋವನದ ಶಿವಾನಂದ ಶಿವಾಚಾರ್ಯ ಸ್ವಾಮಿಜಿ, ಮಾಜಿ ಸಚಿವರಾದ ಚರಂತಿ ಮಠ, ಅಕ್ಕಲಕೋಟೆ ಶಾಸಕ ಸಚಿನ್ ಕಲ್ಯಾಣ ಶೆಟ್ಟಿ, ಅಲ್ಲಂ ವೀರಭದ್ರಪ್ಪ ಹಾಗೂ ಇತರರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಭಕ್ತರಿಂದ ಮೌನ ತಪಸ್ವಿ ಜಡೆಯ ಶಾಂತಲಿಂಗೇಶ್ವರ ಸ್ವಾಮೀಜಿಯವರ ತುಲಾಭಾರ ಕಾರ್ಯಕ್ರಮ ನಡೆಯಿತು.

ಶಿಕ್ಷಣ



ಶಾಲೆ, ಕಚೇರಿ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಅದರದ್ದೇ ಆದ ವೇಳಾಪಟ್ಟಿ ಇರುತ್ತದೆ.

ವೇಳಾಪಟ್ಟಿ ವಿದ್ಯಾರ್ಥಿಗಳಿಗೆಷ್ಟು ಮುಖ್ಯ?



ವೇಳಾಪಟ್ಟಿ ಹೀಗಿರಲಿ

- ಶಾಲಾ ಅವಧಿಯನ್ನು ಹೊರತುಪಡಿಸಿ ಉಳಿದ ಸಮಯಕ್ಕೆ ಅನುಗುಣವಾಗಿ ಮನೆಯ ವೇಳಾಪಟ್ಟಿ ರಚಿಸಿಕೊಳ್ಳಿ.
- ಬೆಳಿಗ್ಗೆ ಶುಭ್ರತೆ, ಯೋಗ, ವ್ಯಾಯಾಮ, ಧ್ಯಾನದಿಂದ ನಿಮ್ಮ ದಿನಚರಿ ಆರಂಭವಾಗಲಿ.
- ಪಠ್ಯಗಳ ಓದಿಗೆ ಹಾಗೂ ದಿನಪತ್ರಿಕೆ ಓದಿಗೆ ಬೆಳಗಿನ ಸಮಯ ನಿಗದಿಪಡಿಸುವುದು ಸೂಕ್ತ.
- ಶಾಲಾ ಅವಧಿಯ ಬಳಿಕ ಸಂಜೆ ಆಟ, ವಿಹಾರಕ್ಕೂ ವೇಳಾಪಟ್ಟಿಯಲ್ಲಿ ಜಾಗವಿರಲಿ.
- ಸಂಜೆ 6 ಗಂಟೆಯ ಬಳಿಕ ಶಾಲಾ ವಿಷಯಗಳ ಹೋಮ್ ವರ್ಕ್ ಬರೆಯುವುದು, ಟಿ.ವಿ ಅಥವಾ ಮೊಬೈಲ್ ವೀಕ್ಷಣೆ, ಮನೆಯ ಸದಸ್ಯರೊಂದಿಗೆ ಹರಟೆಗಳೂ ಸೇರಿರಲಿ.
- ರಾತ್ರಿ ನಿದ್ದೆಗೆ ಕನಿಷ್ಠ 8 ತಾಸು ಇರುವಂತೆ ನೋಡಿಕೊಳ್ಳಿ. ಇದು ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ದೃಷ್ಟಿಯಿಂದ ಮಹತ್ವದ್ದು.
- ವಾರಾಂತ್ಯದಲ್ಲಿ (ಶನಿವಾರ, ಭಾನುವಾರ) ಮತ್ತು ರಜಾದಿನಗಳಲ್ಲಿ ಮ್ಯಾಗಜಿನ್ ಹಾಗೂ ಇತರೆ ಪುಸ್ತಕಗಳ ಓದು, ಪಠ್ಯೇತರ ಚಟುವಟಿಕೆಗಳು, ಹವ್ಯಾಸಗಳು, ವಿಹಾರ ಇಂಥ ಚಟುವಟಿಕೆಗಳಿಗೆ ಅವಕಾಶ ಕೊಟ್ಟುಕೊಳ್ಳಿ.


ಸೋಮಲಿಂಗಪ್ಪ ಬೆಣ್ಣಿ

ವಿದ್ಯಾರ್ಥಿ ಜೀವನವೆಂದರೆ ಭವಿಷ್ಯದ ಬದುಕಿಗೆ ಪೂರಕವಾಗುವ ಎಲ್ಲ ಜ್ಞಾನ ಮತ್ತು ಸಂಸ್ಕಾರವನ್ನು ಕಲಿಯಬೇಕಿರುವ ಪ್ರಮುಖ ಘಟ್ಟ. ಈ ಹಂತದಲ್ಲಿ ವಿದ್ಯಾರ್ಥಿಗಳು ತಮ್ಮ ನಿರ್ದಿಷ್ಟ ಗುರಿ ಸಾಧನೆಗೆ ಬೇಕಾಗುವ ಶಿಸ್ತು, ಸಮಯಪ್ರಜ್ಞೆಯನ್ನು ರೂಢಿಸಿಕೊಳ್ಳುವುದು ಅತ್ಯಗತ್ಯ. ಸಂಯಮ, ಶಿಸ್ತು, ಸಮಯಪ್ರಜ್ಞೆ ಹಾಗೂ ಓದಿನಲ್ಲಿ ಉತ್ಸಾಹ ಇವುಗಳನ್ನು ಬೆಳೆಸಿಕೊಳ್ಳಲು ಮನೆಯಲ್ಲಿ ಚಿಕ್ಕಂದಿನಿಂದಲೇ ವೇಳಾಪಟ್ಟಿಯನ್ನು ಹಾಕಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಯಾವುದೇ ಶಾಲೆ, ಕಚೇರಿ ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಲು ಅದರದ್ದೇ ಆದ ವೇಳಾಪಟ್ಟಿ ಇರುತ್ತದೆ. ಆ ವೇಳಾಪಟ್ಟಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿದಾಗ ನಿರ್ದಿಷ್ಟ ಯೋಜನೆಗಳು ನಿಗದಿತ ಸಮಯಕ್ಕೆ ಮುಗಿಯುತ್ತವೆ. ಅದರಂತೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಗಳು, ಮನೆಗೆಲಸಗಳು, ವೈಯಕ್ತಿಕ ಕೆಲಸಗಳನ್ನು ಸುಗಮವಾಗಿ ನಿರ್ವಹಿಸಲು ಮನೆಯ ವೇಳಾಪಟ್ಟಿ ಅವಶ್ಯಕ.

ಪ್ರತಿಯೊಬ್ಬ ವಿದ್ಯಾರ್ಥಿ ಲಭ್ಯವಿರುವ ಶಾಲಾ ಸಮಯ, ಶಾಲೆ ಮತ್ತು ಮನೆಯ ನಡುವಿನ ಪ್ರಯಾಣದ ಅಂತರ, ಇರುವ ಸಮಯಕ್ಕೆ ಅನುಗುಣವಾಗಿ ಸೂಕ್ತ ವೇಳಾಪಟ್ಟಿಯನ್ನು ರೂಪಿಸಿಕೊಳ್ಳಬೇಕು. ಮಕ್ಕಳು ಚಿಕ್ಕವರಾಗಿದ್ದರೆ, ವೇಳಾಪಟ್ಟಿ ರೂಪಿಸಲು ಪೋಷಕರು ನೆರವಾಗಬಹುದು. ಇದನ್ನು ಮನೆಯ ಗೋಡೆಯ ಮೇಲೆ ಸುಲಭವಾಗಿ ಕಾಣುವಂತೆ ಅಂಟಿಸಿ ನಿತ್ಯವೂ ಪಾಲಿಸಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯ ಪಾಲನೆ, ಶ್ರದ್ಧೆ ರೂಢಿಯಾಗುತ್ತದೆ. ಸಮಯದ ಮಹತ್ವ ಅರಿವಾಗುತ್ತದೆ. ತಮ್ಮ ಶಾಲಾ ಚಟುವಟಿಕೆಗಳು ನಿಗದಿತ ಸಮಯಕ್ಕೆ ಮುಗಿಯುತ್ತವೆ. ❖

ಸರ್ಕಾರಿ ಕ್ಷೇತ್ರದಲ್ಲಿ ಅವಕಾಶ ಹೇಗಿದೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



1. ನಾನೀಗ ಅಂತಿಮ ವರ್ಷದ ಎಂಜಿನಿಯರಿಂಗ್ ಓದುತ್ತಿದ್ದು, ಸರ್ಕಾರಿ ಕ್ಷೇತ್ರದಲ್ಲಿನ ಅವಕಾಶಗಳ ಬಗ್ಗೆ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಎಂಜಿನಿಯರಿಂಗ್ ಪದವೀಧರರಿಗೆ ಸರ್ಕಾರಿ ವಲಯದಲ್ಲಿ ಆಕರ್ಷಕ ಉದ್ಯೋಗಾವಕಾಶಗಳಿವೆ. ಮೂಲಸೌಕರ್ಯ ಅಭಿವೃದ್ಧಿ, ಲೋಕೋಪಯೋಗಿ, ಇಂಧನ, ಮಾಹಿತಿ ತಂತ್ರಜ್ಞಾನ, ನೀರಾವರಿ, ಯೋಜನೆ, ಸಾರಿಗೆ, ನಗರಾಭಿವೃದ್ಧಿ, ಕೈಗಾರಿಕೆ, ಮಾಹಿತಿ ತಂತ್ರಜ್ಞಾನ ಮುಂತಾದ ಇಲಾಖೆಗಳಲ್ಲಿ ಉದ್ಯೋಗವನ್ನು ಅರಸಬಹುದು. ಹಾಗೂ, ಯುಪಿಎಸ್‌ಸಿ, ಕೆಪಿಎಸ್‌ಸಿ, ರೈಲ್ವೇಸ್, ಬ್ಯಾಂಕಿಂಗ್ ಕ್ಷೇತ್ರಗಳಲ್ಲಿಯೂ ಮತ್ತು ಇಸ್ರೊ, ಡಿಆರ್‌ಡಿಒ, ಬಿಎಆರ್‌ಸಿ, ಸಿಎಸ್‌ಐಆರ್ ಮುಂತಾದ ಪ್ರತಿಷ್ಠಿತ ಸರ್ಕಾರಿ ಸಂಸ್ಥೆಗಳಲ್ಲಿಯೂ ವೃತ್ತಿಯನ್ನು ಅರಸಬಹುದು. ನಿಮ್ಮ ಸ್ವಾಭಾವಿಕ ಪ್ರತಿಭೆ, ಆಸಕ್ತಿ ಮತ್ತು ಕೌಶಲಗಳನ್ನು ಗಮನಿಸಿ, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ಕ್ಷೇತ್ರದಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=AwlDno1YduQ

2. ಸರ್, ಪಿಯುಸಿ (ವಾಣಿಜ್ಯ) ನಂತರ ಯಾವ ಆಯ್ಕೆಯನ್ನು ಮಾಡಿದರೆ ಒಳ್ಳೆಯದು?

ಹೆಸರು, ಊರು ತಿಳಿಸಿಲ್ಲ.

ಪಿಯುಸಿ (ವಾಣಿಜ್ಯ) ನಂತರ ಕೋರ್ಸ್ ಆಯ್ಕೆಗಳೆಂದರೆ ಸಿಎ (ಫೌಂಡೇಷನ್ ಕೋರ್ಸ್ ಮುಖಾಂತರ), ಬಿಕಾಂ (ಜನರಲ್, ಹಾನರ್ಸ್, ಬ್ಯಾಂಕಿಂಗ್, ಫೈನಾನ್ಸ್, ಟೂರಿಸಮ್, ಪ್ರೊಫೆಷನಲ್, ಇಂಟರ್‌ನ್ಯಾಷನಲ್ ಫೈನಾನ್ಸ್ ಇತ್ಯಾದಿ), ಬಿಬಿಎ, ಬಿಸಿಎ, ಬಿಎಸ್‌ಡಬ್ಲ್ಯು, ಎಸಿಎಸ್, ಸಿಎಂಎ, ಇಂಟಿಗ್ರೇಟೆಡ್ ಎಲ್‌ಎಲ್‌ಬಿ ಇತ್ಯಾದಿ.

ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=jmijSoqBDVw ❖

ವಿದ್ಯಾರ್ಥಿ ವೇತನ ಕೈಪಿಡಿ

ಅದಾನಿ ಗ್ಯಾನ್

ಅದಾನಿ ಗ್ರೂಪ್ ಈ ವಿದ್ಯಾರ್ಥಿವೇತನವನ್ನು ಒದಗಿಸುತ್ತಿದೆ.

ಅರ್ಹತೆ: ಬಿಎ ಎಕನಾಮಿಕ್ಸ್, ಬಿ.ಎಸ್‌ಸಿ ಎಕನಾಮಿಕ್ಸ್, ಬಿ.ಇಸಿ, ಬಿ.ಇ/ಬಿ.ಟೆಕ್., ಇಂಟಿಗ್ರೇಟೆಡ್ 5-ಇಯರ್ ಡ್ಯುವಲ್ ಡಿಗ್ರಿ, ಎಂ.ಟೆಕ್, ಎಂಬಿಬಿಎಸ್ ಮತ್ತು ಎಲ್‌ಎಲ್‌ಬಿ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ಮೊದಲ ವರ್ಷದ ವಿದ್ಯಾರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ.
ಅರ್ಜಿದಾರರು ರಾಜ್ಯ ಅಥವಾ ರಾಷ್ಟ್ರೀಯ ಮಟ್ಟದ ಪ್ರವೇಶ ಪರೀಕ್ಷೆಗಳ ಮೆರಿಟ್ ಶ್ರೇಣಿಯನ್ನು ಆಧರಿಸಿರಬೇಕು.
ಎಲ್ಲಾ ಮೂಲಗಳಿಂದ ಕುಟುಂಬದ ವಾರ್ಷಿಕ ಆದಾಯವು ₹ 4,50,000ವನ್ನು ಮೀರಬಾರದು.

ಆರ್ಥಿಕ ಸಹಾಯ: ವಾರ್ಷಿಕ ₹ 3,50,000ವರೆಗೆ (ಬೋಧನಾ ಶುಲ್ಕ)

ಅರ್ಜಿ ಸಲ್ಲಿಸಲು ಕೊನೆ ದಿನ: 7-10-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/AGSP5

ರಿಲಾಯನ್ಸ್ ಫೌಂಡೇಷನ್

ವಿಭಿನ್ನವಾಗಿ ಯೋಚಿಸುವ, ನಾಯಕತ್ವ ಹೊಂದಿರುವ ಅಭ್ಯರ್ಥಿಗಳಿಗೆ ರಿಲಾಯನ್ಸ್ ಫೌಂಡೇಷನ್ ಪೋಸ್ಟ್‌ಗ್ರಾಜುಯೇಟ್ ಸ್ಕಾಲರ್‌ಷಿಪ್ ನೀಡಲಿದೆ.

ಅರ್ಹತೆ: ಎಂಜಿನಿಯರಿಂಗ್, ಟೆಕ್ನಾಲಜಿ, ಎನರ್ಜಿ ಅಂಡ್ ಲೈಫ್-ಸೈನ್ಸ್‌ಗಳಿಂದ ಆಯ್ದ ಫ್ಯೂಚರ್-ರೆಡಿ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರುವ ಮೊದಲ ವರ್ಷದ ಪೂರ್ಣಾವಧಿಯ ಸ್ನಾತಕೋತ್ತರ ಪದವಿಗಳಿಗೆ ದಾಖಲಾಗಿರುವಂತಹ ವಿದ್ಯಾರ್ಥಿಗಳು. ಗೇಟ್ ಪರೀಕ್ಷೆಯಲ್ಲಿ 550-1000 ಗಳಿಸಿರಬೇಕು. ಅಥವಾ ತಮ್ಮ ಪದವಿಪೂರ್ವ ಸಿಜಿಪಿಎಯಲ್ಲಿ 7.5 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು (ಅಥವಾ ಸಿಜಿಪಿಎಗೆ ಸಾಮಾನ್ಯೀಕರಿಸಲಾದ %) [ವಿದ್ಯಾರ್ಥಿಗಳು ಗೇಟ್ ಪರೀಕ್ಷೆ ಬರೆದಿರದಿದ್ದರೆ].

ಮುಸ್ಕಾನ್ ಸ್ಕಾಲರ್‌ಷಿಪ್

ಚಾಲಕರು (ಎಲ್‌ಎಂವಿ/ಎಚ್‌ಎಂವಿ), ಮೆಕ್ಯಾನಿಕ್ಸ್ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದ ವ್ಯಕ್ತಿಗಳ ಮಕ್ಕಳಿಗೆ ಹಣಕಾಸಿನ ನೆರವು ನೀಡಲಿದೆ.

ಅರ್ಹತೆ: 9 ರಿಂದ 12ನೇ ತರಗತಿಗಳಲ್ಲಿ ಓದುತ್ತಿರುವಂತಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು. ಚಾಲಕರು (ಎಲ್‌ಎಂವಿ/ಎಚ್‌ಎಂವಿ), ಮೆಕ್ಯಾನಿಕ್ಸ್ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ಮಕ್ಕಳಿಗೆ ಆದ್ಯತೆ. ಅರ್ಹತೆಗಾಗಿ ಅರ್ಜಿದಾರರು ತಮ್ಮ ಹಿಂದಿನ ತರಗತಿಯಲ್ಲಿ ಶೇ 60 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿರಬೇಕು. ಎಲ್ಲಾ ಮೂಲಗಳಿಂದ ಕುಟುಂಬದ ಒಟ್ಟು ಆದಾಯವು ವಾರ್ಷಿಕ ₹ 8 ಲಕ್ಷವನ್ನು ಮೀರಬಾರದು.

ಆರ್ಥಿಕ ಸಹಾಯ: ₹ 12,000ದ ವರೆಗಿನ ವಿದ್ಯಾರ್ಥಿವೇತನ ಮತ್ತು ಮಾರ್ಗದರ್ಶನದ ಬೆಂಬಲ

ಅರ್ಜಿ ಸಲ್ಲಿಸಲು ಕೊನೆ ದಿನ: 10-10-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/MKSP1

ಆರ್ಥಿಕ ಸಹಾಯ: ಪದವಿಯ ಅವಧಿಯಲ್ಲಿ ₹ 6,00,000

ಅರ್ಜಿ ಸಲ್ಲಿಸಲು ಕೊನೆ ದಿನ: 6-10-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/RFS10

ಎಸ್‌ಬಿಐಎಫ್ ಆಶಾ ಸ್ಕಾಲರ್‌ಷಿಪ್

ಎಸ್‌ಬಿಐ ಫೌಂಡೇಷನ್ ಉಪಕ್ರಮವಾಗಿದ್ದು, ಭಾರತದ ಅತಿದೊಡ್ಡ ವಿದ್ಯಾರ್ಥಿವೇತನ ಯೋಜನೆಗಳಲ್ಲಿ ಇದೂ ಒಂದು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ನೀಡಲಿದೆ.

ಅರ್ಹತೆ: 6 ರಿಂದ 12ನೇ ತರಗತಿಯವರೆಗಿನ ಶಾಲಾ ವಿದ್ಯಾರ್ಥಿಗಳು, ಅಗ್ರ 100 ಎನ್‌ಐಆರ್‌ಎಫ್ ವಿಶ್ವವಿದ್ಯಾಲಯಗಳು/ಕಾಲೇಜುಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ಐಐಟಿಗಳ ವಿದ್ಯಾರ್ಥಿಗಳು ಮತ್ತು ಐಐಎಂಗಳ ಎಂಬಿಎ/ಪಿಜಿಡಿಎಂ ಕೋರ್ಸ್‌ಗಳನ್ನು ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಅರ್ಜಿದಾರರು ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 75 ಅಂಕಗಳನ್ನು ಗಳಿಸಿರಬೇಕು. ಅವರ ಕುಟುಂಬದ ಒಟ್ಟು ವಾರ್ಷಿಕ ಆದಾಯವು ₹ 6 ಲಕ್ಷದವರೆಗೆ ಇರಬೇಕು (6-12ನೇ ತರಗತಿಯ ವಿದ್ಯಾರ್ಥಿಗಳಾದರೆ ₹ 3 ಲಕ್ಷದವರೆಗೆ).

ಆರ್ಥಿಕ ಸಹಾಯ: 6 ರಿಂದ 12ನೇ ತರಗತಿಯವರೆಗೆ: ತಲಾ ₹ 15,000

ಯುಜಿ ವಿದ್ಯಾರ್ಥಿಗಳು: ₹ 50,000ದ ವರೆಗೆ

ಪಿಜಿ ವಿದ್ಯಾರ್ಥಿಗಳು: ₹ 70,000ದ ವರೆಗೆ

ಐಐಟಿಗಳ ಯುಜಿ ವಿದ್ಯಾರ್ಥಿಗಳು: ₹ 2,00,000ದ ವರೆಗೆ

ಐಐಎಂಗಳ ಎಂಬಿಎ ವಿದ್ಯಾರ್ಥಿಗಳು: ₹ 7,50,000ದ ವರೆಗೆ

ಅರ್ಜಿ ಸಲ್ಲಿಸಲು ಕೊನೆ ದಿನ: 01-10-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/SBIFS7

ಆದಿತ್ಯ ಬಿರ್ಲಾ ಕ್ಯಾಪಿಟಲ್ ಸ್ಕಾಲರ್‌ಷಿಪ್

ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಹಣಕಾಸಿನ ನೆರವು ಮತ್ತು ಮಾರ್ಗದರ್ಶನ ನೀಡಲಿದೆ.

ಅರ್ಹತೆ: 9 ರಿಂದ 12 ನೇ ತರಗತಿ, ಯಾವುದೇ ಸಾಮಾನ್ಯ ಪದವಿ ಕೋರ್ಸ್‌ಗಳು, ಯಾವುದೇ 3-ವರ್ಷದ ವೃತ್ತಿಪರ ಪದವಿ ಕೋರ್ಸ್‌ಗಳು ಅಥವಾ ಭಾರತದ ಮಾನ್ಯತೆ ಪಡೆದ ಕಾಲೇಜುಗಳು/ವಿಶ್ವವಿದ್ಯಾಲಯಗಳಿಂದ ಯಾವುದೇ 4-ವರ್ಷದ ವೃತ್ತಿಪರ ಪದವಿ ಕೋರ್ಸ್‌ಗಳಲ್ಲಿ ಓದುತ್ತಿರುವಂಥ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ.
ಅರ್ಜಿದಾರರು ತಮ್ಮ ಹಿಂದಿನ ತರಗತಿಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ₹ 6 ಲಕ್ಷವನ್ನು ಮೀರಬಾರದು.
ಭಾರತದಾದ್ಯಂತದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

ಆರ್ಥಿಕ ಸಹಾಯ: ₹ 60,000ದ ವರೆಗೆ (ಒಂದು ಬಾರಿ)

ಅರ್ಜಿ ಸಲ್ಲಿಸಲು ಕೊನೆ ದಿನ: 15-10-2024

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/ABCC9 ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜ ವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

9) ಯಾಕೆ 1770ರ ದಶಕದಲ್ಲಿ ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು?

ಉತ್ತರ:– 1770ರ ದಶಕದಲ್ಲಿ ಭೀಕರ ಕ್ಷಾಮಭೀತಿಯಿಂದ ಕಾನೂನು ಸುವ್ಯವಸ್ಥೆಯ ಸಮಸ್ಯೆ ವಿಷಮಗೊಳ್ಳತೊಡಗಿತು. ಇದರ ಪರಿಣಾಮವನ್ನು ಎದುರಿಸಲು ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು.

10) ಪೀಲ್ ಎಂಬುವವರ ನೇತೃತ್ವದಲ್ಲಿ ಸಮಿತಿಯೊಂದನ್ನು ಯಾವ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರ ರಚಿಸಿತು. ಅದರ ಶಿಫಾರಸ್ಸುಗಳ ಆಧಾರದ ಮೇಲೆ ಯಾವುದನ್ನು ಮರು ವಿನ್ಯಾಸಗೊಳಿಸಲಾಯಿತು?

ಉತ್ತರ:– 1857ರ ಘಟನೆಯ ನಂತರ ಪೀಲ್ ಎಂಬುವವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ, ಶಿಫಾರಸ್ಸುಗಳನ್ನು ಬ್ರಿಟಿಷ್ ಸರಕಾರ ಪಡೆಯಿತು. ಈ ಶಿಫಾರಸ್ಸುಗಳ ಆಧಾರದ ಮೇಲೆ ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲಾಯಿತು

11) ಯಾವುದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು.

ಉತ್ತರ:– ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು.

12) ಭಾರತದಲ್ಲಿ ಮಹಲ್ವಾರಿ ಪದ್ಧತಿ ಪ್ರಯೋಗಿಸಿದವರು ಯಾರು?

ಉತ್ತರ:– ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

13) ಮಹಲವಾರಿ ಪದ್ಧತಿಯನ್ನು ಎಲ್ಲೆಲ್ಲಿ ಜಾರಿಗೆ ತಂದನು?

ಉತ್ತರ:– ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ

14) ರೈತುವಾರಿ ಪದ್ಧತಿ ಮೊದಲು ಜಾರಿಗೆ ತಂದವನು ಯಾರು ? ಮೊದಲು ಎಲ್ಲಿ ಜಾರಿಗೆ ತರಲಾಯಿತು?

ಉತ್ತರ:– ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಹಲ್ ಪ್ರಾಂತ್ಯದಲ್ಲಿ 1792ರಲ್ಲಿ ಅಲೆಕ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು.

15) ರೈತುವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದನು ಯಾರು?

ಉತ್ತರ:– ಥಾಮಸ್ ಮನ್ರೊ

16) ಯಾವ ಪದ್ಧತಿಯಲ್ಲಿ ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯಮಾಡಿತು.?

ಉತ್ತರ:– ರೈತವಾರಿ

17) ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ಯಾರು?

ಉತ್ತರ:–' ವಾರನ್ ಹೇಸ್ಟಿಂಗ್ಸ್,

18) ಯಾವ ಬ್ರಿಟಿಷ್ ವ್ಯಕ್ತಿಯು 1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು?

ಉತ್ತರ:– ಜೊನಾಥನ್ ಡಂಕನ್

19) ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೇಮಕವಾದ ಸಮಿತಿಗೂ ಅಧ್ಯಕ್ಷನನ್ನಾಗಿ ಯಾರನ್ನು ನೇಮಕ ಮಾಡಲಾಯಿತು.

ಉತ್ತರ:– ಮೆಕಾಲೆ

20) ಯಾವ ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು 1857ರಲ್ಲಿ ಸ್ಥಾಪಿಸಿದನು ?

ಉತ್ತರ:– ಸರ್ ಚಾರ್ಲ್ಸ್ ವುಡ್ಸ್ ಆಯೋಗ

ವಿವರವಾಗಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಬ್ರಿಟಿಷ್ ಕಾಲದಲ್ಲಿ ಆದ ನ್ಯಾಯಾಂಗ ಸುಧಾರಣೆಯನ್ನು ಬರೆಯಿರಿ

ಉತ್ತರ:– ಮೊಘಲರಿಂದ ಬ್ರಿಟಿಷರಿಗೆ ಹಂತಹಂತವಾಗಿ ಅಧಿಕಾರ ಹಸ್ತಾಂತರದ ಸಂಕ್ರಮಣ ಕಾಲದಲ್ಲಿ ಹೊಸ ನ್ಯಾಯಂಗ ವ್ಯವಸ್ಥೆಯು ಭಾರತದಲ್ಲಿ ಬೇರು ಬಿಡಲು ಆರಂಭಿಸಿತು. 1764ರ ಬಕ್ಸಾರ್ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು. ಬಂಗಾಳದ ಪ್ರಾಂತ್ಯದಲ್ಲಿ ದ್ವಿ ಆಡಳಿತ ಜಾರಿಗೆ ಬಂದಿತು. ಇದನ್ನು ದ್ವಿ ಸರ್ಕಾರ ಎಂತಲೂ ಕರೆಯುತ್ತಾರೆ. ಇದರ ಪ್ರಕಾರ ಕಂದಾಯ ವಸೂಲಾತಿ, ನಾಗರಿಕ ಮತ್ತು ಅಪರಾಧ ನ್ಯಾಯ ನಿರ್ವಹಣಾ ವ್ಯವಸ್ಥೆಯನ್ನು ಭಾರತೀಯ ಅಧಿಕಾರಿಗಳಿಗೆ ನೀಡಲಾಯಿತು. ವಸೂಲಾದ ಕಂದಾಯದ ನಿರ್ವಹಣಾ ಆಡಳಿತವನ್ನು ಬ್ರಿಟಿಷರು ತಮ್ಮ ಬಳಿಯೇ ಇಟ್ಟುಕೊಂಡರು. ಕ್ರಮೇಣ ಬ್ರಿಟಿಷರು ಹೆಚ್ಚು ಕೇಂದ್ರೀಕೃತ ನ್ಯಾಯಾಂಗ ಪದ್ಧತಿಯನ್ನು ಜಾರಿಗೆ ತರಬೇಕೆಂದು ನಿರ್ಧರಿಸಿದರು. ಈ ಹೆಜ್ಜೆಯಿಂದ ಬ್ರಿಟಿಷರು ಮೊಘಲರ ಅಧಿಕಾರವನ್ನು ಹಿಂದಕ್ಕೆ ಸರಿಸಿ ತಾವೇ ಸಾರ್ವಭೌಮರಾಗತೊಡಗಿದರು. ಇದನ್ನು ಹೊಸ ನ್ಯಾಯಾಂಗ ವ್ಯವಸ್ಥೆಯನ್ನು ಜಾರಿಗೆ ತರುವುದರ ಮೂಲಕ ಸಾಧಿಸಿದರು. 1772ರಲ್ಲಿ ಗೌವರ್ನರ್ ಆಗಿ ಅಧಿಕಾರ ವಹಿಸಿಕೊಂಡ ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ ; 'ದಿವಾನಿ ಅದಾಲತ್' ಎಂಬ ನಾಗರಿಕ ನ್ಯಾಯಾಲಯಗಳು ಮತ್ತು 'ಫೌಜದಾರಿ ಅದಾಲತ್' ಎಂಬ ಅಪರಾಧ ನ್ಯಾಯಾಲಯಗಳು. ಇಲ್ಲಿ ನಾಗರಿಕ ನ್ಯಾಯದಾನದ ಸಂದರ್ಭದಲ್ಲಿ ಹಿಂದೂಗಳಿಗೆ ಹಿಂದೂ ಶಾಸ್ತ್ರಗ್ರಂಥಗಳ ಪ್ರಕಾರ ಮತ್ತು ಮುಸ್ಲಿಮರಿಗೆ ಷರಿಯತ್ ಕಾನೂನುಗಳ ಪ್ರಕಾರ ನ್ಯಾಯದಾನ ನೀಡಲಾಗುತ್ತಿತ್ತು. ಅಪರಾಧ ಪ್ರಕರಣಗಳಿಗೆ ಬಂದಾಗ ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ ನಡೆಸಲಾಗುತ್ತಿತ್ತು. ಕ್ರಮೇಣ ಬ್ರಿಟಿಷ್ ಕಾನೂನುಗಳನ್ನು ಜಾರಿಗೊಳಿಸುವ ಮೂಲಕ ಅಪರಾಧ ಕಾನೂನುಗಳಲ್ಲಿ ಬದಲಾವಣೆ ತರಲಾಯಿತು. ನಾಗರಿಕ ನ್ಯಾಯಾಲಯಗಳು ಯೂರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಅಪರಾಧ ನ್ಯಾಯಾಲಯಗಳು 'ಕಾಜಿ'ಗಳ ಅಧೀನದಲ್ಲಿದ್ದರೂ ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿಯೇ ಕಾರ್ಯನಿರ್ವಹಿಸಬೇಕಾಗಿತ್ತು

2) ಬ್ರಿಟಿಷ್ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ಆದ ಬದಲಾವಣೆಗಳ ಕುರಿತು ಬರೆಯಿರಿ

ಉತ್ತರ:– ಆಂತರಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತಿರುವ ವರ್ಗವೆ ಪೊಲೀಸರು. ಲಾರ್ಡ್ ಕಾರ್ನ್‌ವಾಲೀಸನು ಪ್ರಥಮತಃ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು. ಇವನು 'ಸೂಪರಿಟೆಂಡೆಂಟ್ ಆಫ್ ಪೊಲೀಸ್' (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು.

(ಮುಂದುವರಿಯುವುದು)

II PUC MATHS

INTEGRALS

More Problems:-

5. Evaluate $\int \frac{\sqrt{1+x^2}}{1-x^2}\,dx$

$$\text{Soln:-}\ \int \frac{\sqrt{1+x^2}}{1-x^2}dx = \int \frac{1+x^2}{(1-x^2)\sqrt{1+x^2}}dx$$

$$\Rightarrow \int \frac{-(1-x^2)+2}{(1-x^2)\sqrt{1+x^2}}dx$$

$$\Rightarrow -\int \frac{1}{\sqrt{1+x^2}}dx + 2\int \frac{dx}{(1-x^2)\sqrt{1+x^2}}$$

$$\Rightarrow -\log\left|x+\sqrt{1+x^2}\right| + 2I$$

(.....Contd)

$$\text{where } I = \int \frac{dx}{(1-x^2)\sqrt{1+x^2}},\ \text{putting } x = \frac{1}{t}$$

$$\text{we get, } dx = -\frac{1}{t^2}dt = \int \frac{-\frac{1}{t^2}dt}{\left(1-\frac{1}{t^2}\right)\sqrt{1+\frac{1}{t^2}}}$$

$$= -\int \frac{t\,dt}{(t^2-1)\sqrt{t^2+1}}$$

$$\Rightarrow -\int \frac{z\,dz}{(z^2-1-1)z} = -\int \frac{dz}{z^2-2}$$

$$= -\frac{1}{2\sqrt{2}}\log\left|\frac{z-\sqrt{2}}{z+\sqrt{2}}\right| + C$$

$$\Rightarrow -\frac{1}{2\sqrt{2}}\log\left|\frac{\sqrt{t^2+1}-\sqrt{2}}{\sqrt{t^2+1}+\sqrt{2}}\right| + C$$

$$\Rightarrow -\frac{1}{2\sqrt{2}}\log\left|\frac{\sqrt{\frac{1}{x^2}+1}-\sqrt{2}}{\sqrt{\frac{1}{x^2}+1}+\sqrt{2}}\right| + C$$

$$\Rightarrow -\frac{1}{2\sqrt{2}}\log\left|\frac{\sqrt{1+x^2}-\sqrt{2x}}{\sqrt{1+x^2}+\sqrt{2x}}\right| + C,\ \text{putting in (i)},$$

$$\text{we get } \int \frac{\sqrt{1+x^2}}{1-x^2}dx = -\log\left|x+\sqrt{1+x^2}\right|$$

$$-\frac{1}{\sqrt{2}}\log\left|\frac{\sqrt{1+x^2}-\sqrt{2x}}{\sqrt{1+x^2}+\sqrt{2x}}\right| + C$$

Basics to be remembered

i) $1+2+3+.....+(n-1) = \frac{n(n-1)}{2}$

ii) $1^2+2^2+3^2+.....+(n-1)^2 = \frac{n(n-1)(2n-1)}{6}$

iii) $1^3+2^3+3^3+.....+(n-1)^3 = \left\{\frac{n(n-1)}{2}\right\}^2$

iv) $a+ar+ar^2+.....+ar^{n-1} = \frac{a(r^n-1)}{(r-1)}$

where, $r \neq 1$ and $r > 1$

v) $\sin a + \sin(a+h) + \sin(a+2h) + ...$

$$+\sin\{a+(n-1)h\} = \frac{\sin\left\{a+\left(\frac{n-1}{2}\right)h\right\}\sin\left(\frac{nh}{2}\right)}{\sin(h/2)}$$

vi) $\cos a + \cos(a+h) + \cos(a+2h) + ...$

$$+\cos\{a+(n-1)h\} = \frac{\cos\left\{a+\left(\frac{n-1}{2}\right)h\right\}\sin\left(\frac{nh}{2}\right)}{\sin(h/2)}$$

Definite integrals

A definite integral is denoted by $\int_a^b f(x)\,dx$,

where a is called the lower limit of the integral and b is called the upper limit of the integral.

Methods of finding Definite Integral


(i) Definite Integral as the limit of a sum
(ii) Let F(x) be antiderivative of f(x)

1. Explain that method of finding Definite Integral as the limit of a sum.

Ans:- ***Definite integral as the limit of a sum***

Let f be a continuous function defined on close interval [a, b]. Assume that all the values taken by the function are non negative, so the graph of the function is a curve above the x-axis.

The define integral $\int_a^b f(x)\,dx$ is the area bounded by the curve $y = f(x)$, the ordinates $x = a$, $x = b$ and the x-axis. To evaluate this area, consider the region PRSQP between this curve, x-axis and the ordinates $x = a$ and $x = b$ as in the fig below -



Divide the interval $[a, b]$ into n equal subintervals denoted by $[x_0, x_1]$, $[x_1, x_2]$,....., $[x_{r-1}, x_r]$, ..., $[x_{n-1}, x_n]$, where $x_0 = a$,

$x_1 = a + h$, $x_2 = a + 2h$,... ... , $x_r = a + rh$ and

$$x_n = b = a + nh \text{ (or) } n = \frac{b-a}{h}.$$

We note that as $n \to \infty$, $h \to 0$.

The region PRSQP under consideration is the sum of n sub regions, where each sub region is defined on subintervals $[x_{r-1}, x_r]$,

$r = 1, 2, 3, \ldots, n$.

From fig above, we have area of the rectangle (ABLC) < area of the region (ABDCA) < area of the rectangle (ABDM).......(1)

Evidently as $x_r - x_{r-1} \to 0$ i.e., $h \to 0$ all the 3 areas shown in (1) become nearly equal to each other.

(Contd...)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

33 ಲೋಪ: ಕೆಪಿಎಸ್‌ಸಿ ಮೌನ

ಎರಡನೇ ಮುಖಪುಟದಿಂದ...

ಪ್ರಶ್ನೆಪತ್ರಿಕೆಯಲ್ಲಿನ ಕನ್ನಡ ಅನುವಾದ ದೋಷಗಳಿಗೆ ಪರೀಕ್ಷಾರ್ಥಿಗಳು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರವೂ ಸೇರಿದಂತೆ ಕನ್ನಡ ಪರ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ ಕಾರಣ, ಮುಂದಿನ ಎರಡು ತಿಂಗಳ ಒಳಗೆ ಮರು ಪರೀಕ್ಷೆ ನಡೆಸುವಂತೆ ಕೆಪಿಎಸ್‌ಸಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೆ.2ರಂದೇ ಸೂಚನೆ ನೀಡಿದ್ದರು. ಅಲ್ಲದೆ, ಈ ಲೋಪಗಳಿಗೆ ಕಾರಣರಾದ ಅಧಿಕಾರಿಗಳನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗುವುದು ಎಂದೂ ಹೇಳಿದ್ದರು.

ತಜ್ಞರ ವರದಿಯನ್ನು ರಾಜ್ಯ ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿರುವ ಕೆಪಿಎಸ್‌ಸಿ, ಸರ್ಕಾರ ನೀಡುವ ಆದೇಶದಂತೆ ಮುಂದುವರಿಯಲು ನಿರ್ಣಯ ತೆಗೆದುಕೊಂಡಿದೆ. ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ತಜ್ಞರ ವರದಿಯ ಕುರಿತು ಚರ್ಚಿಸಲು ಕೂಡಾ ಆಯೋಗ ತೀರ್ಮಾನಿಸಿದೆ.

'ಭಾಷಾಂತರದಲ್ಲಿ ವ್ಯತ್ಯಾಸವಿದೆಯೆಂದು ಅಭ್ಯರ್ಥಿಗಳು ಆಕ್ಷೇಪ ವ್ಯಕ್ತಪಡಿಸಿದ್ದ ಎಲ್ಲ 57 ಪ್ರಶ್ನೆ- ಉತ್ತರಗಳನ್ನು ಪರಿಶೀಲಿಸಿದ್ದ ವಿಷಯ ತಜ್ಞರ ಸಮಿತಿ, 33 ತಪ್ಪುಗಳನ್ನು ಗುರುತಿಸಿದ್ದರೂ ಆರು ಪ್ರಶ್ನೆಗಳಿಗೆ ಮಾತ್ರ ಕೃಪಾಂಕ ನೀಡಬಹುದು. ಉಳಿದವುಗಳನ್ನು ಅರ್ಥೈಸಿಕೊಂಡು ಅಭ್ಯರ್ಥಿ ಸರಿಯಾದ ಉತ್ತರಗಳನ್ನು ಗುರುತಿಸಬಹುದು' ಎಂಬ ವಿಷಯ ತಜ್ಞರ ಅಭಿಪ್ರಾಯದ ಕುರಿತು ಆಯೋಗದ ಸಭೆಯಲ್ಲಿ ಗಂಭೀರ ಚರ್ಚೆಯಾಗಿದೆ. ಜೊತೆಗೆ, ಈ ತಪ್ಪುಗಳಿಗೆ ಕಾರಣರಾದವರ ಮೇಲೆ ಕ್ರಮ ತೆಗೆದುಕೊಳ್ಳಲು ಮತ್ತು ಮರು ಪರೀಕ್ಷೆಯ ದಿನಾಂಕವನ್ನು ತಕ್ಷಣ ಘೋಷಿಸಬೇಕೆಂದು ಆಯೋಗದ ಬಹುತೇಕ ಸದಸ್ಯರು ಸಭೆಯಲ್ಲಿ ಪಟ್ಟು ಹಿಡಿದಿದ್ದರು. ಆದರೆ, ಈ ಎರಡೂ ವಿಚಾರಗಳಲ್ಲಿ ನಿರ್ಣಯ ಕೈಗೊಳ್ಳದಿರುವುದಕ್ಕೆ ಸದಸ್ಯರ ನಡುವೆ ಕಾವೇರಿದ ವಾಗ್ವಾದವೂ ನಡೆದಿದೆ. ಆದರೂ ಯಾವುದೇ ತೀರ್ಮಾನ ಆಗಿಲ್ಲ' ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

57 ಪ್ರಶ್ನೆ-ಉತ್ತರಗಳಲ್ಲಿ ಲೋಪ- ಆಕ್ಷೇಪ: ಆಗಸ್ಟ್ 27ರಂದು ನಡೆದ ಪೂರ್ವಭಾವಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳು, ಪ್ರಶ್ನೆಪತ್ರಿಕೆ 1ರಲ್ಲಿ 28 ಮತ್ತು ಪ್ರಶ್ನೆಪತ್ರಿಕೆ 2ರಲ್ಲಿ 29 ಸೇರಿ ಒಟ್ಟು 57 ಪ್ರಶ್ನೆಗಳಲ್ಲಿ ಲೋಪದೋಷಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಮಾಡಿ ಆಕ್ರೋಶ ವ್ಯಕ್ತಪಡಿಸಿದ್ದರು. ಹೀಗಾಗಿ, ಈ ಕುರಿತು ಅಭಿಪ್ರಾಯ ಪಡೆಯಲು ವಿಷಯ ತಜ್ಞರ ಸಮಿತಿಯನ್ನು ಕೆಪಿಎಸ್‌ಸಿ ನೇಮಿಸಿತ್ತು. ಜೊತೆಗೆ, ಎರಡೂ ಪತ್ರಿಕೆಗಳ ಕೀ ಉತ್ತರಗಳನ್ನು ಆಯೋಗದ ಜಾಲತಾಣದಲ್ಲಿ ಪ್ರಕಟಿಸಿ, ಆಕ್ಷೇಪಣೆಗಳಿಗೆ ಸೆ.4ರವರೆಗೆ ಅವಕಾಶ ನೀಡಿತ್ತು.

ಈ 57 ಪ್ರಶ್ನೆಗಳಿಗೆ ಆಯೋಗ ಪ್ರಕಟಿಸಿದ್ದ ಕೀ ಉತ್ತರ, ಭಾಷಾಂತರದಲ್ಲಿ ವ್ಯತ್ಯಾಸ ಆಗಿದೆಯೇ? ಭಾಷಾಂತರ ವ್ಯತ್ಯಾಸವಾಗಿದ್ದರೆ ಕೃಪಾಂಕ ನೀಡಬೇಕೇ ಅಥವಾ ಕೀ ಉತ್ತರ ಪರಿಷ್ಕರಿಸಬೇಕೇ? ಭಾಷಾಂತರದಲ್ಲಿ ವ್ಯತ್ಯಾಸ ಇಲ್ಲದಿದ್ದರೂ ಪರಿಷ್ಕೃತಗೊಳ್ಳಲಿರುವ ಕೀ ಉತ್ತರಗಳ ಕುರಿತು ಪರಿಶೀಲಿಸಿ ತಜ್ಞರ ಸಮಿತಿಯು ಆಯೋಗಕ್ಕೆ ತನ್ನ ಅಭಿಪ್ರಾಯವನ್ನು ನೀಡಿದೆ.

ಈ ಕುರಿತು ಪ್ರತಿಕ್ರಿಯೆ ಪಡೆಯಲು ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ರಾಕೇಶ್ ಕುಮಾರ್ ಮತ್ತು ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಮೈಸೂರು, ಶಿರಸಿಯಲ್ಲಿ ಜೋರು ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದಲ್ಲಿ ಶನಿವಾರ ತಡರಾತ್ರಿಯಿಂದ ಭಾನುವಾರ ಬೆಳಿಗ್ಗೆ 6.45ರವರೆಗೆ ಗುಡುಗು, ಮಿಂಚು ಸಹಿತ ಜೋರು ಮಳೆ ಸುರಿಯಿತು.

ಭಾನುವಾರ ಸಂಜೆಯೂ ನಗರದಲ್ಲಿ ಗುಡುಗು, ಮಿಂಚು ಸಹಿತ ಜೋರು ಮಳೆ ಬಿದ್ದಿತು. ಇದರಿಂದ, ದಸರಾ ಮಹೋತ್ಸವದ ಸಿದ್ಧತಾ ಕಾರ್ಯಕ್ಕೆ ಅಡ್ಡಿಯಾಯಿತು.

ಚಾಮರಾಜನಗರ, ಮಂಡ್ಯ, ಹಾಸನದಲ್ಲೂ ಮಳೆ ಸುರಿಯಿತು. ಮಂಡ್ಯ ಜಿಲ್ಲೆ ಮಳವಳ್ಳಿ ಪಟ್ಟಣ ಹಾಗೂ ತಾಲ್ಲೂಕಿನ ಹಲವೆಡೆ ಶನಿವಾರ ರಾತ್ರಿ ಭಾರಿ ಮಳೆಯಾಯಿತು. ಕಂದೇಗಾಲದ ಮತ್ತಿತಾಳೇಶ್ವರಸ್ವಾಮಿ ದೇವಸ್ಥಾನ, ಪ್ರೌಢಶಾಲೆ ಆವರಣದಲ್ಲಿ ಎರಡು ಅಡಿಗಳಿಗೂ ಜಾಸ್ತಿ ನೀರು ಸಂಗ್ರಹವಾಗಿತ್ತು. ಮೊಳೆದೊಡ್ಡಿ, ಕಲ್ಲುವೀರನಹಳ್ಳಿ, ಕಂದೇಗಾಲದಲ್ಲಿ ಜಮೀನುಗಳು ಜಲಾವೃತವಾಗಿದ್ದವು.

ಮೂರು ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆ

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ಹವಾಮಾನ ಇಲಾಖೆ ಮೂರು ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಿದೆ.

ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಒಂದೆರಡು ಸ್ಥಳಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿಯ ಬಹುತೇಕ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ. ಒಳನಾಡಿನ ಉಳಿದ ಜಿಲ್ಲೆಗಳ ಕೆಲವು ಸ್ಥಳಗಳಲ್ಲೂ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸೋಮವಾರ ಮೋಡಕವಿದ ವಾತಾವರಣವಿರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹುಬ್ಬಳ್ಳಿ ವರದಿ: ಧಾರವಾಡ, ಗದಗ, ಉತ್ತರ ಕನ್ನಡದ ಶಿರಸಿ ಸೇರಿದಂತೆ ಹಲವೆಡೆ ಭಾನುವಾರ ಸಾಯಂಕಾಲ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ.

ಬಿಸಿದ ಧಗೆ, ಸೆಕೆಯಿಂದ ಬಸವಳಿದಿದ್ದ ಹುಬ್ಬಳ್ಳಿ ಜನತೆಗೆ ಸಂಜೆ ಸುರಿದ ಧಾರಾಕಾರ ಮಳೆ ತಂಪೆರೆಯಿತು. ತಾಲ್ಲೂಕಿನ ಬ್ಯಾಹಟ್ಟಿ, ಕುಸುಗಲ್, ಹೆಬಸೂರು, ಧಾರವಾಡ ಜಿಲ್ಲೆಯ ಕುಂದಗೋಳ ಸೇರಿದಂತೆ ಗ್ರಾಮೀಣ ಭಾಗದಲ್ಲಿಯೂ ಬಿರುಸಿನ ಮಳೆಯಾಗಿದೆ. ಉತ್ತರ ಕನ್ನಡದ ಶಿರಸಿ, ಸಿದ್ದಾಪುರ, ಗದಗ ಬೆಟಗೇರಿ ಅವಳಿ ನಗರದಲ್ಲಿ ಮುಕ್ಕಾಲು ತಾಸು ಗುಡುಗು ಸಿಡಿಲು ಸಹಿತ ಉತ್ತಮ ಮಳೆಯಾಗಿದೆ.

ಸಂವಿಧಾನ ತಿದ್ದುಪಡಿಗೆ 3 ಮಸೂದೆ

ಮೊದಲನೇ ತಿದ್ದುಪಡಿ

ಎರಡನೇ ಮುಖಪುಟದಿಂದ...

ಸಂವಿಧಾನದ 83(2) ವಿಧಿಗೆ ತಿದ್ದುಪಡಿ ತಂದು, ಅದಕ್ಕೆ, ಉಪ ಕಲಂ (3) ಹಾಗೂ (4) ಸೇರ್ಪಡೆ ಮಾಡುವುದು. ಈ ಉಪ ಕಲಂಗಳು ಲೋಕಸಭೆಯ ಅವಧಿ ಹಾಗೂ ಅದರ ವಿಸರ್ಜನೆ ಕುರಿತು ವಿವರಿಸುತ್ತವೆ. ಇನ್ನು, ವಿಧಾನಸಭೆಗಳ ವಿಸರ್ಜನೆಗೆ ಸಂಬಂಧಿಸಿದ ಅವಕಾಶಗಳನ್ನು ಕೂಡ ಈ ತಿದ್ದುಪಡಿ ಒಳಗೊಂಡಿದೆ.

ಇದರ ಜೊತೆ, 'ಏಕಕಾಲಿಕ ಚುನಾವಣೆಗಳು' ಎಂಬ ಪದ ಸೇರ್ಪಡೆಗೆ ಅನುವು ಮಾಡಿ ಕೊಡಲು, 327ನೇ ವಿಧಿಗೆ ತಿದ್ದುಪಡಿ ತರುವುದಕ್ಕೆ ಸಂಬಂಧಿಸಿದ ಅವಕಾಶಗಳನ್ನು ಒಳಗೊಂಡಿದೆ. ಈ ಮಸೂದೆ ಅಂಗೀಕಾರಕ್ಕೆ ಕನಿಷ್ಠ ಶೇ 50ರಷ್ಟು ರಾಜ್ಯಗಳ ಒಪ್ಪಿಗೆಯ ಅಗತ್ಯವಿಲ್ಲ ಎಂದು ಸಮಿತಿಯ ಶಿಫಾರಸು ಹೇಳುತ್ತದೆ.

ಎರಡನೇ ತಿದ್ದುಪಡಿ

ಎರಡನೇ ಮುಖಪುಟದಿಂದ...

ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಸ್ಥಾನ, ಲೋಕಸಭೆ, ರಾಜ್ಯಸಭೆ ಹಾಗೂ ರಾಜ್ಯಗಳ ವಿಧಾನಸಭೆಗಳಿಗೆ ಚುನಾವಣೆ ನಡೆಸುವುದು ಕೇಂದ್ರ ಚುನಾವಣಾ ಆಯೋಗದ ಜವಾಬ್ದಾರಿ.

ಇನ್ನು, ಮುನ್ಸಿಪಾಲಿಟಿಗಳು, ಪಂಚಾಯಿತಿಗಳು ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವ ಹೊಣೆ ಎಸ್.ಇ.ಸಿಗಳದ್ದು.

ಹೀಗಾಗಿ, ಎರಡನೇ ಸಂವಿಧಾನ ತಿದ್ದುಪಡಿ ಮಸೂದೆಯು, ಲೋಕಸಭೆ ಮತ್ತು ವಿಧಾನಸಭೆಗಳ ಜೊತೆಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದ ಅವಕಾಶಗಳನ್ನು ಒಳಗೊಂಡಿದೆ. ಇದಕ್ಕೆ ಸಂಬಂಧಿಸಿದಂತೆ, ಹೊಸದಾಗಿ 324ಎ ವಿಧಿಯನ್ನು ಸೇರ್ಪಡೆ ಮಾಡಲಾಗುತ್ತದೆ.

ಮೂರನೇ ತಿದ್ದುಪಡಿ

ಎರಡನೇ ಮುಖಪುಟದಿಂದ...

ಉದ್ದೇಶಿತ ಈ ಮಸೂದೆಯು ಸಾಮಾನ್ಯ ಮಸೂದೆಯಾಗಿರುವ ಕಾರಣ ಇದಕ್ಕೆ ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಅಗತ್ಯವಿರುವುದಿಲ್ಲ. ಅಲ್ಲದೇ, ರಾಜ್ಯಗಳ ಒಪ್ಪಿಗೆಯೂ ಬೇಕಾಗುವುದಿಲ್ಲ.

'ನಾನು ಆರೋಪಿ, ಆತ ಸರಣಿ ಕೃತ್ಯದ ಅಪರಾಧಿ'

ಎರಡನೇ ಮುಖಪುಟದಿಂದ...

'ಎಚ್. ಡಿ. ಕುಮಾರಸ್ವಾಮಿ ಆರೋಪಿ. ಅವರ ಒತ್ತಡ ತಂತ್ರಕ್ಕೆ ಮಣಿಯುವುದಿಲ್ಲ. ತನಿಖೆ ಮೇಲೆ ಪ್ರಭಾವ ಬೀರದಂತೆ ನೋಡಿಕೊಳ್ಳುತ್ತೇನೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದರು. 'ಹಂದಿಗಳೊಂದಿಗೆ ಎಂದಿಗೂ ಗುದ್ದಾಡಬೇಡಿ. ಗುದ್ದಾಡಿದರೆ ಹೊಲಸು ನಿಮಗೂ ಮೆತ್ತಿಕೊಳ್ಳುತ್ತದೆ, ಹಂದಿಗೂ ಮೆತ್ತಿಕೊಳ್ಳುತ್ತದೆ. ಆದರದು ಹಂದಿಗೆ ಇಷ್ಟವಾಗುತ್ತದೆ' ಎಂದು ಜಾರ್ಜ್ ಬರ್ನಾರ್ಡ್ ಶಾ ಮಾತನ್ನು ಉಲ್ಲೇಖಿಸಿದ್ದರು. ಈ ಪತ್ರ ಮಾಧ್ಯಮಗಳಿಗೆ ಸೋರಿಕೆಯಾಗಿತ್ತು.

ಈ ಪತ್ರಕ್ಕೆ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪತ್ರದಲ್ಲಿರುವ ವಿಷಯಗಳ ಬಗ್ಗೆ ಭಾನುವಾರ ಬೆಳಿಗ್ಗೆ ಪ್ರತಿಕ್ರಿಯೆ ನೀಡಿದ ಕುಮಾರಸ್ವಾಮಿ, 'ಸುದ್ದಿಗೋಷ್ಠಿ ಯಲ್ಲಿ ನಾನು ಎತ್ತಿರುವ ಪ್ರಶ್ನೆಗಳಿಗೆ ಆ ಅಧಿಕಾರಿ ಉತ್ತರಿಸಬೇಕಿತ್ತು. ಬದಲಿಗೆ ಒಬ್ಬ ಕೇಂದ್ರ ಸಚಿವರ ಬಗ್ಗೆ ಅವಹೇಳನಕಾರಿ ಪದಗಳನ್ನು ಬಳಕೆ ಮಾಡಿದ್ದಾರೆ. ಕೊಳಕು ಪದಗಳನ್ನು ಬಳಸಿ ಪತ್ರ ಬರೆದಿರುವುದು ಅವರ ಸಂಸ್ಕೃತಿಯನ್ನು ತೋರಿಸುತ್ತದೆ. ಇದಕ್ಕೆಲ್ಲಾ ಎಲ್ಲಿ, ಹೇಗೆ ಉತ್ತರ ಕೊಡಬೇಕೋ ಹಾಗೆ ಕೊಡುತ್ತೇನೆ' ಎಂದಿದ್ದಾರೆ.

'ಆ ಅಧಿಕಾರಿ ಒಬ್ಬ ಬ್ಲಾಕ್‌ಮೇಲರ್. ಅವರ ವಿರುದ್ಧ, ಸರಣಿ ಅಪರಾಧ ಕೃತ್ಯಗಳನ್ನು ಎಸಗಿದ ಆರೋಪಗಳಿವೆ. ಕೋಟ್ಯಂತರ ರೂಪಾಯಿ ವಸೂಲಿ ಮಾಡಿದ ಸಂಬಂಧ ಹಲವು ಪ್ರಕರಣಗಳಿವೆ. ಈ ಪ್ರಕರಣಗಳನ್ನು ನಾನು ದಾಖಲಿಸಿಲ್ಲ, ಅವರ ಸಹೋದ್ಯೋಗಿಯೇ ₹20 ಕೋಟಿ ವಸೂಲಿಗೆ ಒತ್ತಡ ಹೇರಿದ್ದರು ಎಂದು ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಾಗಿದೆ. ಇದನ್ನೇ ದಾಖಲೆ ಸಮೇತ ಸುದ್ದಿಗೋಷ್ಠಿಯಲ್ಲಿ ಹೇಳಿದ್ದೆ. ಪ್ರತಿಯಾಗಿ ಸಿಟ್ಟು, ಆಕ್ರೋಶದಲ್ಲಿ ಪತ್ರ ಬರೆದಿದ್ದಾರೆ' ಎಂದು ಅವರು ಹೇಳಿದ್ದಾರೆ.

'ಕೊಚ್ಚೆಯಲ್ಲಿ ಉರುಳಾಡೋಕೆ ಬಿಟ್ಟಿರಲಿಲ್ಲ'

'ಕುಮಾರಸ್ವಾಮಿ ಅಧಿಕಾರದ ಅವಧಿಯಲ್ಲಿ ಆ ಅಧಿಕಾರಿ ಕರ್ತವ್ಯದಲ್ಲಿ ಇದ್ದನಲ್ಲವೇ ಎಂದು ಕಾಂಗ್ರೆಸ್‌ನ ಕೆಲ ನಾಯಕರು ಪ್ರಶ್ನಿಸುತ್ತಿದ್ದಾರೆ. ಆ ಅಧಿಕಾರಿ ನನ್ನ ಅವಧಿಯಲ್ಲಿ ಕೆಲಸ ಮಾಡಿದ್ದು ನಿಜ. ಆದರೆ ಊರು ಮೇಯೋಕೆ, ಸಿಕ್ಕಸಿಕ್ಕ ಕೊಚ್ಚೆಯಲ್ಲಿ ಉರುಳಾಡೋಕೆ, ಬೆದರಿಸಿ ಸುಲಿಗೆ ಮಾಡೋಕೆ ನಾನು ಬಿಟ್ಟಿರಲಿಲ್ಲ' ಎಂದು ಕುಮಾರಸ್ವಾಮಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಿಪಿಎಲ್ ಕಾರ್ಡ್ ಕಸಿದ 'ಐ.ಟಿ ಪಟ್ಟಿ'

ಆದಾಯ ತೆರಿಗೆ ಪಾವತಿದಾರರ ಅನರ್ಹ ಪಡಿತರ ಚೀಟಿಗಳ ವಿವರ

ಜಿಲ್ಲೆ	ಪಡಿತರ ಚೀಟಿಗಳ ಸಂಖ್ಯೆ
ಬಾಗಲಕೋಟೆ	2,297
ಬಳ್ಳಾರಿ	1,871
ಬೆಂಗಳೂರು ಪೂರ್ವ	1,781
ಬೆಂಗಳೂರು ಉತ್ತರ	2,164
ಬೆಂಗಳೂರು ದಕ್ಷಿಣ	2,835
ಬೆಂಗಳೂರು ಪಶ್ಚಿಮ	4,475
ಬೆಳಗಾವಿ	7,057
ಬೆಂಗಳೂರು	12,886
ಬೆಂಗಳೂರು ಗ್ರಾ.	3,269
ಬೀದರ್	1,384
ಚಾಮರಾಜನಗರ	946
ಚಿಕ್ಕಬಳ್ಳಾಪುರ	2,387
ಚಿಕ್ಕಮಗಳೂರು	2,208
ಚಿತ್ರದುರ್ಗ	1,907
ದಕ್ಷಿಣ ಕನ್ನಡ	4,657
ದಾವಣಗೆರೆ	2,599
ಧಾರವಾಡ	3,363
ಗದಗ	1,002
ಹಾಸನ	4,244
ಹಾವೇರಿ	1,858
ಕಲಬುರ್ಗಿ	1,885
ಕೊಡಗು	1,032
ಕೋಲಾರ	3,073
ಕೊಪ್ಪಳ	1,100
ಮಂಡ್ಯ	5,178
ಮೈಸೂರು	4,576
ರಾಯಚೂರು	1,685
ರಾಮನಗರ	3,406
ಶಿವಮೊಗ್ಗ	3,392
ತುಮಕೂರು	4,683
ಉಡುಪಿ	4,610
ಉತ್ತರ ಕನ್ನಡ	2,559
ವಿಜಯನಗರ	1,083
ವಿಜಯಪುರ	2,086
ಯಾದಗಿರಿ	614
ಒಟ್ಟು	1,06,152

'ಜಾತಿ ಗಣತಿ: ಶಿಫಾರಸು ಅನುಷ್ಠಾನ ಶೀಘ್ರ'

ಒಂದನೇ ಪುಟದಿಂದ...

ವೆಚ್ಚ ಹೆಚ್ಚಳ: ರಾಜ್ಯದ ವಿದ್ಯಾರ್ಥಿನಿಲಯಗಳಲ್ಲಿ ಪ್ರಸ್ತುತ 1.87 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಪ್ರತಿ ವಿದ್ಯಾರ್ಥಿಗೆ ನೀಡಲಾಗುವ ತಿಂಗಳ 'ಘಟಕ ವೆಚ್ಚ'ವನ್ನು ಈ ವರ್ಷ ₹1750ರಿಂದ ₹1850ಕ್ಕೆ ಹೆಚ್ಚಿಸಲಾಗಿದೆ. ರಾಜ್ಯದಲ್ಲಿ ಪ್ರಸ್ತುತ 822 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿದ್ದು, ಈ ವರ್ಷ ಹೊಸತಾಗಿ 20 ವಸತಿ ಶಾಲೆಗಳನ್ನು ತೆರೆಯಲಾಗುವುದು. ಹೋಬಳಿಗೆ ಕನಿಷ್ಠ ಒಂದು ವಸತಿ ಶಾಲೆ ತೆರೆಯುವುದು ಸರ್ಕಾರದ ಗುರಿ; ಅದರ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಮೀಸಲಾತಿ ಇದ್ದಿದ್ದರೆ ವೈದ್ಯನಾಗುತ್ತಿದ್ದೆ': 'ನಾನು ಓದುವಾಗ ರಾಜ್ಯದಲ್ಲಿ ಶಿಕ್ಷಣದಲ್ಲಿ ಮೀಸಲಾತಿ ಇರಲಿಲ್ಲ. ಹೀಗಾಗಿ ಮೆಡಿಕಲ್, ಎಂ.ಎಸ್‌ಸಿ ಸೀಟು ಸಹ ಸಿಗಲಿಲ್ಲ. ಸಿಕ್ಕಿದ್ದರೆ ವೈದ್ಯನಾಗುತ್ತಿದ್ದೆ' ಎಂದು ಸಿದ್ದರಾಮಯ್ಯ ಹೇಳಿದರು. 'ಪಿಯುಸಿ, ಪದವಿ ಓದುವಾಗ ವಸತಿ ವ್ಯವಸ್ಥೆ ಇಲ್ಲದೆ ರೂಂ ಮಾಡಿಕೊಂಡು ಓದುತ್ತಿದ್ದೆ. ಆ ಕಷ್ಟಗಳ ಅನುಭವವೇ ವಿದ್ಯಾಸಿರಿ ಯೋಜನೆ ಜಾರಿಗೆ ಪ್ರೇರಣೆ' ಎಂದು ಹೇಳಿದರು.

ರಾಶಿ ಯಂತ್ರಕ್ಕೆ ಸಿಲುಕಿ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಔರಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಮಮದಾಪುರ ಗ್ರಾಮದಲ್ಲಿ ಸೋಯಾಬಿನ್ ರಾಶಿ ಮಾಡುವಾಗ ಯಂತ್ರಕ್ಕೆ ಸಿಲುಕಿ ಮಹಿಳೆಯೊಬ್ಬರು ಭಾನುವಾರ ಮೃತಪಟ್ಟಿದ್ದಾರೆ.

ಅರುಣಾಬಾಯಿ ಬಸಪ್ಪ ರೂಪಾ (50) ಮೃತರು. ಅವರಿಗೆ ಪತಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

'ತಮ್ಮ ಹೊಲದಲ್ಲಿ ಸೋಯಾಬಿನ್ ರಾಶಿ ಮಾಡುವಾಗ ಯಂತ್ರದಲ್ಲಿ ಸೀರೆ ಸಿಲುಕಿ ಅದರೊಂದಿಗೆ ಮಹಿಳೆಯೂ ಸಿಲುಕಿ ಒದ್ದಾಡಿದ್ದಾರೆ. ಸ್ಥಳದಲ್ಲಿದ್ದವರು ತಕ್ಷಣ ಯಂತ್ರ ಬಂದ್ ಮಾಡಿ ಮಹಿಳೆಯನ್ನು ಹೊರ ತೆಗೆಯುವಷ್ಟರಲ್ಲಿ ಅವರು ಮೃತಪಟ್ಟಿದ್ದಾರೆ. ಯಂತ್ರದ ಪಟ್ಟಿ ಕೊರಳಿಗೆ ಸಿಲುಕಿ ಅವಘಡ ಸಂಭವಿಸಿದೆ' ಎಂದು ಗ್ರಾಮಸ್ಥರು ತಿಳಿಸಿದ್ದಾರೆ.



❦ ಸುಭಾಷಿತ ❦

ಒಳ್ಳೆಯ ಸಂಬಂಧಗಳನ್ನು ಪ್ರೀತಿ ಕೊಟ್ಟು ಉಳಿಸಿಕೊಳ್ಳಿ, ಕೆಟ್ಟ ಸಂಬಂಧಗಳನ್ನು ಮೌನವಾಗಿದ್ದು ಕಳೆದುಕೊಳ್ಳಿ.

-ಸ್ವಾಮಿ ವಿವೇಕಾನಂದ

ಸಿಬಿಐ ತನಿಖೆಗೆ ಮುಕ್ತ ಅನುಮತಿ ವಾಪಸ್ ವಿಶ್ವಾಸ ಕಳೆದುಕೊಂಡಿರುವುದರ ಪರಿಣಾಮ

ಸಿಬಿಐಗೆ ತನಿಖೆ ನಡೆಸಲು ನೀಡಿದ್ದ ಮುಕ್ತ ಅನುಮತಿಯನ್ನು ವಾಪಸ್ ಪಡೆದು ಕರ್ನಾಟಕ ಸರ್ಕಾರವು ಅಧಿಸೂಚನೆ ಹೊರಡಿಸಿದೆ. ಈ ಮೂಲಕ, ಹೀಗೆ ಮಾಡಿದ ಇತರ ಹಲವು ರಾಜ್ಯಗಳ ಪಟ್ಟಿಗೆ ಕರ್ನಾಟಕವೂ ಸೇರಿಕೊಂಡಿದೆ. ಮುಡಾ ಬದಲಿ ನಿವೇಶನ ಹಂಚಿಕೆ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರತಿಕೂಲವಾದ ತೀರ್ಪು ನೀಡಿರುವ ಸಂದರ್ಭದಲ್ಲಿಯೇ ಸಿಬಿಐಗೆ ಸಂಬಂಧಿಸಿ ಈ ತೀರ್ಮಾನಕ್ಕೆ ಬರಲಾಗಿದೆ. ಈ ಎರಡು ವಿದ್ಯಮಾನಗಳ ನಡುವೆ ಯಾವುದೇ ನಂಟು ಇಲ್ಲ ಎಂದು ಸರ್ಕಾರ ಹೇಳಿಕೊಂಡಿದೆ. ಹಾಗಿದ್ದರೂ ಕೇಂದ್ರೀಯ ತನಿಖಾ ಸಂಸ್ಥೆಗೆ ತನಿಖೆಗೆ ನೀಡಿದ್ದ ಅನುಮತಿಯನ್ನು ರಾಜ್ಯಗಳು ಹಿಂದಕ್ಕೆ ಪಡೆಯಲು ಇರುವ ಕಳವಳಗಳು ಮತ್ತು ಒತ್ತಡಗಳು ಏನು ಎಂಬುದರ ಕುರಿತು ಚಿಂತನೆ ನಡೆಸಬೇಕಿದೆ. ಈ ಕಳವಳಗಳು ಮೌಲಿಕವಾಗಿವೆ ಮತ್ತು ಸದ್ಯ ಚರ್ಚೆಯಲ್ಲಿರುವ ಪ್ರಕರಣಗಳ ಆಚೆಗೂ ಯೋಚನೆ ಮಾಡಬೇಕಿದೆ. ಯಾವುದೇ ಭ್ರಷ್ಟಾಚಾರ ಪ್ರಕರಣ ಕುರಿತು ಸಮಗ್ರವಾದ ತನಿಖೆ ನಡೆಯಬೇಕಾದುದು ಅಗತ್ಯ. ಸತ್ಯ ಏನು ಎಂಬುದು ಜನರಿಗೆ ತಿಳಿಯಬೇಕು. ಆದರೆ, ಸಿಬಿಐನಂತಹ ಸಂಸ್ಥೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಗಂಭೀರ ಕಳವಳ ಇರುವುದು ಸುಳ್ಳಲ್ಲ.



ಸಿಬಿಐ ನಿಷ್ಪಕ್ಷಪಾತವಾಗಿ ಮತ್ತು ದಕ್ಷವಾಗಿ ಇದ್ದಿದ್ದರೆ, ಯಾವ ರಾಜ್ಯಕ್ಕೂ ಈ ಸಂಸ್ಥೆಯ ಕುರಿತು ದೂರುಗಳು ಇರುತ್ತಿರಲಿಲ್ಲ

ಕಾನೂನು ಜಾರಿ ವ್ಯವಸ್ಥೆ ಮತ್ತು ತನಿಖೆ ನಡೆಸುವ ಸಂಸ್ಥೆಯ ಮೇಲೆ ಆರೋಪಿ ಹಾಗೂ ಸಮಾಜಕ್ಕೆ ವಿಶ್ವಾಸ ಇರಬೇಕು. ಆದರೆ, ಸಿಬಿಐ ವಿಶ್ವಾಸ ಕಳೆದುಕೊಂಡಿದೆ. ಬಿಜೆಪಿಯೇತರ ಪಕ್ಷಗಳ ನೇತೃತ್ವದ ಸರ್ಕಾರ ಇರುವ ಹಲವು ರಾಜ್ಯಗಳು ಸಿಬಿಐಗೆ ತನಿಖೆ ನಡೆಸಲು ಇದ್ದ ಮುಕ್ತ ಅವಕಾಶವನ್ನು ಇತ್ತೀಚಿನ ದಿನಗಳಲ್ಲಿ ಹಿಂದಕ್ಕೆ ಪಡೆದಿವೆ. ಪಂಜಾಬ್, ಕೇರಳ, ತಮಿಳುನಾಡು, ತೆಲಂಗಾಣ, ಪಶ್ಚಿಮ ಬಂಗಾಳ, ಜಾರ್ಖಂಡ್‌ನಂತಹ ರಾಜ್ಯಗಳು ಈ ಯಾದಿಯಲ್ಲಿವೆ. ಈ ರಾಜ್ಯಗಳಲ್ಲಿ ತನಿಖೆ ನಡೆಸಬೇಕಿದ್ದರೆ ಸಿಬಿಐ ಪ್ರತಿ ಪ್ರಕರಣದಲ್ಲಿಯೂ ರಾಜ್ಯ ಸರ್ಕಾರದ ಅನುಮತಿ ಕೋರಬೇಕಿದೆ. ಸಿಬಿಐ, ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ ತನಿಖಾ ಸಂಸ್ಥೆ. ಕೇಂದ್ರ ಸರ್ಕಾರವು ಸಿಬಿಐಯನ್ನು ತನಗೆ ಬೇಕಾದಂತೆ ದುರ್ಬಳಕೆ ಮಾಡಿಕೊಳ್ಳುವುದನ್ನು ತಡೆಯುವುದಕ್ಕಾಗಿ ಮುಕ್ತ ಅವಕಾಶವನ್ನು ಹಿಂದಕ್ಕೆ ಪಡೆಯುವ ಅವಕಾಶವನ್ನು ರಾಜ್ಯಗಳಿಗೆ ಕಲ್ಪಿಸಲಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ಈ ಹಕ್ಕು ಇದೆ. ನಿಷ್ಪಕ್ಷಪಾತವಾಗಿ ಮತ್ತು ದಕ್ಷವಾಗಿ ಸಿಬಿಐ ಇದ್ದಿದ್ದರೆ ಯಾವ ರಾಜ್ಯಕ್ಕೂ ಈ ಸಂಸ್ಥೆಯ ಕುರಿತು ದೂರುಗಳು ಇರುತ್ತಿರಲಿಲ್ಲ.

ಸಿಬಿಐ ತನ್ನ ರಾಜಕೀಯ ಯಜಮಾನರ ರಾಜಕೀಯ ಹಿತಾಸಕ್ತಿ ಮತ್ತು ಅವರ ಮಾರ್ಗದರ್ಶನದಂತೆ ಕೆಲಸ ಮಾಡುತ್ತಿದೆಯೇ ವಿನಾ ಪ್ರಾಮಾಣಿಕವಾಗಿ ಮತ್ತು ನ್ಯಾಯಯುತವಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಮತ್ತೆ ಮತ್ತೆ ಸಾಬೀತಾಗಿದೆ. ಸಿಬಿಐ ಎಂಬುದು 'ಪಂಜರದೊಳಗಿನ ಗಿಳಿ' ಎಂದು ಸುಪ್ರೀಂ ಕೋರ್ಟ್ 2013ರಲ್ಲಿ ಹೇಳಿತ್ತು. ದೆಹಲಿಯ ಮುಖ್ಯಮಂತ್ರಿಯಾಗಿದ್ದ ಅರವಿಂದ ಕೇಜ್ರಿವಾಲ್ ವಿರುದ್ಧದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಇದೇ ಮಾತನ್ನು ಪುನರುಚ್ಚರಿಸಿದೆ. ಕಳೆದ ಕೆಲವು ವರ್ಷಗಳಲ್ಲಿ ಈ ಹಿಂದೆಂದೂ ಇಲ್ಲದ ರೀತಿಯಲ್ಲಿ ಬಿಜೆಪಿಯೇತರ ಪಕ್ಷಗಳ ಮುಖ್ಯಮಂತ್ರಿಗಳು ಮತ್ತು ನಾಯಕರನ್ನು ಸಿಬಿಐ ಬೆನ್ನುಹತ್ತಿದೆ. ಆದರೆ, ಕೇಂದ್ರದ ಆಡಳಿತಾರೂಢ ಪಕ್ಷದ ನಾಯಕರು ಅಥವಾ ಆ ಪಕ್ಷದಜೊತೆಗೆಕೈಜೋಡಿಸಿದವರಿಗೆರಕ್ಷಣೆಕೊಡಲಾಗಿದೆ.ಪ್ರಕರಣಗಳಲ್ಲಿಅವರುದೋಷಮುಕ್ತರಾಗಿದ್ದಾರೆ. ವ್ಯವಸ್ಥೆಯು ತನ್ನ ಒಳಗೆ ತನ್ನದೇ ಆದ ರಕ್ಷಣಾ ವ್ಯವಸ್ಥೆಯೊಂದನ್ನು ಹೊಂದಿರಬೇಕು. ಮುಕ್ತ ಅವಕಾಶವನ್ನು ಹಿಂದಕ್ಕೆ ಪಡೆಯುವುದು ಅಂತಹ ಒಂದು ರಕ್ಷಣಾ ವ್ಯವಸ್ಥೆ. ತಮ್ಮನ್ನು ಮತ್ತು ತಮ್ಮ ಪಕ್ಷದವರನ್ನು ನ್ಯಾಯಯುತವಲ್ಲದ ರೀತಿಯಲ್ಲಿ ಗುರಿ ಮಾಡಲಾಗುತ್ತಿದೆ ಎಂದು ರಾಜ್ಯ ಸರ್ಕಾರಗಳ ಮುಖ್ಯಸ್ಥರು ಭಾವಿಸಿ, ಮುಕ್ತ ಅವಕಾಶವನ್ನು ಹಿಂದಕ್ಕೆ ಪಡೆದರೆ ರಾಜ್ಯ ಸರ್ಕಾರವನ್ನು ದೂರಲು ಸಾಧ್ಯವಿಲ್ಲ.

ದಿನದ ಟ್ವೀಟ್

ಚಾಲನಾ ಪರವಾನಗಿ: ನಿಯಮ ಕಠಿಣವಾಗಲಿ



ಅದು ಆಕೆಯ ತಪ್ಪಲ್ಲ, ನಾವು ನಿಜವಾದ ತಪ್ಪಿತಸ್ಥರನ್ನು ಹುಡುಕಬೇಕು ಮತ್ತು ಬಂಧಿಸಬೇಕು. ಅಂದರೆ, ಆಕೆಗೆ ಚಾಲನಾ ಪರವಾನಗಿ ಕೊಟ್ಟವರು! ನಾಳಿನ ಭವಿಷ್ಯ ಉಜ್ವಲವಾಗಿ ಇರಬೇಕೆಂದು ಬಯಸುತ್ತೇವಾದರೆ, ಚಾಲನಾ ಪರವಾನಗಿಗೆ ಸಂಬಂಧಿಸಿದಂತೆ ಕಠಿಣವಾದ ಪರೀಕ್ಷೆ ಮತ್ತು ತರಬೇತಿಯ ಅಗತ್ಯ ನಮಗೆ ಇದೆ...

(ದೇಶದ ನಗರವೊಂದರಲ್ಲಿ ತಾಯಿ ಮತ್ತು ಮಗಳಿದ್ದ ಕಾರು ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದು, ಅದನ್ನು ಚಿತ್ರೀಕರಿಸುತ್ತಿದ್ದ ಸಾರ್ವಜನಿಕರಿಗೆ ಮಗಳು ಆಕ್ರೋಶದಿಂದ ಆಕ್ಷೇಪ ವ್ಯಕ್ತಪಡಿಸುತ್ತಿದ್ದ ವಿಡಿಯೊ ದೃಶ್ಯಾವಳಿಗೆ ಪ್ರತಿಕ್ರಿಯೆ)

ಕುನಾಲ್ ಆರ್. ಜಾನಿ, ಉದ್ಯಮಿ

ಕಿಡಿನುಡಿ

ಇರುವ 133 ಮಂದಿ ಡಿಎಂಕೆ ಶಾಸಕರಲ್ಲಿ ಉಪಮುಖ್ಯಮಂತ್ರಿಯಾಗುವ ಸಾಮರ್ಥ್ಯವನ್ನು ಸ್ಟಾಲಿನ್ ಅವರು ಕಂಡಿದ್ದು ತಮ್ಮ ಮಗನಲ್ಲಿ ಮಾತ್ರ. ಇಡೀ ದೇಶಕ್ಕೇ ಅವರು ಪ್ರಜಾಪ್ರಭುತ್ವದ ಬಗ್ಗೆ ಉಪದೇಶ ಕೊಡುತ್ತಾರೆ.



ಸಿಂಗ್ ವರುಣ್, ಪತ್ರಕರ್ತ

25 ವರ್ಷಗಳ ಹಿಂದೆ

ಗುರುವಾರ, 30-9-1999

- **ಗ್ರಾಮೀಣ ಅಭಿವೃದ್ಧಿ ಎಂಜಿನಿಯರಿಂಗ್ ಇಲಾಖೆ ರಚನೆಗೆ ಸಂಪುಟ ಒಪ್ಪಿಗೆ**

ಬೆಂಗಳೂರು, ಸೆ. 29– ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಆರೋಗ್ಯ ಇಲಾಖೆ, ಲೋಕೋಪಯೋಗಿ ಹಾಗೂ ಸಣ್ಣ ನೀರಾವರಿ ವಿಭಾಗಗಳನ್ನು ಒಟ್ಟಿಗೆ ಸೇರಿಸಿ ಪ್ರತ್ಯೇಕವಾಗಿ ಗ್ರಾಮೀಣ ಅಭಿವೃದ್ಧಿ ಎಂಜಿನಿಯರಿಂಗ್ ಇಲಾಖೆಯನ್ನಾಗಿ ರೂಪಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿತು.

ಇಂದು ಮುಖ್ಯಮಂತ್ರಿ ಜೆ. ಎಚ್. ಪಟೇಲ್ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸಚಿವ ಸಂಪುಟ ಈ 'ಐತಿಹಾಸಿಕ ನಿರ್ಧಾರ'ವನ್ನು ತೆಗೆದುಕೊಂಡಿತು. ಈ ನಿರ್ಧಾರದಿಂದ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಯೋಜನೆಗಳು, ಗ್ರಾಮೀಣ ನೈರ್ಮಲ್ಯ ಯೋಜನೆಗಳು ಹಾಗೂ ಇತರ ನಿರ್ಮಾಣ ಕಾಮಗಾರಿಗಳ ಜಾರಿಯಲ್ಲಿ ಆಗುತ್ತಿದ್ದ ವಿಳಂಬ ತಪ್ಪುತ್ತದೆ ಎಂದು ಸಚಿವ ಎಂ. ಪಿ. ಪ್ರಕಾಶ್ ಅವರು ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

- **ಬೈವಾಟರ್ ಸಂಸ್ಥೆಗೆ ಗುತ್ತಿಗೆ ಸಂಪುಟದ ದಿಢೀರ್ ಒಪ್ಪಿಗೆ**

ಬೆಂಗಳೂರು, ಸೆ. 29– ಬೆಂಗಳೂರು ನಗರಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರು ತಂದು ವಿತರಣೆ ಮಾಡುವ ಕಾವೇರಿ ಎರಡನೇ ಘಟ್ಟ ನಾಲ್ಕನೇ ಹಂತದ ವಿವಾದಾತ್ಮಕ ಯೋಜನೆಯನ್ನು ಕಾರ್ಯಗತಗೊಳಿಸುವ ಗುತ್ತಿಗೆಯನ್ನು ಮಲೇಷ್ಯಾ ಮೂಲದ ಬೈವಾಟರ್ ಸಂಸ್ಥೆಗೆ ನೀಡಲು ಸಚಿವ ಸಂಪುಟ ಒಪ್ಪಿಗೆ ಕೊಟ್ಟಿದೆ.

ಇಂದು ಮುಖ್ಯಮಂತ್ರಿ ಜೆ. ಎಚ್. ಪಟೇಲ್ ಅವರ ಅಧಿಕೃತ ನಿವಾಸ 'ಕಾವೇರಿ'ಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಯೋಜನೆಗೆ ಒಪ್ಪಿಗೆ ನೀಡಲಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 30-9-1974

- **ಸಂಸತ್ ಸದಸ್ಯನಿಗೆ ಪಾದರಕ್ಷೆ ಹಾರ ಕತ್ತೆ ಸವಾರಿ**

ರಾಯಪುರ, ಸೆ. 29– ಶನಿವಾರ ಇಲ್ಲಿಗೆ ಸಮೀಪದ ಕಾರ್ಸಿಯಾ ಪಟ್ಟಣದಲ್ಲಿ ಉದ್ರಿಕ್ತ ವಿದ್ಯಾರ್ಥಿಗಳು, ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಸಂಸತ್ ಸದಸ್ಯ ಉಮದ್ ಸಿಂಗ್ ರಾಥಿಯಾ ಎಂಬುವರ ಮುಖಕ್ಕೆ ಕಪ್ಪು ಬೂಟ್‌ಪಾಲಿಷ್ ಬಳಿದು, ಕುತ್ತಿಗೆಗೆ ಪಾದರಕ್ಷೆಗಳ ಹಾರ ಹಾಕಿ ಅವರನ್ನು ಕತ್ತೆಯ ಮೇಲೆ ಕೂಡಿಸಿ ಮೆರವಣಿಗೆ ನಡೆಸಿದರೆಂದು ವರದಿ ತಿಳಿಸಿದೆ.

ಸಂಸತ್ ಸದಸ್ಯ ಉಮದ್ ಸಿಂಗ್ ರಾಥಿಯಾ ಅವರು ಅಭಾವ ಪರಿಸ್ಥಿತಿಯಲ್ಲಿ ತಮ್ಮ ಕ್ಷೇತ್ರದ ಜನಕ್ಕೆ ಸೇವೆ ಸಲ್ಲಿಸುವುದರಲ್ಲಿ ವಿಫಲರಾಗಿದ್ದಾರೆ ಎಂಬುದು ವಿದ್ಯಾರ್ಥಿಗಳ ದೂರು. ಇದರಿಂದ ಕೋಪಗೊಂಡ ವಿದ್ಯಾರ್ಥಿಗಳು ಈ ಕೃತ್ಯ ನಡೆಸಿದರೆನ್ನಲಾಗಿದೆ. ಮೆರವಣಿಗೆ ನಂತರ ವಿದ್ಯಾರ್ಥಿಗಳು ರಾಥಿಯಾ ಅವರನ್ನು ಸುರಕ್ಷಿತವಾಗಿ ಬಿಟ್ಟರೆನ್ನಲಾಗಿದೆ.

ರಾಥಿಯಾ ಅವರು ಈ ಬಗ್ಗೆ ಪೊಲೀಸರಿಗೆ ದೂರು ನೀಡಿಲ್ಲ. ಆದರೆ ಪೊಲೀಸರು ಅವರನ್ನು ಭೇಟಿ ಮಾಡಿದಾಗ ತಾವು ಜನತಾ ಪ್ರತಿನಿಧಿಯೆಂದೂ ಜನರು ಎಂಥ ಮನಃಸ್ಥಿತಿಯಲ್ಲಿದ್ದರೂ ಅವರನ್ನು ಬರಮಾಡಿಕೊಳ್ಳಲು ತಾವು ಸಿದ್ಧವೆಂದೂ ತಿಳಿಸಿದರೆನ್ನಲಾಗಿದೆ.

- **ಖದೀಮರಿಗೆ ರಾಜಮರ್ಯಾದೆ! ಕೇಂದ್ರ ಸರ್ಕಾರ ಆತಂಕ**

ನವದೆಹಲಿ, ಸೆ. 29– ಆಂತರಿಕ ಭದ್ರತಾ ಶಾಸನದ ಪ್ರಕಾರ ಈಚೆಗೆ ಬಂಧಿಸಿದ ಭಾರಿ ಕಳ್ಳಸಾಗಾಣಿಕೆದಾರರಲ್ಲಿ ಕೆಲವರಿಗೆ ಕಾರಾಗೃಹಗಳಲ್ಲಿ ಗಣ್ಯರಂತೆ ನೋಡಿಕೊಂಡು ಉಪಚರಿಸಲಾಗುತ್ತಿದೆಯೆಂದು ಕೆಲವು ರಾಜ್ಯಗಳಿಂದ ಬಂದಿರುವ ವರದಿಗಳಿಂದ ಕೇಂದ್ರ ಸರ್ಕಾರ ತೀವ್ರವಾಗಿ ಕಳವಳಗೊಂಡಿದೆ.

ಅವರಿಗೆ ಕಾನೂನಿನಲ್ಲಿರುವುದಕ್ಕಿಂತ ಹೆಚ್ಚಿನ ಸೌಲಭ್ಯಗಳೇನನ್ನೂ ಒದಗಿಸಕೂಡದೆಂದು ಕೇಂದ್ರವು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆಯೆಂದು ತಿಳಿದುಬಂದಿದೆ.

ಕೇರಳದಿಂದ ಅತ್ಯಂತ ಕಳವಳಕರ ವರದಿ ಬಂದಿದೆ ಎನ್ನಲಾಗಿದೆ. ಭಾರಿ ಕಳ್ಳಸಾಗಾಣಿಕೆದಾರನೆಂದು ಅಧಿಕೃತ ವಲಯಗಳು ವರ್ಣಿಸಿರುವ ಕೆ. ಎಸ್. ಅಬ್ದುಲ್ಲಾಗೆ ಕಳೆದ ವಾರ ಆತನ ಬಂಧನವಾದ ನಂತರ ಕಾಸರಗೋಡು ಪೊಲೀಸ್ ಠಾಣೆಯಲ್ಲಿ ರಾಜಮರ್ಯಾದೆ ಕೊಡಲಾಯಿತೆನ್ನಲಾಗಿದೆ.

ಜಮ್ಮು ಮತ್ತು ಕಾಶ್ಮೀರ: ಪ್ರಾದೇಶಿಕ ಪಕ್ಷಗಳ ಎದುರು ಅಸ್ತಿತ್ವದ ಪ್ರಶ್ನೆ

ಕಣಿವೆ ನಾಡಲ್ಲಿ ಯುವ ಹವಾ



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯ ಮೊದಲ ಎರಡು ಹಂತಗಳ ಮತದಾನ ಪೂರ್ಣಗೊಂಡಿದ್ದು, ಮೂರನೇ ಹಾಗೂ ಕೊನೆಯ ಹಂತದ ಮತದಾನ ಅಕ್ಟೋಬರ್ 1ರಂದು ನಡೆಯಲಿದೆ. 2014ರ ಬಳಿಕ ಇಲ್ಲಿ ನಡೆಯುತ್ತಿರುವ ಮೊದಲ ವಿಧಾನಸಭಾ ಚುನಾವಣೆ ಇದಾಗಿದೆ. ಅಂದರೆ, ಜಮ್ಮು ಮತ್ತು ಕಾಶ್ಮೀರದ ಮತದಾರರು ಒಂದು ದಶಕದ ಬಿಡುವಿನ ಬಳಿಕ ಹೊಸ ಸರ್ಕಾರವೊಂದನ್ನು ಆಯ್ಕೆ ಮಾಡಲು ತಮ್ಮ ಹಕ್ಕು ಚಲಾಯಿಸುತ್ತಿದ್ದಾರೆ.

ಈ ಹತ್ತು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರದ ರಾಜಕೀಯದ ಸ್ವರೂಪದಲ್ಲಿ ಮಹತ್ವದ ಬದಲಾವಣೆಗಳು ಘಟಿಸಿವೆ. ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಲಾಗಿದೆ. 2019ರಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಈ ಪ್ರಮುಖ ನಿರ್ಧಾರ ತೆಗೆದುಕೊಂಡಿತು. ಇದಲ್ಲದೆ, ರಾಜ್ಯವನ್ನು ಲಡಾಖ್ ಹಾಗೂ ಜಮ್ಮು ಮತ್ತು ಕಾಶ್ಮೀರ ಎಂಬ ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ಮಾಡಲಾಗಿದೆ.

ಭವಿಷ್ಯದಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡಲಾಗುವುದು ಎಂಬ ವಾಗ್ದಾನವನ್ನು ಬಿಜೆಪಿ ನೀಡಿದೆ. ವಿಶೇಷ ಸ್ಥಾನಮಾನ ಮರುಸ್ಥಾಪನೆ ಆಗಬೇಕೆಂಬುದು ಕೆಲವು ಪ್ರಾದೇಶಿಕ ಪಕ್ಷಗಳ ಬಯಕೆಯಾಗಿದೆ. ವಿಶೇಷ ಸ್ಥಾನಮಾನ ರದ್ದುಗೊಳಿಸಿರುವುದು ಸರಿಯಾದ ತೀರ್ಮಾನ ಹೌದು, ಆದರೆ ಅದಕ್ಕೆ ಅನುಸರಿಸಿದ ಕ್ರಮ ಪಾರದರ್ಶಕವಾಗಿರಲಿಲ್ಲ ಎಂಬುದು ಕಾಂಗ್ರೆಸ್ ಪಕ್ಷದ ನಿಲುವು.

ಲೋಕಸಭಾ ಚುನಾವಣೆ ನಡೆದ ಕೆಲವು ತಿಂಗಳ ಬಳಿಕ ಇಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ಜಮ್ಮು ವಲಯದ ಎರಡು ಸ್ಥಾನಗಳಲ್ಲಿ ಸ್ಪರ್ಧಿಸಿದ್ದ ಬಿಜೆಪಿ, ಎರಡನ್ನೂ ಗೆದ್ದಿದೆ. ಕಾಶ್ಮೀರ ವಲಯದ ಮೂರು ಸ್ಥಾನಗಳಲ್ಲಿ ಎರಡನ್ನು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಜಯಿಸಿದೆ. ಒಂದು ಸ್ಥಾನದಲ್ಲಿ ಪಕ್ಷೇತರ ಅಭ್ಯರ್ಥಿಗೆ ಗೆಲುವು ದಕ್ಕಿದೆ. ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿಗೆ (ಪಿಡಿಪಿ) ಖಾತೆ ತೆರೆಯಲು ಆಗಿಲ್ಲ.


ಎನ್‌ಸಿ ಮತ್ತು ಪಿಡಿಪಿಯ ಪ್ರಮುಖ ನಾಯಕರಾದ ಒಮರ್ ಅಬ್ದುಲ್ಲಾ ಹಾಗೂ ಮೆಹಬೂಬ ಮುಫ್ತಿ ಅವರು ಲೋಕಸಭಾ ಚುನಾವಣೆಯಲ್ಲಿ ಕಹಿ ಉಂಡಿದ್ದಾರೆ. ಸ್ವತಂತ್ರ ಅಭ್ಯರ್ಥಿ ಅಬ್ದುಲ್ ರಶೀದ್ ಶೇಖ್ (ಎಂಜಿನಿಯರ್ ರಶೀದ್) ಅವರು ಒಮರ್ ಅವರನ್ನು ಎರಡು ಲಕ್ಷಕ್ಕೂ ಅಧಿಕ ಮತಗಳಿಂದ ಪರಾಭವಗೊಳಿಸಿದ್ದಾರೆ. ರಶೀದ್ ಅವರು ಜೈಲಿನಲ್ಲಿ ಇದ್ದುಕೊಂಡೇ ಚುನಾವಣೆ ಎದುರಿಸಿದ್ದರು. ಮೆಹಬೂಬ ಅವರನ್ನು ನ್ಯಾಷನಲ್ ಕಾನ್ಫರೆನ್ಸ್ ಅಭ್ಯರ್ಥಿಯು 2.80 ಲಕ್ಷಕ್ಕೂ ಅಧಿಕ ಮತಗಳಿಂದ ಸೋಲಿಸಿದ್ದಾರೆ.

2024ರ ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಗಣನೆಗೆ ತೆಗೆದುಕೊಂಡರೆ, ಜಮ್ಮು ಮತ್ತು ಕಾಶ್ಮೀರದ 90 ವಿಧಾನಸಭಾ ಕ್ಷೇತ್ರಗಳಲ್ಲಿ, ನ್ಯಾಷನಲ್ ಕಾನ್ಫರೆನ್ಸ್ 36 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿದೆ. ಅದರ ಮಿತ್ರ ಪಕ್ಷ ಕಾಂಗ್ರೆಸ್ ಏಳು ಸ್ಥಾನಗಳಲ್ಲಿ ಮೇಲುಗೈ ಪಡೆದಿದೆ. ಇವೆರಡು ಪಕ್ಷಗಳೂ ಜತೆಯಾಗಿ 43 ಸ್ಥಾನಗಳಲ್ಲಿ ಮುನ್ನಡೆ ಗಳಿಸಿದ್ದು, ಒಟ್ಟಾರೆ ಬಲ ಸರಳ ಬಹುಮತದ ಸನಿಹ ಬರುತ್ತದೆ. ಬಿಜೆಪಿ 29 ಹಾಗೂ ಪಿಡಿಪಿ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಗಳಿಸಿವೆ. ಇತರ 13 ಕ್ಷೇತ್ರಗಳಲ್ಲಿ ಪಕ್ಷೇತರ ಅಭ್ಯರ್ಥಿಗಳು ಹಾಗೂ ಇತರರು ಮುನ್ನಡೆ ಹೊಂದಿದ್ದಾರೆ. 2014ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಬಿಜೆಪಿಯು ತನ್ನ ಶಕ್ತಿಯನ್ನು ಹೆಚ್ಚಿಸಿಕೊಂಡಿವೆ. ಆದರೆ ಕಾಂಗ್ರೆಸ್ ಮತ್ತು ಪಿಡಿಪಿಯ ಬಲ ತೀವ್ರ ಕುಸಿತ ಕಂಡಿದೆ.

ಈಗ ನಡೆಯುತ್ತಿರುವ ವಿಧಾನಸಭಾ ಚುನಾವಣೆಯು ಅನೇಕ ಕಾರಣಗಳಿಂದಾಗಿ ದೇಶದೊಳಗೆ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರಿ ಕುತೂಹಲ ಕೆರಳಿಸಿದೆ. ಚುನಾವಣೆಯು ದಶಕದ ಬಳಿಕ ನಡೆಯುತ್ತಿರುವುದರಿಂದ, ಒಂದು ಸಂಪೂರ್ಣ ಹೊಸ ತಲೆಮಾರಿನ ಮಂದಿ ಮತ ಚಲಾಯಿಸಲು ಮೊದಲ ಬಾರಿಗೆ ಅರ್ಹತೆ ಪಡೆದಿದ್ದಾರೆ. 18ರಿಂದ 28 ವರ್ಷದೊಳಗಿನವರು ವಿಧಾನಸಭಾ ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ ಮತ ಚಲಾಯಿಸುತ್ತಿದ್ದಾರೆ.

370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಗೊಂಡ ನಂತರ ಹಾಗೂ ಜಮ್ಮು ಮತ್ತು ಕಾಶ್ಮೀರವು ಎರಡು ಕೇಂದ್ರಾಡಳಿತ ಪ್ರದೇಶಗಳಾದ ಬಳಿಕ ನಡೆಯುತ್ತಿರುವ ಮೊದಲ ಚುನಾವಣೆ ಸಹ ಇದಾಗಿದೆ. ಈ ಮಹತ್ತರ ಬದಲಾವಣೆಗಳು ಹಾಗೂ ಕೇಂದ್ರಾಡಳಿತ ಪ್ರದೇಶವಾದ ಬಳಿಕ ಜಮ್ಮು ಮತ್ತು ಕಾಶ್ಮೀರದಲ್ಲಿ ಆಗಿರುವ ಬೆಳವಣಿಗೆಗಳು ಜನರು ನೀಡುವ ತೀರ್ಪಿನಲ್ಲಿ ಪ್ರತಿಫಲಿಸಬಹುದು. ಜಮ್ಮು ಮತ್ತು ಕಾಶ್ಮೀರದಲ್ಲಿ ಈಗ ನಡೆಯುತ್ತಿರುವ ಚುನಾವಣೆಯು ಮೂರು ಅಂಶಗಳಿಂದಾಗಿ ಪ್ರಾಮುಖ್ಯ ಪಡೆದುಕೊಂಡಿದೆ.

ಮೊದಲನೆಯದು, ಮತದಾನದ ಪ್ರಮಾಣ. ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಜನರ ಪ್ರತಿಕ್ರಿಯೆ ಹೇಗಿದೆ ಎಂಬುದನ್ನು ತಿಳಿದುಕೊಳ್ಳಲು ಈ ಚುನಾವಣೆಯನ್ನು ಒಂದು ಮಾಪಕವಾಗಿ ಹಲವರು ನೋಡುತ್ತಾರೆ. ವಿಧಾನಸಭಾ ಚುನಾವಣೆಯಲ್ಲಿ ಒಂದು ದಶಕದ ಬಿಡುವಿನ ಬಳಿಕ ಮತದಾನದ ಹಕ್ಕು ಚಲಾಯಿಸುವುದು ಖಂಡಿತವಾಗಿಯೂ ಆಸಕ್ತಿಯನ್ನು ಹುಟ್ಟುಹಾಕುತ್ತದೆ. ಈ ಉತ್ಸಾಹವು ಮೊದಲ ಹಂತದ ಮತದಾನದಲ್ಲಿ ಕಂಡುಬಂದಿದ್ದು, ಶೇ 61ರಷ್ಟು ಮತದಾನವಾಗಿದೆ. ಚುನಾವಣಾ ಆಯೋಗ ನೀಡಿದ ಮಾಹಿತಿ ಪ್ರಕಾರ, ಎರಡನೇ ಹಂತದಲ್ಲಿ ಶೇ 57ರಷ್ಟು ಮತದಾನ ಆಗಿದೆ.



2014ರ ವಿಧಾನಸಭಾ ಚುನಾವಣೆಯಲ್ಲಿ ಬಹಿಷ್ಕಾರದ ಕರೆಯ ನಡುವೆಯೂ ಶೇ 65ರಷ್ಟು ಮತದಾನ ಆಗಿತ್ತು. ಈ ಬಾರಿಯ ಚುನಾವಣೆಯ ಮೊದಲ ಎರಡು ಹಂತಗಳ ಮತದಾನವನ್ನು ಗಮನಿಸಿದಾಗ, 2014ರಲ್ಲಿ ದಾಖಲಾಗಿದ್ದ ಪ್ರಮಾಣಕ್ಕಿಂತ ಸ್ವಲ್ಪ ಕಡಿಮೆ ದಾಖಲಾಗಿರುವುದನ್ನು ಕಾಣಬಹುದು. ಆದರೂ, ದಶಕದ ಬಳಿಕ ನಡೆಯುತ್ತಿರುವ ಚುನಾವಣೆಯಲ್ಲಿ ಇಲ್ಲಿನ ಮತದಾರರು ತೋರಿದ ಉತ್ಸಾಹವನ್ನು ಕಡೆಗಣಿಸುವಂತಿಲ್ಲ. ಮೊದಲ ಎರಡು ಹಂತಗಳ ಮತದಾನ ಶಾಂತಿಯುತವಾಗಿ ನಡೆದಿದೆ ಎಂಬುದು ಕೂಡ ಗಮನಿಸಬೇಕಾದ ಪ್ರಮುಖ ಅಂಶ.

ಎರಡನೆಯದಾಗಿ, ಜನರು ಈ ಬಾರಿ ಯಾವೆಲ್ಲಾ ಅಂಶಗಳನ್ನು ಆಧರಿಸಿ ಮತ ಚಲಾಯಿಸಿದ್ದಾರೆ ಎಂಬುದು ಮತ ಎಣಿಕೆಯ ದಿನವಾದ ಅಕ್ಟೋಬರ್ 8ರಂದು ತಿಳಿಯಲಿದೆ. ಈ ಬಾರಿ ಮತದಾರರಿಗೆ, ಅದರಲ್ಲೂ ವಿಶೇಷವಾಗಿ ಯುವಪೀಳಿಗೆಗೆ ಅಭಿವೃದ್ಧಿ, ಉದ್ಯೋಗ ಅವಕಾಶಗಳು, ಅಗತ್ಯ ವಸ್ತುಗಳ ಬೆಲೆಯೇರಿಕೆ ಮತ್ತು ಶಾಂತಿ-ಸುವ್ಯವಸ್ಥೆಯ ಸ್ಥಿತಿಗತಿಯಂತಹ ವಿಚಾರಗಳು ಮತದಾನದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶಗಳಾಗಿವೆ ಎಂಬುದನ್ನು ಮಾಧ್ಯಮ ವರದಿಗಳು ಸ್ಪಷ್ಟವಾಗಿ ಸೂಚಿಸುತ್ತವೆ.

ಎರಡು ಪ್ರಾದೇಶಿಕ ಪಕ್ಷಗಳಾಗಿರುವ ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಪಿಡಿಪಿಯು ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಮತ್ತೆ ಪಡೆಯುವುದು ಹಾಗೂ 370ನೇ ವಿಧಿಯಡಿ ಪುನಃ ವಿಶೇಷ ಸ್ಥಾನಮಾನ ಕಲ್ಪಿಸುವುದಕ್ಕೆ ಸಂಬಂಧಿಸಿದ ಆಗ್ರಹದ ಮೇಲೆ ತಮ್ಮ ಗಮನ ಕೇಂದ್ರೀಕರಿಸಿವೆ. ಜಮ್ಮು ಮತ್ತು ಕಾಶ್ಮೀರದಾದ್ಯಂತ ವಿವಿಧ ರಾಜಕೀಯ ಪಕ್ಷಗಳು ಎಷ್ಟರಮಟ್ಟಿಗೆ ಜನಬೆಂಬಲ ಗಳಿಸಲಿವೆ ಎಂಬುದು ಚುನಾವಣಾ ಫಲಿತಾಂಶದಲ್ಲಿ ಪ್ರತಿಫಲಿಸಲಿದೆ. ಜಮ್ಮು ವಲಯ ಮತ್ತು ಕಾಶ್ಮೀರ ಕಣಿವೆ ಪ್ರದೇಶದಲ್ಲಿ ಭಿನ್ನ ರೀತಿಯ ರಾಜಕೀಯ ದೃಷ್ಟಿಕೋನವನ್ನು ನೋಡಬಹುದು. ಇತ್ತೀಚಿನ ದಿನಗಳಲ್ಲಿ ಜಮ್ಮುವಿನಲ್ಲಿ ಬಿಜೆಪಿಯು ಪ್ರಾಬಲ್ಯ ಸಾಧಿಸಿದ್ದರೆ, ಕಾಶ್ಮೀರ ಕಣಿವೆಯಲ್ಲಿ ಕಾಂಗ್ರೆಸ್, ಎನ್‌ಸಿ ಹಾಗೂ ಪಿಡಿಪಿ ಪ್ರಮುಖ ಪಕ್ಷಗಳಾಗಿವೆ.

ಮೂರನೆಯದಾಗಿ, ಹಲವು ಸಣ್ಣ ಪಕ್ಷಗಳು ಮತ್ತು ಪಕ್ಷೇತರ ಅಭ್ಯರ್ಥಿಗಳು ಪ್ರಮುಖ ಪಕ್ಷಗಳಿಗೆ ಪೈಪೋಟಿ ನೀಡುತ್ತಿರುವುದನ್ನು ಈ ಚುನಾವಣೆಯಲ್ಲಿ ಕಾಣಬಹುದು. ಅವರು ತೋರುವ ಸಾಧನೆಯನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ರಾಷ್ಟ್ರೀಯ ಪಕ್ಷಗಳು ಮತ್ತು ಪ್ರಮುಖ ಪ್ರಾದೇಶಿಕ ಪಕ್ಷಗಳು ಅಧಿಕಾರವನ್ನು ತಮ್ಮಲ್ಲೇ ಹಿಡಿದಿಟ್ಟುಕೊಳ್ಳುವ ಸಂಪ್ರದಾಯ ಮುಂದುವರಿಯಲಿದೆಯೇ ಅಥವಾ ಹೊಸಬರು ಚುನಾವಣೆಯ ಮೇಲೆ ಪರಿಣಾಮ ಬೀರುವರೇ? ಜಮ್ಮು ಮತ್ತು ಕಾಶ್ಮೀರದ ರಾಜಕೀಯದಲ್ಲಿನ ಚೈತನ್ಯಶೀಲತೆಯನ್ನು ಸೂಚಿಸುವ ಅಂಶವೂ ಇದೇ ಆಗಿದೆ.

ಚುರುಮುರಿ



ಬೆಕ್ಕಣ್ಣನ ಬೇಸರ

• ಸುಮಂಗಲಾ

ಬೆಕ್ಕಣ್ಣ ತನ್ನ ಹತ್ತಿಪ್ಪತ್ತು ಚುರುಮುರಿ ಕಟಿಂಗ್ಸ್ ಹರಡಿಕೊಂಡು ಘನಗಂಭೀರವಾಗಿ ನೋಡುತ್ತಿತ್ತು.

'ಏನಲೇ... ನಿನ್ನ ಚುರುಮುರಿ ಮ್ಯಾಲೆ ನೀನೇ ಪಿಎಚ್.ಡಿ ಮಾಡತಿಯೇನು?' ಎಂದು ಕುಟುಕಿದೆ.

'ಈ ಸಲದ ದಸರಾ ಕವಿಗೋಷ್ಠಿವಳಗೆ ಹಾಸ್ಯ-ಕಾವ್ಯ ಜುಗಲಬಂದಿ ಐತಂತೆ. ಹಾಸ್ಯ ವಿಭಾಗಕ್ಕೆ ದುಬ್ಬೀರಣ್ಣ, ತುರೇಮಣೆ ಅಂಕಲ್ಲು, ಮತ್ತೆ ನನ್ನ ಹೆಸ್ರೂ ಸೇರಿಸ್ರಿ ಅಂತ ಕೇಳೀವಿ. ಅಲ್ಲಿ ಓದಕ್ಕೆ ಒಂದೆರಡು ಛಲೋ ಚುರುಮುರಿ ಆರಿಸಾಕೆ ಹತ್ತೇನಿ' ಬೆಕ್ಕಣ್ಣ ಸಂಭ್ರಮದಿಂದ ವಿವರಿಸಿತು.

'ಮಂಗ್ಯಾನಂಥವ್ನೇ! ಅದಕ್ಕೆ ಹಾಸ್ಯ ಭಾಷಣಕಾರರಿನ್ನ ಕರೀತಾರಂತ. ರಗಡ್ ಮಂದಿ ಈಗಾಗ್ಲೇ ಅದಕ್ಕೆ ಕ್ಯೂ ನಿಂತಾರಂತ. ಈ ಚುರುಮುರಿಗಳು ಹಾಸ್ಯ ಅಲ್ಲಲೇ, ವಿಡಂಬನೆ' ಎಂದು ತಿದ್ದಿದೆ.

'ಹಂಗಾರೆ ನಾವು ಯಾವ ಪಟ್ಟವಳಗೂ ಇಲ್ಲ, ಯಾವ ಸಮ್ಮೇಳನಕ್ಕೂ ಇಲ್ಲ' ಬೆಕ್ಕಣ್ಣ ಮೂತಿಯುಬ್ಬಿಸಿತು.

'ಅಷ್ಟ್ಯಾಕೆ ಬ್ಯಾಸರಕಿ ಮಾಡಿಕೊಳ್ತಿ... ಭಾಳ ಮಂದಿ ಪೇಪರಿನಾಗೆ ನಿಮ್ಮನ್ನು ಓದ್ತಾರೇಳು' ಎಂದು ಸಮಾಧಾನಿಸಿದೆ.

'ಈ ಸುದ್ದಿ ಕೇಳಿಲ್ಲಿ... ಹೋದ ವರ್ಷ ಟರ್ಕಿವಳಗೆ ಭೂಕಂಪ ಆದಾಗ, 46 ವರ್ಷದ ಹಳೇ ಬಿಲ್ಡಿಂಗು ಬಿದ್ದು 96 ಮಂದಿ ಸತ್ತಿದ್ದರಂತ. ಈಗ ಆ ಬಿಲ್ಡರ್‌ನ ಹಿಡಿದು, ಅಲ್ಲಿನ ನ್ಯಾಯಾಲಯದಿಂದ ಬರೋಬ್ಬರಿ 865 ವರ್ಷ ಜೈಲುಶಿಕ್ಷೆ ವಿಧಿಸ್ಯಾರಂತೆ' ಎಂದೆ.

'ಹಂಗಾರೆ ಅಂವ ಜೈಲುಶಿಕ್ಷೆ ಮುಗಿಸಕ್ಕೆ ಎಷ್ಟು ಸಲ ಟರ್ಕಿವಳಗೆ ಪುನರ್ಜನ್ಮ ಎತ್ತಿಬರಬಕು! ಪ್ರತಿಸಲ ಪುನರ್ಜನ್ಮ ಎತ್ತಿದಾಗಲೂ ದೇವರು ಅವನನ್ನ ಅದೇ ಬಿಲ್ಡರ್ ಮಾಡಿ ಹುಟ್ಟಿಸಬಕು!'

'ಬಿಹಾರದಾಗೆ ಜುಲೈ ತಿಂಗಳಲ್ಲಿ 17 ದಿನದಾಗೆ 12 ಸೇತುವೆ ಕುಸೀತು. ಎರಡು ವರ್ಷದ ಹಿಂದೆ ಗುಜರಾತಿನ ಮೊರ್ಬಿ ಸೇತುವೆ ಕುಸೀತು. ಈ ಸೇತುವೆ ಬಿಲ್ಡರುಗಳನ್ನು ಹಿಡಿದು ಕೊನೇಪಕ್ಷ ಐವತ್ತು ವರ್ಷ ಜೈಲುಶಿಕ್ಷೆ ವಿಧಿಸಬೇಕು' ಎಂದೆ.

'ಜೈಲುಶಿಕ್ಷೆ ಎಲ್ಲಿ ಕೊಡತಾರೆ? ಇನ್ನಾ ಐವತ್ತು ಹೊಸಾ ಸೇತುವೆ ಕಾಂಟ್ರಾಕ್ಟ್ ಉಡುಗೊರೆ ಅವ್ರಿಗೇ ಕೊಡತಾರೆ' ಬೆಕ್ಕಣ್ಣ ಸಿಟ್ಟಿನಿಂದ ಗುರುಗುಟ್ಟಿತು.

ಸಂಗತ

ನದಿ ಒಬ್ಬರದಲ್ಲ, ಎಲ್ಲರದು

ಪಂಚಭೂತಗಳ ಸದ್ಬಳಕೆಯಿಂದ ಮುಂದಿನ ಪೀಳಿಗೆಯೂ ಅವನ್ನು ಅನುಭವಿಸಲು ಯೋಗ್ಯವಾಗಿರುವಂತೆ ಉಳಿಸಿ ಹೋಗುವ ಮನಃಸ್ಥಿತಿ ನಮ್ಮಲ್ಲಿ ಬರಬೇಕು

• ಗೌರಿ ಚಂದ್ರಕೇಸರಿ

ತುಂಗಾ ನದಿಯ ಸೇತುವೆಯ ಮೇಲೆ ದಿನನಿತ್ಯ ವಾಯುವಿಹಾರ ಮಾಡುವಾಗ, ಕೆಳಗೆ ಬಳುಕುತ್ತ ರಭಸವಾಗಿ ಹರಿಯುವ ನದಿಯ ಸೊಬಗನ್ನು ಕಣ್ತುಂಬಿಕೊಳ್ಳುವುದೇ ಒಂದು ಆನಂದ. ಈ ಮಳೆಗಾಲದಲ್ಲಂತೂ ತುಂಗೆಯ ಅಬ್ಬರ ಮನಮೋಹಕ.


ನದಿಗಳು ಯಾವ ಪ್ರತಿಫಲವನ್ನೂ ಬಯಸದೆ ಎಷ್ಟೊಂದು ಜೀವರಾಶಿಗಳಿಗೆ, ಹೊಲ-ಗದ್ದೆಗಳಿಗೆ ನೀರುಣಿಸುತ್ತಾ ಸಾಗುತ್ತವೆ. ಆದರೆ ನಾವು ನದಿಗಳ ಮಡಿಲನ್ನು ಎಗ್ಗಿಲ್ಲದೇ ಮಲಿನಗೊಳಿಸುತ್ತಿದ್ದೇವೆ. ಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ತಂದು ನದಿಗಳ ಮಡಿಲಿಗೆ ಹಾಕುವುದನ್ನು ಕಂಡಾಗ ವಿಷಾದವಾಗುತ್ತದೆ. ಅದನ್ನು ನದಿಗೆ ಹಾಕುವವರನ್ನು ಪ್ರಶ್ನಿಸಿದರೆ, 'ನದಿಯೇನು ನಿಮ್ಮದಾ?' ಎಂಬ ಸಿದ್ಧ ಪ್ರಶ್ನೆಯೊಂದು ಅವರಿಂದ ತೂರಿ ಬರುತ್ತದೆ. 'ಹೌದು, ನದಿ ಬರೀ ನನ್ನದಲ್ಲ, ನಮ್ಮೆಲ್ಲರದ್ದು. ಅದನ್ನು ಮಲಿನಗೊಳಿಸಬೇಡಿ' ಎಂದು ಹೇಳಲು ಅವಕಾಶವನ್ನೂ ಕೊಡದೆ ತ್ಯಾಜ್ಯವನ್ನು ಎಸೆದು ತಮ್ಮ ವಾಹನವನ್ನು ಚಲಾಯಿಸಿಕೊಂಡು ಹೊರಟುಬಿಡುತ್ತಾರೆ.

ನದಿಗಳನ್ನು ದೇವರೆಂದು ಪೂಜಿಸುವವರೂ ನಾವೆ, ಪೂಜನೀಯವಾದ ನದಿಗಳಿಗೆ ಕಸವನ್ನು ಸುರಿಯುತ್ತಿರುವವರೂ ನಾವೆ. ಇಂತಹ ಮಾಲಿನ್ಯವನ್ನು ತಡೆಯಲೆಂದೇ ಶಿವಮೊಗ್ಗೆಯ ತುಂಗಾ ಸೇತುವೆಗೆ ಕಬ್ಬಿಣದ ಜಾಲರಿಗಳನ್ನು ಹಾಕಲಾಗಿದೆ. ಆದರೆ ತಿಳಿಗೇಡಿ ಜನ, ಹತ್ತು-ಹನ್ನೆರಡು ಅಡಿ ಎತ್ತರವಿರುವ ಈ ಜಾಲರಿಯ ಮೇಲಿನಿಂದ ಚೆಂಡನ್ನು ಎತ್ತಿ ಎಸೆಯುವಂತೆ ನದಿಗೆ ತ್ಯಾಜ್ಯವನ್ನು ಎಸೆದು, ತಮ್ಮ ಸಾಹಸ ಕಾರ್ಯಕ್ಕೆ ಬೀಗುತ್ತ ಹೊರಟು ಹೋಗುತ್ತಾರೆ. ನದಿಗೆ ಕಸ ಹಾಕಿದಲ್ಲಿ ದಂಡ ವಿಧಿಸಲಾಗುವುದು ಎಂಬ ಫಲಕ ಸಹ ಯಾವ ಪರಿಣಾಮವನ್ನೂ ಬೀರಿಲ್ಲ. ಜಿಲ್ಲಾ ಆಡಳಿತ ಹಾಗೂ ಕೆಲ ಪರಿಸರಪ್ರಿಯ ಸಂಘ-ಸಂಸ್ಥೆಗಳು ಈ ಕುರಿತು ಅದೆಷ್ಟೇ ಅರಿವು ಮೂಡಿಸಲು ಯತ್ನಿಸಿದರೂ ದಪ್ಪ ಚರ್ಮದ ಜನರಿಗೆ ಇವುಗಳ ಅಳಲು ಕೇಳಿಸುವುದೇ ಇಲ್ಲ.

ನಾಲ್ಕೈದು ದಶಕಗಳ ಹಿಂದೆ ಕೆರೆ, ಹೊಳೆ, ನದಿಗಳ ನೀರು ಬೊಗಸೆಯಲ್ಲಿ ತುಂಬಿ ಕುಡಿಯುವಂತೆ ಇರುತ್ತಿತ್ತು. ಆದರೆ ಇಂದು ಒಂದೊಂದು ಬೊಗಸೆ ನೀರಿನೊಂದಿಗೂ ಪ್ಲಾಸ್ಟಿಕ್ ತ್ಯಾಜ್ಯ ಸಿಗುತ್ತದೆ. ಝರಿ, ಜಲಪಾತಗಳನ್ನು ಕಣ್ತುಂಬಿಕೊಳ್ಳಲೆಂದು ಹೋದರೆ ಅದರ ಆಸುಪಾಸಿನಲ್ಲಿ ಪ್ಲಾಸ್ಟಿಕ್ ಹಾಗೂ ಕಸದ ರಾಶಿ ಗೋಚರಿಸುತ್ತದೆ. ಅದರ ಜೊತೆಗೆ ಕುಡಿದು ಬಿಸಾಡಿದ ನೀರಿನ ಹಾಗೂ ಮದ್ಯದ ಬಾಟಲಿಗಳು ಕಣ್ಣಿಗೆ ರಾಚುತ್ತವೆ. ಮಳೆಗಾಲದಲ್ಲಿ ರಭಸವಾಗಿ ಹರಿಯುವ ನೀರು ಈ ಎಲ್ಲ ಕಸವನ್ನೂ ಆಪೋಶನ ತೆಗೆದುಕೊಳ್ಳುತ್ತ ನದಿ, ಸಾಗರಗಳಿಗೆ ಕೊಂಡೊಯ್ಯುತ್ತದೆ. ಹೀಗೆ ಮಲಿನಗೊಳ್ಳುವ ನೀರು ಕುಡಿಯುವುದಿರಲಿ, ನಿತ್ಯ ಬಳಕೆಗೆ ಕೂಡ ಯೋಗ್ಯವಾಗಿ ಇರುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ಕೃಷಿಯಲ್ಲಿ ಹಲವಾರು ಕ್ರಾಂತಿಗಳಾಗಿವೆ. ಕಡಿಮೆ ಅವಧಿಯಲ್ಲಿ ಹೆಚ್ಚಿನ ಇಳುವರಿ ದೊರೆಯಲೆಂದು ಆರೋಗ್ಯಕ್ಕೆ ಮಾರಕವಾದ ಕೀಟನಾಶಕಗಳು ಹಾಗೂ ರಸಗೊಬ್ಬರಗಳ ಬಳಕೆಯಾಗುತ್ತಿದೆ. ಮಳೆಗಾಲದಲ್ಲಿ ತೋಟ, ಹೊಲ-ಗದ್ದೆಗೆ ನುಗ್ಗುವ ನೀರು ಹರಿದುಬಂದು ನದಿಗಳನ್ನು ಸೇರಿದಾಗ, ಆ ನೀರು ವಿಷಯುಕ್ತವಾಗುತ್ತದೆ. ಇಂಥ ನೀರನ್ನು ಪ್ರಾಣಿ-ಪಕ್ಷಿ, ಜಾನುವಾರುಗಳಷ್ಟೇ ಅಲ್ಲದೆ ನಾವು ಕೂಡ ಸೇವಿಸುತ್ತೇವೆ. ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗುವುದು ಸಹಜ.

ನಾವು ದಿನನಿತ್ಯ ಬಳಸುವ ನೀರು ಹೀಗೆ ಮಲಿನವಾಗುತ್ತಿದೆ. ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿ ಇಲ್ಲದ ಕಡೆ ಕೊಳಚೆ ನೀರು ನೇರವಾಗಿ ನದಿಯ ಒಡಲನ್ನು ಸೇರುತ್ತದೆ. ಕೊಳಚೆ ನೀರನ್ನು ಶುದ್ಧೀಕರಿಸಿ ನದಿಗಳಿಗೆ ಹರಿಸಬೇಕೆಂಬ ನಿಯಮವಿದ್ದರೂ ಆ ನಿಯಮ ಕಾಗದದಲ್ಲಷ್ಟೇ ಉಳಿದುಹೋಗಿದೆ. ನದಿ ಪಾತ್ರದಗುಂಟ ತಲೆ ಎತ್ತಿರುವ ಹೋಟೆಲ್, ರೆಸಾರ್ಟ್‌ಗಳಿಂದಲೂ ಎಗ್ಗಿಲ್ಲದೆ ನದಿಗಳಿಗೆ ಕೊಳಚೆ ನೀರು ಹರಿದು ಬರುತ್ತದೆ. ಕಾರ್ಖಾನೆಗಳಿಂದ ಹೊರಹೊಮ್ಮುವ ರಾಸಾಯನಿಕಯುಕ್ತ ನೀರು, ಮಾಂಸಾಹಾರಕ್ಕೆಂದು ವಧಿಸಿದ ಪ್ರಾಣಿಗಳ ತ್ಯಾಜ್ಯದಂತಹವು ನದಿಗಳ ಒಡಲನ್ನು ಹೊಕ್ಕು ಅಲ್ಲಿನ ನೀರು ಹಾಲಾಹಲದಂತೆ ಆಗುತ್ತಿದೆ. ಪುಣ್ಯಕ್ಷೇತ್ರಗಳಿಗೆ ಹೋದಾಗ ಅಲ್ಲಿರುವ ನದಿಗಳಲ್ಲಿ ಮಿಂದು, ಉಟ್ಟ ಬಟ್ಟೆ, ಚೌಲಕರ್ಮ ಮಾಡಿದ ಕೂದಲು, ದೇವರ ಪೂಜೆಗೆ ಬಳಸಿದ್ದ ತ್ಯಾಜ್ಯವನ್ನು ಸಹ ಜನರು ಅಲ್ಲಿಯೇ ಬಿಟ್ಟು ಬರುವುದರಿಂದಲೂ ನದಿಗಳು ತಮ್ಮ ಶುಚಿತ್ವವನ್ನು ಕಳೆದುಕೊಳ್ಳುತ್ತಿವೆ.



ಹಲವಾರು ನದಿಗಳ ನೀರು ಕುಡಿಯಲಾಗಲೀ ನಿತ್ಯ ಬಳಕೆಗಾಗಲೀ ಯೋಗ್ಯವಾಗಿಲ್ಲವೆಂದು ವರದಿಗಳು ಹೇಳುತ್ತವೆ. ಸಾಕ್ಷಾತ್ ದೇವರ ಸ್ವರೂಪ ಎಂದು ನಂಬಲಾಗಿರುವ ನೀರನ್ನು ನಾವು ಬರೀ ದಾಹ ತಣಿಸುವ ಹಾಗೂ ಶುಚಿಗೊಳಿಸುವ ಒಂದು ವಸ್ತುವೆಂಬಂತೆ ನೋಡುತ್ತಿರುವುದು ವಿಷಾದನೀಯ.

ಪರಿಸರದ ಮೇಲೆ ಅವ್ಯಾಹತವಾಗಿ ನಡೆದಿರುವ ದೌರ್ಜನ್ಯದಿಂದ ನಮ್ಮ ಮುಂದಿನ ತಲೆಮಾರು ಬೆಲೆ ತೆರಬೇಕಾಗುತ್ತದೆ. ಪ್ರಕೃತಿಯು ನಮಗೆ ನೀಡಿದ ಪಂಚಭೂತಗಳನ್ನು ಭಕ್ತಿಭಾವದಿಂದ ಬಳಸಿ ಮುಂದಿನ ಪೀಳಿಗೆಯೂ ಅನುಭವಿಸಲು ಯೋಗ್ಯವಾಗಿರುವಂತೆ ಉಳಿಸಿ ಹೋಗುವ ಮನಃಸ್ಥಿತಿ ನಮ್ಮಲ್ಲಿ ಬರಬೇಕು. ಇಲ್ಲದೇಹೋದಲ್ಲಿ ನಮ್ಮ ಮಕ್ಕಳೇ ನಮಗೆ ಶಾಪ ಹಾಕದಿರಲಾರರು.

ವಾಚಕರ ವಾಣಿ

ಅಂಕಿ: ಕನ್ನಡದಲ್ಲಿ ಹೇಳುವುದನ್ನು ಕಲಿಸಿ

ನನ್ನೂರಾದ ಕಲ್ಲುಗುಂಡಿಯಲ್ಲಿ ಮಡಿಕೇರಿಗೆ ಹೋಗುವ ಬಸ್ಸಿಗಾಗಿ ಇತ್ತೀಚೆಗೆ ಕಾಯುತ್ತಾ ನಿಂತಿದ್ದೆ. ನನ್ನ ಪಕ್ಕ ತಾಯಿಯ ಜೊತೆ ನಿಂತಿದ್ದ ಪುಟ್ಟ ಬಾಲಕನಿಗೆ 'ಎಷ್ಟನೇ ಕ್ಲಾಸ್?' ಎಂದು ಕೇಳಿದೆ. ಅವನು ಉತ್ತರಿಸದೆ, ಕೈಎತ್ತಿ ಐದು ಬೆರಳುಗಳನ್ನು ಬಿಡಿಸಿ ತೋರಿಸಿದ. ಅವನ ಕೈಯಲ್ಲಿದ್ದ ಸ್ಮಾರ್ಟ್ ವಾಚ್ ನೋಡಿದ ನಾನು, 'ಇದರಲ್ಲಿ ಗಂಟೆ ಕಾಣುವುದೇ ಇಲ್ಲವಲ್ಲ. ಈಗ ಗಂಟೆ ಎಷ್ಟಾಯಿತು?' ಎಂದೆ. ಅವನು ವಾಚನ್ನು ಒತ್ತಿ ಹಿಡಿದು ಗಂಟೆಯನ್ನು ನನಗೆ ತೋರಿಸಿದ. ಆಗ ಅವನ ತಾಯಿ ಹೇಳಿದಳು, 'ಅವನು ಐದನೇ ಕ್ಲಾಸ್. ಇಂಗ್ಲಿಷ್ ಮೀಡಿಯಂ. ಅವನಿಗೆ ಕನ್ನಡದಲ್ಲಿ ಅಂಕಿ ಹೇಳಲು ಬರುವುದಿಲ್ಲ. ಇಂಗ್ಲಿಷಿನಲ್ಲಾದರೆ ಹೇಳುತ್ತಾನೆ'.

ಇಂದು ಹಳ್ಳಿಯ ಮಕ್ಕಳಿಗೂ ಕನ್ನಡದಲ್ಲಿ ಅಂಕಿ ಹೇಳಲು ಬರುವುದಿಲ್ಲ ಎಂದು ತಿಳಿದು ನನಗೆ ಆಶ್ಚರ್ಯವಾಯಿತು, ಬೇಸರವೂ ಆಯಿತು. ಇನ್ನೇನು ಒಂದು ತಿಂಗಳಿನಲ್ಲಿ ಕನ್ನಡ ರಾಜ್ಯೋತ್ಸವ ಬರುತ್ತದೆ. ಆಗ ನಾವೆಲ್ಲರೂ ಕನ್ನಡ, ಕನ್ನಡ... ಹಾ...ಸವಿಗನ್ನಡ..' ಎಂದು ಬೊಬ್ಬಿರಿಯುತ್ತೇವೆ. ಆದರೆ ಕನ್ನಡ ಉಳಿಸಲು ಮುಂದಿನ ಪೀಳಿಗೆಗೆ ನಾವೇನು ಕೊಡುಗೆ ಕೊಡುತ್ತಿದ್ದೇವೆ? ಕನ್ನಡದಲ್ಲಿ ಅಂಕಿ ಹೇಳುವ ಮಕ್ಕಳಿಗೆ ರಾಜ್ಯೋತ್ಸವದ ದಿನ ಬಹುಮಾನ ಇಟ್ಟು ಪ್ರೋತ್ಸಾಹಿಸುವಂತೆ ಆಗಬೇಕು.

ಸಹನಾ ಕಾಂತಬೈಲು, ಬಾಲಂಬಿ, ಮಡಿಕೇರಿ

ಮಾನವೀಯತೆ ಮಾನದಂಡವಾಗಲಿ

ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 15-20 ವರ್ಷಗಳಿಂದ ಕಡಿಮೆ ವೇತನಕ್ಕೆ ಸೇವೆ ಸಲ್ಲಿಸುತ್ತಾ ಬಂದಿರುವ ಅತಿಥಿ ಉಪನ್ಯಾಸಕರಿಗೆ ಯುಜಿಸಿ ಅರ್ಹತೆ ಕಡ್ಡಾಯ ಎಂದು ಹೈಕೋರ್ಟ್ ಹೇಳಿರುವುದು ಆತಂಕಕ್ಕೆ ಕಾರಣವಾಗಿದೆ. ಇದೇ ವೃತ್ತಿಯನ್ನು ನಂಬಿ ಸುದೀರ್ಘಕಾಲ ಸೇವೆ ಸಲ್ಲಿಸಿದವರಿಗೆ ಮಾನವೀಯತೆ ಮಾನದಂಡವಾಗಬೇಕೇ ವಿನಾ ನಿಯಮಗಳ ಕಠಿಣ ಪಾಲನೆಯಲ್ಲ. ಇದರಿಂದಾಗಿ ಗೊಂದಲ ಉಂಟಾಗಿದೆ. ಈ ಕಾರಣವನ್ನೇ ಮುಂದಿಟ್ಟುಕೊಂಡು ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಯನ್ನು ಇಲಾಖೆ ಮುಂದೂಡುತ್ತಿದೆ.

ಈಗಾಗಲೇ ಕಾಲೇಜುಗಳು ಆರಂಭವಾಗಿ ಒಂದೆರಡು ತಿಂಗಳು ಕಳೆಯುತ್ತಾ ಬಂದಿದೆ. ವಿದ್ಯಾರ್ಥಿಗಳಿಗೆ ಸರಿಯಾದ ಪಾಠ ಪ್ರವಚನಗಳು ನಡೆಯುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರ ತ್ವರಿತ ನಿರ್ಧಾರ ಕೈಗೊಳ್ಳಬೇಕು.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಬಂಪರ್ ಬೆಳೆ: ಇಡಬೇಕಿದೆ ಎಚ್ಚರಿಕೆಯ ಹೆಜ್ಜೆ

ಆಹಾರಧಾನ್ಯ ಉತ್ಪಾದನೆಯ ಅಂತಿಮ ಅಂದಾಜು ಇತ್ತೀಚೆಗೆ ಪ್ರಕಟವಾಗಿದೆ. ಅದರ ಅನುಸಾರ, 2023–24ರಲ್ಲಿ ಭಾರತದ ಒಟ್ಟಾರೆ ಉತ್ಪಾದನೆ 332.22 ದಶಲಕ್ಷ ಟನ್ ತಲುಪಿದೆ. ಇದಕ್ಕೆ ಭತ್ತ ಹಾಗೂ ಗೋಧಿಯ ಬಂಪರ್ ಬೆಳೆ ಕಾರಣ. ಬೇಳೆಕಾಳು ಹಾಗೂ ಎಣ್ಣೆಬೀಜದ ಬೆಳೆಗಳಲ್ಲಿ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಕಡಿಮೆ ಆಗಿರುವುದು ಕಳವಳಕಾರಿ. ಇದಕ್ಕೆ ದಕ್ಷಿಣ ಭಾರತದ ರಾಜ್ಯಗಳು, ಮಹಾರಾಷ್ಟ್ರ ಹಾಗೂ ರಾಜಸ್ಥಾನದ ಹವಾಮಾನ ಕಾರಣ ಎನ್ನಲಾಗಿದೆ. ಕರ್ನಾಟಕ ಈ ವಿಷಯದಲ್ಲಿ ಏನು ಮಾಡಬೇಕು? ಭತ್ತದ ಬಗೆಗಿನ ಗಮನ ಮುಂದುವರಿಸುವುದರ ಜತೆಗೆ ಬೇಳೆಕಾಳು, ಎಣ್ಣೆಕಾಳು ಬೆಳೆಗಳ ಉತ್ಪಾದನೆ ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಹತ್ತಿ, ಕಬ್ಬಿನಂಥ ವಾಣಿಜ್ಯ ಬೆಳೆಗಳ ಉತ್ಪಾದನೆಯಲ್ಲಿ ಇಳಿಕೆ ಆಗದಂತೆ ಎಚ್ಚರ ವಹಿಸಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಮುಖ್ಯಮಂತ್ರಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ಸಲ್ಲ

'ಮುಡಾ ಹಗರಣದಲ್ಲಿ ತನಿಖೆಗೆ ಅನುಮತಿ ನೀಡಿದಾಗ ಕಾಂಗ್ರೆಸ್‌ನವರು ರಾಜ್ಯಪಾಲರ ಚಿತ್ರಕ್ಕೆ ಚಪ್ಪಲಿ ಹಾರ ಹಾಕಿದರು. ಈಗ ಕಾಂಗ್ರೆಸ್‌ನವರು ಸಿದ್ದರಾಮಯ್ಯ ಅವರಿಗೆ ಚಪ್ಪಲಿ ಹಾರ ಹಾಕುತ್ತಾರಾ?' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಪ್ರಶ್ನಿಸಿರುವುದನ್ನು (ಪ್ರ.ವಾ., ಸೆ. 25) ಓದಿ ನನಗೆ ತುಂಬಾ ಕೋಪ ಬಂತು. ಇದೊಂದು ಆಕ್ಷೇಪಾರ್ಹ ಹೇಳಿಕೆ. ಸಿದ್ದರಾಮಯ್ಯ ಮುಖ್ಯಮಂತ್ರಿ ಹುದ್ದೆಯಲ್ಲಿ ಇದ್ದಾರೆ ಎನ್ನುವ ಅರಿವು ಕುಮಾರಸ್ವಾಮಿ ಅವರಿಗೆ ಇದ್ದಂತಿಲ್ಲ. ವಾಕ್ ಸ್ವಾತಂತ್ರ್ಯ ಇದೆ ಎಂದು ಇಂತಹ ಪ್ರಶ್ನೆಗಳನ್ನು ಕೇಳಿದರೆ, ಅದು ಕೇಳುವವರ ಸಣ್ಣತನವನ್ನು ಎತ್ತಿ ತೋರಿಸುತ್ತದೆ.

ಮಲ್ಲನಗೌಡ ಪಾಟೀಲ, ರಾಮದುರ್ಗ

ಚಿಕ್ಕಿಯ ಗುಣಮಟ್ಟ ಪರಿಶೀಲನೆಗೆ ಒಳಪಡಲಿ

ಸರ್ಕಾರಿ ಶಾಲಾ ಮಕ್ಕಳಿಗೆ ವಾರದಲ್ಲಿ ಆರು ದಿನಗಳೂ ಮೊಟ್ಟೆಯನ್ನು ಕೊಡುವ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಉದ್ಯಮಿ ಅಜೀಮ್ ಪ್ರೇಮ್‌ಜಿ ಅವರು ಕೈಜೋಡಿಸಿರುವುದು ಖುಷಿಯ ವಿಷಯ. ಈಗಾಗಲೇ ಮೂರು ದಿನ ಮೊಟ್ಟೆ ಕೊಡುತ್ತಿದ್ದಾಗ, ಶೇ 50– 55ರಷ್ಟು ಮಕ್ಕಳು ಮಾತ್ರ ಮೊಟ್ಟೆಯನ್ನು ಶಾಲೆಯಲ್ಲಿ ತಿನ್ನುತ್ತಿದ್ದು, ಮೊಟ್ಟೆ ತಿನ್ನದವರಿಗೆ ಕಡ್ಲೆಚಿಕ್ಕಿ ಕೊಡುವ ವ್ಯವಸ್ಥೆ ಮಾಡಲಾಗಿದೆ. ಈ ದಿಸೆಯಲ್ಲಿ ಕೆಳಗಿನ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ:

ಚಿಕ್ಕಿಯ ಗುಣಮಟ್ಟ ಖಾತರಿಪಡಿಸಲಾಗಿದೆಯೇ? ಈ ಚಿಕ್ಕಿ ತಯಾರಕರು ಎಫ್‌ಎಸ್‌ಎಸ್‌ಎಐನಿಂದ ಪ್ರಮಾಣೀಕರಿಸಿಕೊಂಡಿದ್ದಾರೆಯೇ? ಮನೆಯಲ್ಲಿ ತಯಾರಿಸಿದ ಚಿಕ್ಕಿ ಆಕರ್ಷಕವಾದ ಹೊಳೆಯುವ ಬಣ್ಣವನ್ನು ಹೊಂದಿರುವುದಿಲ್ಲ. ಇಂತಹ ಬಣ್ಣ ಪಡೆಯಲು ಮತ್ತು ಗರಿಗರಿಯಾಗಿರಲು ಗ್ಲುಕೋಸ್ ಸಿರಪ್ ಬಳಸುತ್ತಾರೆ. ಇದರ ಅಡ್ಡಪರಿಣಾಮದ ಬಗ್ಗೆ ಅಧ್ಯಯನ ನಡೆದಿದೆಯೇ? ಅಷ್ಟೊಂದು ಪ್ರಮಾಣದ ಚಿಕ್ಕಿಯ ಉಪಯೋಗದಿಂದ ಶಾಲೆಯ ಕಸದ ತೊಟ್ಟಿಯು ಪ್ಲಾಸ್ಟಿಕ್‌ನಿಂದ (ಚಿಕ್ಕಿ ರ‍್ಯಾಪರ್) ತುಂಬಿ ಹೋಗುತ್ತಿದೆ. ಇದರಿಂದ ಪ್ಲಾಸ್ಟಿಕ್‌ಮುಕ್ತ ಶಾಲಾ ಪರಿಸರದ ಕಲ್ಪನೆ ಸಾಧ್ಯವೇ? ಚಿಕ್ಕಿ ತಯಾರಕರು ನಮೂದಿಸಿರುವ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು ನೈಜವೇ?

ರಾಜ್ಯದಲ್ಲಿ ಬಿಸಿಯೂಟ ಯೋಜನೆ ಜಾರಿಗೊಳಿಸಿದ ನಂತರ ಮಕ್ಕಳಲ್ಲಿನ ಕುಪೋಷಣೆ ಕಡಿಮೆ ಆಗಿರುವುದು ನಿಜವಾದರೂ ಅಭಿವೃದ್ಧಿಶೀಲ ದೇಶಗಳಿಗೆ ಹೋಲಿಸಿದರೆ ನಾವಿನ್ನೂ ತುಂಬಾ ದೂರದ ಹಾದಿ ಪಯಣಿಸಬೇಕಾಗಿದೆ. ಮೊಟ್ಟೆ ಬೇಡ ಎನ್ನುವ ಮಕ್ಕಳಿಗೆ ಅದರ ಪ್ರಯೋಜನ ಹಾಗೂ ಪೋಷಕಾಂಶಗಳ ಬಗ್ಗೆ ತಿಳಿಹೇಳಬೇಕಾಗಿದೆ. ಇತರ ಕಾರಣಗಳಿಗಾಗಿ ಮೊಟ್ಟೆ ಸ್ವೀಕರಿಸದವರಿಗೆ ಗುಣಮಟ್ಟದ ಚಿಕ್ಕಿಯನ್ನು, ಸಿಎಫ್‌ಟಿಆರ್‌ಐ ಅಥವಾ ಡಿಆರ್‌ಡಿಒದಿಂದ ಅಭಿವೃದ್ಧಿಪಡಿಸಿದ ಪೌಷ್ಟಿಕಭರಿತ ಸಿರಿಧಾನ್ಯದ ಬಿಸ್ಕತ್ತನ್ನು ಅಥವಾ ಯಾವುದೇ ಸಂರಕ್ಷಕಗಳನ್ನು (ಪ್ರಿಸರ್ವೆಟಿವ್) ಬಳಸದ, ಪೋಷಕಾಂಶ ಇರುವ ಆಹಾರವನ್ನು ಕೊಡಬೇಕಾಗಿದೆ. ಪ್ಲಾಸ್ಟಿಕ್ ರ‍್ಯಾಪರ್ ಬದಲು ಬಟರ್ ಪೇಪರ್ ರ‍್ಯಾಪರ್ ಬಳಸಬೇಕಾಗಿದೆ.

ಹರಿಪ್ರಸಾದ, ಸುಳ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಆಹಾರ ಸುರಕ್ಷತೆ ಕೇರಳ ನಂ.1

ಸೂಚ್ಯಂಕದಲ್ಲಿ ಕರ್ನಾಟಕಕ್ಕೆ 17ನೇ ಸ್ಥಾನ

ಭಾರತದಲ್ಲಿ ಆಹಾರದ ಕಲಬೆರಕೆ ದೊಡ್ಡ ಸಮಸ್ಯೆ. ಆಹಾರದ ಗುಣಮಟ್ಟ ಪರೀಕ್ಷೆ ಸರಿಯಾಗಿ ನಡೆಯದೇ ಇರುವುದು ಕೂಡ ಇದಕ್ಕೆ ಒಂದು ಕಾರಣ. ಈ ದಿಸೆಯಲ್ಲಿ ರಾಜ್ಯಗಳನ್ನು ಪ್ರೋತ್ಸಾಹಿಸಲು ಎಫ್‌ಎಸ್‌ಎಸ್‌ಎಐ ಹಲವು ಕ್ರಮಗಳನ್ನು ಕೈಗೊಂಡಿದ್ದು, ಅವುಗಳಲ್ಲಿ ರಾಜ್ಯ ಆಹಾರ ಸುರಕ್ಷತಾ ಸೂಚ್ಯಂಕ ಬಿಡುಗಡೆಯೂ ಒಂದಾಗಿದೆ. ಆಹಾರದ ಸುರಕ್ಷತೆಯ ಖಾತರಿ ವಿಚಾರದಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದರೆ, ತಮಿಳುನಾಡು ಎರಡನೇ ಸ್ಥಾನ ಪಡೆದಿದೆ; ಕರ್ನಾಟಕ 17ನೇ ಸ್ಥಾನದಲ್ಲಿದೆ



ಪ್ರಜಾವಾಣಿ ವಾರ್ತೆ

ಆಹಾರ ಪದಾರ್ಥಗಳ ಗುಣಮಟ್ಟ ಕಾಪಾಡಲು ಕೇಂದ್ರ ಸರ್ಕಾರವು ಹಲವು ಆಯಾಮಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯಗಳೂ ಕೂಡ ಅದರಲ್ಲಿ ಗಮನಾರ್ಹ ಪಾತ್ರ ವಹಿಸುತ್ತಿವೆ. ಅದಕ್ಕಾಗಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಶ್ರಮಿಸುತ್ತಿದೆ. ಅದರ ಮುಖ್ಯ ಉದ್ದೇಶ, ಆಹಾರ ಪದಾರ್ಥಗಳ ತಯಾರಿಕೆ, ವಿತರಣೆ, ಮಾರಾಟಕ್ಕೆ ಸಂಬಂಧಿಸಿದಂತೆ ವಿವಿಧ ಹಂತಗಳಲ್ಲಿ ಗುಣಮಟ್ಟವನ್ನು ಖಾತರಿಪಡಿಸುವುದು ಮತ್ತು ಈ ಮೂಲಕ ಸಾರ್ವಜನಿಕರ ಆರೋಗ್ಯವನ್ನು ಕಾಪಾಡುವುದು.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಪ್ರಕಾರ ಕಾರ್ಯನಿರ್ವಹಿಸುವ ಎಫ್‌ಎಸ್‌ಎಸ್‌ಎಐ, ರಾಷ್ಟ್ರ ಮಟ್ಟದಲ್ಲಿ ನೀತಿ ನಿರೂಪಣೆ, ಮಾರ್ಗದರ್ಶನ, ಸಮನ್ವಯದ ಕೆಲಸ ಮಾಡಿದರೆ, ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಮಟ್ಟದಲ್ಲಿ ಅದನ್ನು ಅನುಷ್ಠಾನಗೊಳಿಸುವ ಕೆಲಸ ಮಾಡುತ್ತಿದೆ. ತಮ್ಮ ವ್ಯಾಪ್ತಿಯಲ್ಲಿ ಆಹಾರದ ಸುರಕ್ಷತೆ ಖಾತರಿಪಡಿಸುವ ಕೆಲಸಕ್ಕೆ ಉತ್ತೇಜನ ನೀಡಲು ಎಫ್‌ಎಸ್‌ಎಸ್‌ಎಐ 2019ರಿಂದ ಆಹಾರ ಗುಣಮಟ್ಟ, ಸುರಕ್ಷತೆಯನ್ನು ಅತ್ಯುತ್ತಮವಾಗಿ ನಿರ್ವಹಿಸುತ್ತಿರುವ ರಾಜ್ಯಗಳ ಪಟ್ಟಿ ಬಿಡುಗಡೆ ಮಾಡುತ್ತಿದೆ. ರಾಜ್ಯ ಆಹಾರ ಸುರಕ್ಷತಾ ಸೂಚ್ಯಂಕದ ಅಡಿಯಲ್ಲಿ (ಎಸ್‌ಎಫ್‌ಎಸ್‌ಐ) ನಿರ್ದಿಷ್ಟ ಮಾನದಂಡಗಳ ಆಧಾರದಲ್ಲಿ ರಾಜ್ಯಗಳಿಗೆ ರ‍್ಯಾಂಕಿಂಗ್ ನೀಡುತ್ತಿದೆ.

ಆರು ಮಾನದಂಡಗಳ ಆಧಾರದಲ್ಲಿ ಆಹಾರದ ಸುರಕ್ಷತೆ ಅಳೆಯುವ ಮೂಲಕ ಎಸ್‌ಎಫ್‌ಎಸ್‌ಐ ಸಿದ್ಧಪಡಿಸಲಾಗಿದ್ದು, 2023–24ರ ಸೂಚ್ಯಂಕದಲ್ಲಿ ಕೇರಳ ಮೊದಲ ಸ್ಥಾನ ಪಡೆದಿದ್ದರೆ, ತಮಿಳುನಾಡು ಎರಡನೆಯ ಸ್ಥಾನ ಪಡೆದಿದೆ. ಜಮ್ಮು ಕಾಶ್ಮೀರ ಮೂರನೆಯ ಸ್ಥಾನ ಪಡೆದಿದೆ. ಸೂಚ್ಯಂಕದಲ್ಲಿ ಗುಜರಾತ್, ನಾಗಾಲ್ಯಾಂಡ್ ರಾಜ್ಯಗಳನ್ನು ವಿಶೇಷವಾಗಿ ಪ್ರಸ್ತಾಪ ಮಾಡಲಾಗಿದೆ.

ಕೇರಳ ಮೊದಲ ಸ್ಥಾನ ಪಡೆದಿದ್ದು ಹೇಗೆ?



ಆಹಾರ ಗುಣಮಟ್ಟ ಕಾಪಾಡುವ ದಿಸೆಯಲ್ಲಿ ಕೇರಳ ವಿಶೇಷ ಶ್ರಮ ವಹಿಸಿದೆ. ಮೊದಲನೆಯದಾಗಿ, ರಾಜ್ಯದಲ್ಲಿ ಗುಣಮಟ್ಟ ಖಾತರಿಪಡಿಸಲು ಪರಿಣಾಮಕಾರಿ ಶಿಬಿರಗಳನ್ನು ಆಯೋಜಿಸಿತು. 2023–24ರ ಆರ್ಥಿಕ ವರ್ಷದಲ್ಲಿ ಸುರಕ್ಷತೆ ಪರಿಶೀಲನೆಯಲ್ಲಿ ರಾಜ್ಯವು ಶೇ 100ಕ್ಕಿಂತಲೂ ಹೆಚ್ಚಿನ ಸಾಧನೆ ಮಾಡಿತು. ಜತೆಗೆ, ಇದೇ ಅವಧಿಯಲ್ಲಿ ಆಹಾರ ಗುಣಮಟ್ಟ ಪರೀಕ್ಷೆಯ ಮೂಲಸೌಕರ್ಯವನ್ನು ಹೆಚ್ಚಿಸಲಾಯಿತು. ಅವುಗಳಿಗೆ ತಕ್ಕಂತೆ ಆಹಾರ ಉತ್ಪಾದನೆಯ ಪರವಾನಗಿಗೆ ಬೇಡಿಕೆ ಹೆಚ್ಚಾಯಿತು. ರಾಜ್ಯ ಆಹಾರ ಗುಣಮಟ್ಟ ಪ್ರಯೋಗಾಲಯಕ್ಕೆ ಎಫ್‌ಎಸ್‌ಎಸ್‌ಎಐ ಮಾನ್ಯತೆ ಸಿಕ್ಕಿದ್ದು ಕೂಡ ಇದೇ ಅವಧಿಯಲ್ಲಿಯೇ. ಅದರಲ್ಲಿ ಸೂಕ್ಷ್ಮಜೀವಿ ಶಾಸ್ತ್ರಕ್ಕೆ ಸಂಬಂಧಿಸಿದ ಮತ್ತು ಅತ್ಯಾಧುನಿಕವಾದ ಯಂತ್ರೋಪಕರಣಗಳನ್ನು ಅಳವಡಿಸಲಾಯಿತು.

ಆಹಾರದ ಸುರಕ್ಷತೆ ಪರೀಕ್ಷೆಗೆ ಸರ್ವಸಜ್ಜಿತ ಸಂಚಾರಿ ವಾಹನಗಳನ್ನು ಜಿಲ್ಲಾ ಮಟ್ಟದಲ್ಲಿಯೂ ಲಭ್ಯವಿರುವಂತೆ ಮಾಡಲಾಯಿತು. ಅವುಗಳನ್ನು ಪರೀಕ್ಷೆಗೆ ಅಷ್ಟೇ ಅಲ್ಲದೇ ತರಬೇತಿ ಮತ್ತು ಅರಿವು ಮೂಡಿಸುವ ಕಾರ್ಯಗಳಿಗೂ ಬಳಸಿಕೊಳ್ಳಲಾಯಿತು. ಗುಣಮಟ್ಟ ಮತ್ತು ಸುರಕ್ಷತೆಯ ಮಾನದಂಡಗಳ ಆಧಾರದಲ್ಲಿ ವರದಿ ತಯಾರಿಸುವುದು ಮತ್ತು ತಿಂಗಳಿಗೆ ಅಂಥ ನೂರಕ್ಕೂ ಹೆಚ್ಚು ವರದಿಗಳನ್ನು ಸಲ್ಲಿಸುವುದು ಕಡ್ಡಾಯವಾಯಿತು. ರಾಜ್ಯದಾದ್ಯಂತ 'ಸೂಕ್ತ ಆಹಾರ ಸೇವಿಸಿ' (ಈಟ್ ರೈಟ್) ಅಭಿಯಾನ ನಡೆಸಲಾಯಿತು. ಅಂತರರಾಷ್ಟ್ರೀಯ ಸಿರಿಧಾನ್ಯ ಮೇಳದ ಭಾಗವಾಗಿ ಹಲವು ಸಿರಿಧಾನ್ಯ ಮೇಳಗಳನ್ನು ಆಯೋಜಿಸಿ, ಅವುಗಳ ಬಳಕೆಯನ್ನು ಉತ್ತೇಜಿಸಲಾಯಿತು.

ತಮಿಳುನಾಡಿನ ಸಾಧನೆ ಏನು?



ರಾಜ್ಯದಲ್ಲಿ ಆಹಾರ ಸುರಕ್ಷತೆ ಖಾತರಿಪಡಿಸುವ ಸಲುವಾಗಿಯೇ ನಿರ್ದಿಷ್ಟವಾದ, ಪೂರ್ಣಕಾಲಿಕ ಅಧಿಕಾರಿಗಳಿದ್ದಾರೆ. ಜತೆಗೆ ರಾಜ್ಯ ಮಟ್ಟದ ಸಲಹಾ ಸಮಿತಿ (ಎಸ್‌ಎಲ್‌ಎಸಿ) ಮತ್ತು ಜಿಲ್ಲಾ ಮಟ್ಟದ ಸಲಹಾ ಸಮಿತಿ (ಡಿಎಲ್‌ಎಸಿ) ರಚಿಸಿ, ನಿಗದಿತವಾಗಿ ಅವುಗಳ ಸಭೆಗಳನ್ನು ನಡೆಸಲಾಯಿತು. ಇವುಗಳಿಂದಾಗಿ ಹೆಚ್ಚು ಆಹಾರ ಉತ್ಪಾದನಾ ಘಟಕಗಳು ನೋಂದಣಿ ಮಾಡಿಕೊಂಡವು. ಅವುಗಳ ಜತೆಯಲ್ಲೇ ಗುಣಮಟ್ಟ ಪರೀಕ್ಷೆಯ ಕೆಲಸಗಳೂ ತೀವ್ರಗೊಂಡವು. ರಾಜ್ಯದ ಆಹಾರ ಪರೀಕ್ಷಾ ಘಟಕಕ್ಕೆ ಎಫ್‌ಎಸ್‌ಎಸ್‌ಎಐ ಮಾನ್ಯತೆ ಸಿಕ್ಕಿತು. ಅದನ್ನು ಆಧುನಿಕ ಉಪಕರಣಗಳಿಂದ ಸಜ್ಜುಗೊಳಿಸಲಾಯಿತು. ಆಹಾರದ ಸುರಕ್ಷತೆ ಪರೀಕ್ಷೆ, ತರಬೇತಿಗಾಗಿ ಸಂಚಾರಿ ವಾಹನಗಳನ್ನು ಬಳಸಿಕೊಳ್ಳಲಾಯಿತು. ಆಹಾರ ಸುರಕ್ಷತಾ ತರಬೇತಿ ಮತ್ತು ಪ್ರಮಾಣೀಕರಣ ತರಬೇತಿ ಗುರಿಯನ್ನು ಸಾಧಿಸಲಾಯಿತು. ಜತೆಗೆ 'ಸೂಕ್ತ ಆಹಾರ ಸೇವಿಸಿ' ಅಭಿಯಾನಕ್ಕೆ ಪ್ರೋತ್ಸಾಹ ನೀಡಲಾಯಿತು.

ಮೊದಲ ಮೂರು ಸ್ಥಾನ ಗಳಿಸಿದ ರಾಜ್ಯಗಳು ಪಡೆದ ಅಂಕಗಳು

ಮಾನದಂಡಗಳು	ಕೇರಳ	ತಮಿಳುನಾಡು	ಜಮ್ಮು ಮತ್ತು ಕಾಶ್ಮೀರ
ಮಾನವ ಸಂಪನ್ಮೂಲ ಮತ್ತು ಸಾಂಸ್ಥಿಕ ದತ್ತಾಂಶ (9 ಅಂಕಗಳಲ್ಲಿ)	6.25	7	6.25
ನಿಯಮಗಳ ಅನುಸರಣೆ 28 (28 ಅಂಕಗಳಲ್ಲಿ)	17	17	16
ಆಹಾರ ಪರೀಕ್ಷಾ ಮೂಲಸೌಕರ್ಯ ಮತ್ತು ನಿಗಾ ವ್ಯವಸ್ಥೆ (36 ಅಂಕಗಳಲ್ಲಿ)	31	26	20
ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ (8 ಅಂಕಗಳಲ್ಲಿ)	4	5	8
ಗ್ರಾಹಕ ಸಬಲೀಕರಣ (9 ಅಂಕಗಳಲ್ಲಿ)	7.5	7	6
ರಾಜ್ಯ ಆಹಾರ ಸುರಕ್ಷತಾ ಸೂಚ್ಯಂಕದಲ್ಲಿ ಸುಧಾರಣೆ (10 ಅಂಕಗಳಲ್ಲಿ)	8	5	8
ಒಟ್ಟು (100 ಅಂಕಗಳಲ್ಲಿ)	73.75	67	64.25

ಆಧಾರ: ಎಫ್‌ಎಸ್‌ಎಸ್‌ಎಐ 6ನೇ ಆಹಾರ ಸುರಕ್ಷತಾ ಸೂಚ್ಯಂಕ ವರದಿ–2023–24


ಸವಾಲುಗಳು ಮತ್ತು ಪರಿಹಾರಗಳು


- ಆಹಾರ ಪೂರೈಕೆ ಸರಪಳಿಯಲ್ಲಿ ಬರುವ ಎಲ್ಲ ಪಾಲುದಾರರಿಗೂ (ರೈತರಿಂದ ಹಿಡಿದು, ಆಹಾರ ವಸ್ತುಗಳ ನಿರ್ವಾಹಕರು, ನಿಯಂತ್ರಕರವರೆಗೆ) ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಗೆ ಒತ್ತು ನೀಡುವುದು ಅವಶ್ಯಕ
- ಆಹಾರ ಸುರಕ್ಷತಾ ಮಾನದಂಡಗಳ ಪರಿಣಾಮಕಾರಿ ನಿರ್ವಹಣೆ ಮತ್ತು ಜಾರಿಗಾಗಿ ಅತ್ಯಾಧುನಿಕ ಪರೀಕ್ಷಾ ಸೌಕರ್ಯಗಳನ್ನು ಸೃಷ್ಟಿಸುವುದು. ಇದರಿಂದ ಕಳಪೆ ಗುಣಮಟ್ಟದ ಆಹಾರ ವಸ್ತುಗಳು, ಕಲಬೆರಕೆಯನ್ನು ಆರಂಭದಲ್ಲೇ ಪತ್ತೆಹಚ್ಚಬಹುದು
- ಕಲಬೆರಕೆ, ಹಾಳಾದ ಆಹಾರ ವಸ್ತುಗಳನ್ನು ಪತ್ತೆ ಹಚ್ಚುವುದಕ್ಕಾಗಿ ಅತ್ಯಾಧುನಿಕ ಮೂಲಸೌಕರ್ಯಗಳ (ತ್ವರಿತ ಪತ್ತೆ, ಸೆನ್ಸರ್ ಆಧಾರಿತ ಆನ್‌ಲೈನ್ ಪತ್ತೆ ಹಾಗೂ ಇತರ) ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಕ್ಷಿಪ್ರವಾಗಿ ವಿಶ್ಲೇಷಣೆಗೆ ಒಳಪಡಿಸುವ ಮತ್ತು ದತ್ತಾಂಶಗಳನ್ನು ಹಂಚಿಕೊಳ್ಳುವ, ತ್ವರಿತವಾಗಿ ನಿರ್ಧಾರ ಕೈಗೊಳ್ಳುವ, ಲೋಪಗಳಿಲ್ಲದೆ ದತ್ತಾಂಶಗಳನ್ನು ವರ್ಗಾಯಿಸುವ ವ್ಯವಸ್ಥೆಗಳ ಅಭಿವೃದ್ಧಿಗೆ ಒತ್ತು ನೀಡಬೇಕು.
- ಮೂಲಸೌಕರ್ಯಗಳನ್ನು ಒದಗಿಸಲು ಹೆಚ್ಚು ಹೂಡಿಕೆ ಅವಶ್ಯಕ. ಅತ್ಯಾಧುನಿಕ ದಾಸ್ತಾನು ವ್ಯವಸ್ಥೆ, ಸಮರ್ಥ ಸಾಗಣೆ ಜಾಲ, ಬಹುಬೇಗ ಕೆಡುವ ವಸ್ತುಗಳಿಗಾಗಿ ಶೀಥಲೀಕರಣ ವ್ಯವಸ್ಥೆ ಅಗತ್ಯ
- ಆಹಾರ ವಸ್ತುಗಳ ಬಳಕೆ, ನಿರ್ವಹಣೆ, ದಾಸ್ತಾನು ಮತ್ತು ಸಿದ್ಧತೆಗಳ ಬಗ್ಗೆ ಗ್ರಾಹಕರಲ್ಲಿ ಜಾಗೃತಿ ಮೂಡಿಸಬೇಕು
- ಆಹಾರ ಸುರಕ್ಷತೆಯ ಸವಾಲುಗಳನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕು

ಈಶಾನ್ಯದಲ್ಲಿ ನಾಗಾಲ್ಯಾಂಡ್

ಈಶಾನ್ಯದ ಏಳು ರಾಜ್ಯಗಳ ಪೈಕಿ ಈ ವರ್ಷ ನಾಗಾಲ್ಯಾಂಡ್ ಸೂಚ್ಯಂಕದಲ್ಲಿ ಮುಂಚೂಣಿಯಲ್ಲಿದೆ. 100ರಲ್ಲಿ 44.25 ಅಂಕಗಳನ್ನು ಗಳಿಸಿ ರಾಷ್ಟ್ರ ಮಟ್ಟದಲ್ಲಿ 13ನೇ ರ‍್ಯಾಂಕ್ ಗಳಿಸಿದೆ.

ಮಾನವಶಕ್ತಿ, ಮಾದರಿಗಳ ಸಾಗಣೆ ವೆಚ್ಚ, ಪ್ರಯೋಗಾಲಯದ ಕೊರತೆಗಳಿದ್ದರೂ ಆಹಾರ ಪರೀಕ್ಷಾ ಮೂಲಸೌಕರ್ಯಗಳ ಸುಧಾರಣೆಯಲ್ಲಿ ನಾಗಾಲ್ಯಾಂಡ್ ಗಮನಾರ್ಹ ಪ್ರಗತಿ ಸಾಧಿಸಿದೆ. ಎನ್‌ಎಬಿಎಲ್ (ನ್ಯಾಷನಲ್ ಅಕ್ರೆಡಿಷನ್ ಬೋರ್ಡ್ ಫಾರ್ ಟೆಸ್ಟಿಂಗ್ ಆ್ಯಂಡ್ ಕ್ಯಾಲಿಬರೇಷನ್ ಲ್ಯಾಬೊರೇಟರೀಸ್) ಮಾನ್ಯತೆ, ಪ್ರಯೋಗಾಲಯದಲ್ಲಿ ಅತ್ಯಾಧುನಿಕ ಪರೀಕ್ಷಾ ಉಪಕರಣಗಳ ಲಭ್ಯತೆ, ಸಂಚಾರಿ ಆಹಾರ ಸುರಕ್ಷತೆ ಪ್ರಯೋಗಾಲಯಗಳನ್ನು ರಾಜ್ಯ ಪರಿಣಾಮಕಾರಿಯಾಗಿ ಬಳಸಿದೆ. ರಾಜ್ಯವು ಮಾದರಿಗಳ ಪರೀಕ್ಷಾ ಗುರಿ ಅನುಷ್ಠಾನ, ಆಹಾರ ಸುರಕ್ಷತಾ ತರಬೇತಿ ಮತ್ತು ಪ್ರಮಾಣೀಕರಣ ತರಬೇತಿ, 'ಸೂಕ್ತ ಆಹಾರ ಸೇವಿಸಿ' ಅಭಿಯಾನ, ಸ್ವಚ್ಛತಾ ರೇಟಿಂಗ್, ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದೆ ಎಂದು ವರದಿ ಹೇಳಿದೆ.





1. ಮಾನವ ಸಂಪನ್ಮೂಲ ಮತ್ತು ಸಾಂಸ್ಥಿಕ ದತ್ತಾಂಶ (9 ಅಂಕಗಳಲ್ಲಿ)
2. ನಿಯಮಗಳ ಅನುಸರಣೆ 28 (28 ಅಂಕಗಳಲ್ಲಿ)
3. ಆಹಾರ ಪರೀಕ್ಷಾ ಮೂಲಸೌಕರ್ಯ ಮತ್ತು ನಿಗಾ ವ್ಯವಸ್ಥೆ (36 ಅಂಕಗಳಲ್ಲಿ)
4. ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ (8 ಅಂಕಗಳಲ್ಲಿ)
5. ಗ್ರಾಹಕ ಸಬಲೀಕರಣ (9 ಅಂಕಗಳಲ್ಲಿ)
6. ರಾಜ್ಯ ಆಹಾರ ಸುರಕ್ಷತಾ ಸೂಚ್ಯಂಕದಲ್ಲಿ ಸುಧಾರಣೆ (10 ಅಂಕಗಳಲ್ಲಿ)

ಕರ್ನಾಟಕದ ಕಳಪೆ ಸಾಧನೆ

ಸೂಚ್ಯಂಕದಲ್ಲಿ ಕರ್ನಾಟಕ ಕಳಪೆ ಸಾಧನೆ ಮಾಡಿದ್ದು, 17ನೇ ರ‍್ಯಾಂಕ್ ಗಳಿಸಿದೆ. ನಿಗದಿತ ಆರು ಮಾನದಂಡಗಳಿಗೆ ನೀಡಲಾಗುವ ಒಟ್ಟು 100 ಅಂಕಗಳಲ್ಲಿ ರಾಜ್ಯ 38.75 ಅಂಕಗಳನ್ನು ಗಳಿಸಿದೆ. ಆಹಾರ ಪರೀಕ್ಷೆಗೆ ಸಂಬಂಧಿಸಿದ ಮೂಲಸೌಕರ್ಯ ಮತ್ತು ನಿಗಾ ಮಾನದಂಡಕ್ಕೆ 36 ಅಂಕಗಳಿವೆ. ಅದರಲ್ಲಿ ರಾಜ್ಯ ಪಡೆದಿರುವುದು 17 ಅಂಕಗಳು ಮಾತ್ರ. 2022–23ನೇ ಸಾಲಿನಲ್ಲೂ ಕರ್ನಾಟಕದ ಸಾಧನೆ ಉತ್ತಮವಾಗಿರಲಿಲ್ಲ. ಆ ವರ್ಷ ರಾಜ್ಯಗಳನ್ನು ದೊಡ್ಡ ರಾಜ್ಯಗಳು, ಸಣ್ಣ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳೆಂದು ವಿಭಾಗಿಸಿತ್ತು. 20 ದೊಡ್ಡ ರಾಜ್ಯಗಳ ಪೈಕಿ ಕರ್ನಾಟಕ 12ನೇ ಸ್ಥಾನ ಗಳಿಸಿತ್ತು. 100 ಅಂಕಗಳಿಗೆ ಕರ್ನಾಟಕ 37 ಅಂಕಗಳನ್ನು ಗಳಿಸಿತ್ತು. ಆರು ಮಾನದಂಡಗಳ ಪೈಕಿ ರಾಜ್ಯ ಆಹಾರ ಸುರಕ್ಷತಾ ಸೂಚ್ಯಂಕದಲ್ಲಿ ಸುಧಾರಣೆ ಎನ್ನುವುದು ಕೊನೆಯ ಮಾನದಂಡ. ಇದಕ್ಕೆ 10 ಅಂಕಗಳಿವೆ. ನೆರೆಯ ಕೇರಳ ಮತ್ತು ತಮಿಳುನಾಡು ಕ್ರಮವಾಗಿ 8 ಮತ್ತು 5 ಅಂಕಗಳನ್ನು ಗಳಿಸಿದ್ದರೆ, ಕರ್ನಾಟಕದ್ದು ಶೂನ್ಯ ಸಾಧನೆ.

ಜಮ್ಮು–ಕಾಶ್ಮೀರಕ್ಕೆ ಮನ್ನಣೆ



ಕೇಂದ್ರಾಡಳಿತ ಪ್ರದೇಶವಾದ ಜಮ್ಮು–ಕಾಶ್ಮೀರದಲ್ಲಿಯೂ ಆಹಾರದ ಸುರಕ್ಷತೆ ಕಾಪಾಡುವ ದಿಸೆಯಲ್ಲಿ ಹಲವು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಹೆಚ್ಚು ಮಂದಿಗೆ ಆಹಾರ ಸುರಕ್ಷತಾ ಉಸ್ತುವಾರಿ ತರಬೇತಿ ನೀಡಿದ್ದು, 'ಸೂಕ್ತ ಆಹಾರ ಸೇವಿಸಿ' ಅಭಿಯಾನ ನಡೆಸಿದ್ದು, ಅಧಿಕಾರಿಗಳಿಗೆ ಅಗತ್ಯದ ಆಧಾರದ ಮೇಲೆ ತರಬೇತಿ ನೀಡಿದ್ದು ಉತ್ತಮ ಫಲಶ್ರುತಿಗೆ ಕಾರಣವಾಗಿವೆ. ಜತೆಗೆ ಸಂಚಾರಿ ವಾಹನಗಳ ಮೂಲಕ ಜಾಗೃತಿ ಕಾರ್ಯಕ್ರಮ, ಗುರಿ ಆಧಾರಿತ ಯೋಜನೆಗಳ ಮೂಲಕ ಜಮ್ಮು ಕಾಶ್ಮೀರವು ಆಹಾರ ಸುರಕ್ಷತೆಯಲ್ಲಿ ಎಫ್‌ಎಸ್‌ಎಸ್‌ಎಐನ ವಿಶೇಷ ಮನ್ನಣೆಗೆ ಪಾತ್ರವಾಗಿದೆ.

ಸಿನಿ ಬಿಟ್ಸ್



ಉಪೇಂದ್ರ, ಶಿವರಾಜ್‌ಕುಮಾರ್, ರಾಜ್ ಬಿ ಶೆಟ್ಟಿ

ವರ್ಷಾಂತ್ಯಕ್ಕೆ 45 ತೆರೆಗೆ?

ಶಿವರಾಜಕುಮಾರ್, ಉಪೇಂದ್ರ ಹಾಗೂ ರಾಜ್ ಬಿ ಶೆಟ್ಟಿ ಅಭಿನಯದ '45' ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಚೊಚ್ಚಲ ನಿರ್ದೇಶನದ ಚಿತ್ರ ಈ ವರ್ಷದ ಅಂತ್ಯಕ್ಕೆ ತೆರೆಗೆ ಬರುವ ನಿರೀಕ್ಷೆಯಿದೆ.

'ಈ ಚಿತ್ರದಲ್ಲಿ ನಾವು ಮೂವರು ನಟಿಸಿದ್ದೇವೆ. ಇಲ್ಲಿ ಆ ನಟ ಹೆಚ್ಚು, ಈ ನಟ ಕಡಿಮೆ ಎಂದಿಲ್ಲ. ಎಲ್ಲರೂ ಒಂದೇ. ಎಲ್ಲ ಪಾತ್ರಗಳಿಗೂ ಅದರದ್ದೇ ಆದ ಮಹತ್ವವಿದೆ. ಉಪೇಂದ್ರ ಅವರ ಜೊತೆ ನಟಿಸಲು ನಾನು ಯಾವಾಗಲೂ ಸಿದ್ಧ. ಅರ್ಜುನ್ ಜನ್ಯ ಅವರ ಮೊದಲ ನಿರ್ದೇಶನದ ಚಿತ್ರ ಎಂದು ಹೇಳಲು ಸಾಧ್ಯವಿಲ್ಲದಷ್ಟು ಉತ್ತಮವಾಗಿ ಚಿತ್ರ ಮೂಡಿ ಬಂದಿದೆ. ಇಡೀ ಭಾರತೀಯರೆ ಮೆಚ್ಚುವಂತಹ ಆ್ಯಕ್ಷನ್ ಚಿತ್ರವಾಗಲಿದೆ' ಎಂದರು ಶಿವರಾಜ್‌ಕುಮಾರ್.

ರಮೇಶ್ ರೆಡ್ಡಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 'ಪೂರ್ತಿ ಚಿತ್ರ ಒಂದು ದೇವಸ್ಥಾನವಿದ್ದಂತೆ. ಶಿವರಾಜಕುಮಾರ್, ಉಪೇಂದ್ರ, ರಾಜ್ ಬಿ ಶೆಟ್ಟಿ ಇಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಇದ್ದಂತೆ. ರಮೇಶ್ ರೆಡ್ಡಿ ಅವರು ಈ ದೇವಸ್ಥಾನ ಕಟ್ಟಿದವರು. ಛಾಯಾಗ್ರಾಹಕ ಸತ್ಯ ಹೆಗಡೆ ಪ್ರಧಾನ ಪುರೋಹಿತರು. ಎಲ್ಲರ ಸಹಕಾರದಿಂದ 106 ದಿನಗಳ ಚಿತ್ರೀಕರಣ ಯಶಸ್ವಿಯಾಗಿ ಮುಕ್ತಾಯವಾಗಿದೆ. ಮುಂದೆ ಗ್ರಾಫಿಕ್ಸ್ ಕೆಲಸ ಪ್ರಾರಂಭವಾಗಲಿದೆ. ಶೀಘ್ರದಲ್ಲಿಯೇ ಮುಂದಿನ ಕೆಲಸ ಮುಗಿಸಿ ತೆರೆಗೆ ಬರುತ್ತೇವೆ' ಎಂದರು ಅರ್ಜುನ್ ಜನ್ಯ.

'ಮನುಷ್ಯನ ಸಾವಿನ ನಂತರದ ಹಾಸ್ಯಮಯ ಕಥಾ ಹಂದರವನ್ನು ಈ ಚಿತ್ರ ಹೊಂದಿದ್ದು, ಸ್ವರ್ಗ, ನರಕಗಳ ಗ್ರಾಫಿಕ್ಸ್ ಲೋಕವೇ ಚಿತ್ರದಲ್ಲಿದೆ' ಎಂದಿದೆ ಚಿತ್ರತಂಡ. ಈ ಚಿತ್ರಕ್ಕೆ ಅರ್ಜುನ್ ಜನ್ಯ ಅವರೇ ಕಥೆ-ಚಿತ್ರಕಥೆ ಬರೆದು ಸಂಗೀತ ಸಂಯೋಜಿಸಿದ್ದಾರೆ. ಬೆಂಗಳೂರು, ಮೈಸೂರು ಮುಂತಾದ ಕಡೆ ಚಿತ್ರೀಕರಣ ನಡೆದಿದ್ದು, ಕನ್ನಡವಲ್ಲದೆ ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲಿ ಮೂಡಿಬರುತ್ತಿದೆ.

ಮಿಂಚುಹುಳುವಾಗಿ ಬಂದ ಪೃಥ್ವಿ ರಾಜ್‌ಕುಮಾರ್



ಮಾಸ್ಟರ್ ಪ್ರೀತಂ, ಪೃಥ್ವಿ ರಾಜ್‌ಕುಮಾರ್

ನಟ ರಾಜ್‌ಕುಮಾರ್ ಸಹೋದರ ವರದಪ್ಪನವರ ಮೊಮ್ಮಗ ಪೃಥ್ವಿ ರಾಜ್‌ಕುಮಾರ್ ಸ್ಯಾಂಡಲ್‌ವುಡ್‌ಗೆ ಕಾಲಿಡುತ್ತಿದ್ದಾರೆ. ಅವರ ಅಭಿನಯದ ಚೊಚ್ಚಲ ಚಿತ್ರ 'ಮಿಂಚುಹುಳು' ಅಕ್ಟೋಬರ್ 4ರಂದು ತೆರೆಗೆ ಬರುತ್ತಿದೆ. ಮಹೇಶ್ ಕುಮಾರ್ ಅವರ ಕಥೆ, ಚಿತ್ರಕಥೆ, ನಿರ್ದೇಶನವಿರುವ ಈ ಚಿತ್ರಕ್ಕೆ ರಾಜಗೋಪಾಲ್ ದೊಡ್ಡಹುಲ್ಲೂರು ಬಂಡವಾಳ ಹೂಡಿದ್ದಾರೆ.

'ನಗರ ಪ್ರದೇಶದಲ್ಲಿ ನಡೆಯುವ ಕಥೆ. ಜವಾಬ್ದಾರಿ ಇಲ್ಲದ ತಂದೆ ಹಾಗೂ ಮಗನ ನಡುವಿನ ಕಥೆ ಇದಾಗಿದ್ದು, ಅವರ ಬದುಕಿನ ಕಷ್ಟ, ಸವಾಲುಗಳನ್ನು ಹೇಳಿದ್ದೇವೆ. ಮಿಂಚುಹುಳುವೊಂದನ್ನು ನೋಡಿದ ಮಗನಿಗೆ ಹೊಸ ಆಲೋಚನೆ ಬರುತ್ತದೆ. ಆ ಆಲೋಚನೆ ಏನು?, ಅದರಿಂದ ಬದುಕಿನಲ್ಲಿ ಏನೆಲ್ಲ ಆಗುತ್ತದೆ ಎಂಬುದು ಚಿತ್ರಕಥೆ. ಈ ಚಿತ್ರವಾಗಲು ಪುನೀತ್ ರಾಜ್‌ಕುಮಾರ್ ಅವರೇ ಕಾರಣ' ಎಂದರು ನಿರ್ದೇಶಕರು.

ಭೂಮಿ ಪಿಕ್ಚರ್ಸ್ ನಿರ್ಮಾಣದ ಚಿತ್ರಕ್ಕೆ ರಾಜ್ ಭಾಸ್ಕರ್ ಸಂಗೀತ, ಚಲ್ಲ ಛಾಯಾಚಿತ್ರಗ್ರಹಣ, ಅಂಜಿ ಕೆ. ವೀರ ಛಾಯಾಚಿತ್ರಗ್ರಹಣವಿದೆ. ಮಾಸ್ಟರ್‌ಪ್ರಿತಂ, ಪರಶಿವ ಮೂರ್ತಿ, ರಶ್ಮಿ ಗೌಡ, ಪೂರ್ವಿಕಾ ಮುಂತಾದವರು ತಾರಾಗಣದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಜೋಳದ ಚೀಲದ ಕಾಳಾಗಬೇಕು!



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

33

ತೋರಹ ಅಂತಾ ಒಂದು ಜೆವಿಶ್ ಧರ್ಮ ಗ್ರಂಥ ಇದೆ. ಹೆಲಿನ್ ಅಂತಾ ಒಬ್ಬ ಧರ್ಮಗುರು ಇದ್ದ. ಅವನಲ್ಲಿಗೆ ಒಬ್ಬ ಶಿಷ್ಯ ಬಂದು 'ತೋರಹ ಧರ್ಮಗ್ರಂಥದ ಸಾರವನ್ನು ಎರಡು ಸಾಲಿನಲ್ಲಿ ಹೇಳಿ' ಎಂದು ಕೇಳಿದ. 'ಸಾವಿರಕ್ಕೂ ಹೆಚ್ಚು ಪುಟಗಳಲ್ಲಿ ಇರುವ ಅಂಶವನ್ನು ಎರಡು ಸಾಲಿನಲ್ಲಿ ಹೇಳೋದು ಹೇಗೆ?' ಎಂದು ಗುರು ಪ್ರಶ್ನೆ ಮಾಡಿದ. ಅದಕ್ಕೆ ಶಿಷ್ಯ, 'ನೀವು ಈ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದ್ದೀರಿ. ಆದರೂ ಅದರ ಸಾರವನ್ನು ಎರಡು ಸಾಲಿನಲ್ಲಿ ಹೇಳಾಕ ಬರಲಿಲ್ಲ ಅಂದ್ರ ನಾವು ನಿಮ್ಮನ್ನು ಗುರು ಅಂತ ಯಾಕ ಅನಬೇಕು' ಎಂದ. ಆಗ ಹೆಲಿನ್, 'ನಿನಗೆ ಯಾರಾದರೂ ನಮಸ್ಕಾರ ಮಾಡಬೇಕು ಅಂತಾ ಇದ್ರೆ ನೀನು ಅವರಿಗೆ ಮೊದಲು ನಮಸ್ಕಾರ ಮಾಡೋದನ್ನು ಕಲಿ. ನೀನು ಯಾರದ್ದಾದರೂ ಮನಿಗೆ ಹೋದಾಗ ಅವರು ಬರ್ರೀ, ಕೂಡ್ರೀ, ಊಟ ಮಾಡ್ರಿ ಅನಬೇಕು ಅಂತಾ ಇದ್ದರೆ ನೀನು ನಿಮ್ಮ ಮನೆಗೆ ಬಂದವರಿಗೆ ಹಾಗೆ ಹೇಳೋದನ್ನು ಕಲಿ. ಮಂದಿ ನಿನಗೆ ಟೀಕೆ ಮಾಡಬಾರದು ಅಂತಾ ಇದ್ದರೆ ನೀನು ಇನ್ನೊಬ್ಬರನ್ನು ಟೀಕೆ ಮಾಡುವುದನ್ನು ಬಿಡಬೇಕು. ನೋಡಪ. ಧರ್ಮ ಅಂದರೆ, ಪ್ರೇಮ ಅಂದರೆ, ಜೀವನ ದರ್ಶನ ಅಂದರೆ ಇದೆ. ಅದನ್ನೇ ತೋರಹ ಹೇಳಿದೆ' ಎಂದ.

ಪ್ರೇಮವೇ ಧರ್ಮ. ಯಾವ ಧರ್ಮ ಕೊಲೆ ಮಾಡು ಅಂತಾ ಹೇಳಿದೆ? ಮಂದಿಗೆ ಕೊಲೆ ಮಾಡು ಅಂತಾ ಹೇಳಿದರೆ ಅದು ಧರ್ಮವೇ ಅಲ್ಲ. ಅದಕ್ಕೆ ಮನುಷ್ಯ ಪ್ರೇಮಪೂರ್ಣವಾಗಿ ಬದುಕಬೇಕು. ದ್ವೇಷ ಮರೆಸಬೇಕು. ಹೊಟ್ಟೆಕಿಚ್ಚು ಇರಬಾರದು. ಹೊಟ್ಟೆ ತುಂಬಿಸಿಕೊಳ್ಳುವುದೇ ತ್ರಾಸಾಗಿರುವಾಗ ಅದರೊಳಗೆ ಹೊಟ್ಟೆಕಿಚ್ಚನ್ನೂ ತುಂಬಿಕೊಳ್ಳಬಾರದು. ಹೊಟ್ಟೆಕಿಚ್ಚು ಮೊದಲು ನಿನ್ನ ಸುಡುತ್ತೈತಿ ಆ ಮೇಲೆ ಬ್ಯಾರೇದವರ ಸುಡತೈತಿ.

ಹೆಣ್ಣು ಮಗಾ ಅಂದರೆ ಪ್ರೀತಿ ಕಮ್ಮಿ, ಗಂಡು ಮಗಾ ಅಂದರೆ ಪ್ರೀತಿ ಜಾಸ್ತಿ. ಆತನಿಗೆ ಎರಡು ಚಮಚ ತುಪ್ಪ ಜಾಸ್ತಿ ಹಾಕ್ತೀರಿ. ಹೆಣ್ಣು ಮಗಳು ಕನ್ನಡ ಶಾಲಿ, ಗಂಡು ಮಗನಿಗೆ ಇಂಗ್ಲಿಷ್ ಶಾಲಿ, ಎಡಗೈ, ಎಡಗಾಲು ಎಂದರೆ ನಮಗೆ ತಾತ್ಸಾರ. ನಮ್ಮ ಹೊಟ್ಟ್ಯಾಗ ಹುಟ್ಟಿದ ಮಕ್ಕಳನ್ನೇ ನಾವು ಭೇದಭಾವ ಮಾಡ್ತೀವಿ ಅಂದ್ರ, ನಮ್ಮ ದೇಹದ ಭಾಗಗಳಲ್ಲೇ ತಾರತಮ್ಯ ಐತಿ ಅಂದ್ರ ಈ ಜಗತ್ತನ್ನು ಪ್ರೇಮದಿಂದ ನೋಡುವ ಭಾವ ಹೇಗೆ ಬರತೈತಿ? ದ್ವೇಷ ಮುಕ್ತರಾಗಿ ಬದುಕಬೇಕು.

ನಾವು ಎಷ್ಟೇ ಒಳ್ಳೆಯ ಕೆಲಸಗಳನ್ನು ಮಾಡಿದರೂ ಟೀಕೆ ಮಾಡೋರು ಊರಾಗ ನಾಲ್ಕು ಮಂದಿ ಇದ್ದೇ ಇರ್ತಾರ. ನಮಗೆ ಪ್ರೀತಿ ಮಾಡೋರು 96 ಮಂದಿ ಇದ್ದರೂ, ಪ್ರಾಣಕ್ಕೆ ಪ್ರಾಣ ಕೊಡೋರು 96 ಮಂದಿ ಇದ್ದರೂ ರಾತ್ರಿ ಮಲಗಿದಾಗ ನಮಗೆ ನೆನಪಿಗೆ ಬರೋರು ಟೀಕೆ ಮಾಡೋ ಅದೇ ನಾಲ್ಕು ಮಂದಿ. ನೀವು ಜೋಳದ ರಾಶಿ ಮಾಡುವಾಗ ನಾಲ್ಕು ಕಲ್ಲಿನ ಕಾಳೂ ಬಂದಿರ್ತಾವ. ಅದನ್ನು ದಲ್ಲಾಳಿ ಬಳಿಗೆ ತಗೊಂಡು ಹೋದಾಗ ಅವ ಇದು ಕಲ್ಲಿನ ಚೀಲ ಅನ್ನಲ್ಲ. ಜೋಳದ ಚೀಲ ಅಂತಾನೆ ಹೇಳ್ತಾನ. ನಾವು ಜೋಳದ ಚೀಲದ ಕಾಳಾಗಬೇಕು. ಕಲ್ಲಿನ ಚೀಲದ ಕಾಳಾಗ ಬಾರದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಸೆಪ್ಟೆಂಬರ್ 30, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ತ್ರಯೋದಶಿ ಗಂ. 19-07 ನಕ್ಷತ್ರ: ಮಘ ಗಂ. 6-19 ಯೋಗ: ಶುಭ ಗಂ. 25-18 ಕರಣ: ಗರ ಗಂ. 5-56, ಕನ್ಯಾ ಮಾಸದ 14 ನೇ ದಿನ, ಮಳೆನಕ್ಷತ್ರ: ಹಸ್ತ 2.

ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 06-23 **ಸೂರ್ಯಾಸ್ತ :** 06-17

ಮುಸ್ಲಿಂ ದಿನಾಂಕ : 26 ರಬಿಉಲ್ಲಾವಲ್

ಅದೃಷ್ಟ ಸಂಖ್ಯೆ : 4, 7

ಮೇಷ: ಸಾಮರ್ಥ್ಯಕ್ಕೆ ಮತ್ತು ಕೆಲಸಕ್ಕೆ ಗ್ರಹಣ ಆವರಿಸಿ ಯೋಜನಾಬದ್ಧವಾಗಿ ಕೆಲಸ ನಡೆಯುವುದು ಕಷ್ಟಕರ ವಿಷಯ. ಹೈನುಗಾರಿಕೆಯನ್ನು ಉಪವೃತ್ತಿಯಾಗಿ ಮಾಡಿಕೊಳ್ಳಬಹುದು. ಮಾಡುವ ಕೆಲಸದಲ್ಲಿ ಶ್ರದ್ಧೆ ಇರಲಿ.

ವೃಷಭ: ಮಾರ್ಗದರ್ಶನ ಮತ್ತು ಸಲಹೆ ಸೂಚನೆಗಳಿಗೆ ಜನರು ಕಾಯುವುದನ್ನು ನೋಡಿ ಹೆಮ್ಮೆಪಟ್ಟುಕೊಳ್ಳುವಿರಿ. ಸಮಸ್ಯೆಗಳ ನಡುವೆ ಕಾರ್ಯಸಾಧನೆ ಮಾಡಿದ ಹೆಮ್ಮೆ ನಿಮ್ಮದಾಗಲಿದೆ. ಕಾರ್ಯಸಿದ್ಧಿಗೆ ಗಣೇಶನನ್ನು ಪೂಜಿಸಿ.

ಮಿಥುನ: ಕಮಿಷನ್ ಏಜೆಂಟರಿಗೆ ಮತ್ತು ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಅಧಿಕ ಲಾಭ ಸಿಗುವುದು. ಜೀವನ ಸಂಗಾತಿಯ ಆಯ್ಕೆ ವಿಚಾರದಲ್ಲಿ ಹಿರಿಯರ ಮಾತಿನತ್ತ ಗಮನ ಕೊಡಿ. ಯಂತ್ರಗಳ ಬಳಕೆಯಲ್ಲಿ ಅಪಾಯವಾಗಬಹುದು.

ಕರ್ಕಾಟಕ: ಸಾಮಾಜಿಕವಾಗಿ ಗೌರವ ಬೆಳೆಯುವುದರ ಫಲವಾಗಿ ಶತ್ರುಬಾಧೆ ಅಥವಾ ಅಸೂಯೆ ವೃದ್ಧಿಯಾಗಲಿದೆ. ಗುತ್ತಿಗೆ ಆಧಾರಿತ ಉತ್ತಮ ಉದ್ಯೋಗ ದೊರೆತು ಲಾಭ ಸಿಗಲಿದೆ. ಷೇರು ಪೇಟೆಯಿಂದ ಲಾಭ ಗಳಿಸುವಿರಿ.

ಸಿಂಹ: ಜೀವನದಲ್ಲಿ ಹಳೆಯ ಘಟನೆಗಳಿಂದ ಕಲಿತ ಪಾಠವು ತಿಳಿವಳಿಕೆಗೆ ಕಾರಣವಾಗುವುದು. ವಾತಾವರಣದ ಬದಲಾವಣೆಯು ಆರೋಗ್ಯದ ಮೇಲೆ ಪ್ರಭಾವ ಬೀರಲಿದೆ. ನೀಲಿ ಬಣ್ಣ ಶುಭ ತರುವುದು.

ಕನ್ಯಾ: ಮಾನಸಿಕ ಒತ್ತಡದ ನಿವಾರಣೆಗೆ ಹಾಗೂ ಶತ್ರುನಿವಾರಣೆಗೆ ಕುಲ ದೇವರ ದರ್ಶನ, ಸೇವೆ ಮಾಡುವುದು ಉಪಕಾರಿಯಾಗುವುದು. ಸಂತಾನ ಅಪೇಕ್ಷಿಗಳಿಗೆ ದೇವ ಬಲದಿಂದ ಶುಭ ಸುದ್ದಿ ಸಿಗಲಿದೆ.

ತುಲಾ: ಸಹೋದರರಲ್ಲಿನ ಭಿನ್ನಾಭಿಪ್ರಾಯ ಅಥವಾ ಹುಳುಕುಗಳು ಅನ್ಯರಿಗೆ ತಿಳಿಯುವಂಥ ಘಟನೆ ನಡೆಯಬಹುದು. ಇತರ ಯೋಚನೆಗಳ ನಡುವೆ ಮಾಡುವ ಕೆಲಸದಲ್ಲಿ ಹೆಚ್ಚಿನ ಗಮನವಿಲ್ಲದಿದ್ದರೆ ದಂಡತೆತ್ತುವಂತಾಗಲಿದೆ.

ವೃಶ್ಚಿಕ: ಸ್ವಸಾಮರ್ಥ್ಯವನ್ನು ಉತ್ತಮ ರೀತಿಯಲ್ಲಿ ಪ್ರದರ್ಶಿಸಿದಲ್ಲಿ, ಹುದ್ದೆಯನ್ನು ಭದ್ರಗೊಳಿಸಿಕೊಳ್ಳಬಹುದು. ಮೇಲಧಿಕಾರಿಗಳ ಗಮನಸೆಳೆಯಬಹುದು. ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು.

ಧನು: ವ್ಯಾಪಾರದಲ್ಲಿ ಹಿಂದೆ ನೀವು ತೆಗೆದುಕೊಂಡಿದ್ದ ನಿರ್ಧಾರ ಸರಿಯಾದುದೆಂದು ಮನವರಿಕೆಯಾಗುವುದು. ಆಹಾರದಲ್ಲಿ ವಿಷದ ಅಂಶವು ಸೇರಿ ಆರೋಗ್ಯ ಹದಗೆಡುವ ಸಾಧ್ಯತೆಯಿದೆ. ಕೆಲಸಗಳಿಗೆ ವಿಘ್ನ ಕಾಡಲಿದೆ.

ಮಕರ: ಕುಟುಂಬಕ್ಕೆ ಸಂಬಂಧಪಟ್ಟ ಮಹತ್ವದ ವಿಷಯಗಳನ್ನು ಗಂಭೀರವಾಗಿ ಚಿಂತಿಸಿ ನಿರ್ಧರಿಸುವುದು ಉತ್ತಮ. ಪರಿಸ್ಥಿತಿಗೆ ತಕ್ಕಂತೆ ಬದಲಾಗುವ ಮನೋಭಾವ ಉತ್ಕಟವಾದ ಸ್ನೇಹಕ್ಕೆ ಅಡ್ಡಿಮಾಡಲಿದೆ.

ಕುಂಭ: ಮನೆಯ ಪತ್ರ ಅಥವಾ ಕಂದಾಯ ಇಲಾಖೆಯ ವ್ಯವಹಾರದಲ್ಲಿ ಸಂಕಷ್ಟದ ಪರಿಸ್ಥಿತಿ ಎದುರಾಗಲಿದೆ. ತಾಂತ್ರಿಕ ಕ್ಷೇತ್ರದಲ್ಲಿ ಗುರಿ ಮುಟ್ಟುವ ಗಣನೀಯ ಸಾಧನೆ ತೋರಿ ಪ್ರಶಸ್ತಿ ಪುರಸ್ಕಾರಗಳಿಗೆ ಪಾತ್ರರಾಗುವಿರಿ.

ಮೀನ: ಕೌಟುಂಬಿಕ ಅಭಿವೃದ್ಧಿಯಂಥ ವಿಷಯಗಳಿಂದ ಬಹಳ ಖುಷಿ ಸಿಗುವುದು. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭವು ಒದಗಿ ಬರಲಿದೆ. ಯಂತ್ರೋಪಕರಣಗಳ ಮಾರಾಟದಿಂದ ಲಾಭ ಇರಲಿದೆ.

ಪದಬಂಧ 5818


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಅಧ್ಯಾಯ ಕಲಿಸಿಕೊಟ್ಟ ಪ್ರಾಧ್ಯಾಪಕ (4)
3.ಒಳ್ಳೆಯ ಮಾತು (4)
5.ಸವಿಯಾದುದು ಮರದೊಳಗಿದೆಯಲ್ಲಾ! (3)
7.ಮದುಮಗನ ಜೊತೆಯಿರುವ ಸುತ (2)
8.ನಮ್ಮೂರಲ್ಲಿ ಕಾಣಿಸಿದ ಮನುಷ್ಯ (2)
10.ಇಣುಕುತ್ತಿರುವ ಅಳಿಲು (3)
12.ಕರ ಕೊನೆಗಿಟ್ಟಾಗ ಗುಂಪು ಕಾಣಿಸಿತಲ್ಲಾ (3)
14.ಜಾಮಿತಿಯಲ್ಲಿನ ಎಲ್ಲೆ (2)
16.ಅಕ್ಷರದಲ್ಲಿಯೇ ನಶ್ವರವಾದುದು ಬಂದಿದೆ (2)
17.ಸ್ಲೇಟಿನ ಮೇಲೆ ಬರೆಯುವ ಸಾಧನ (3)
19.ಕಲೆಯೊಳಗಿರುವ ಆಹ್ವಾನ (4)
20.ಹಣ್ಣಿನಿಂದ ಮಾಡಿರುವ ಖಾದ್ಯ (4)

ಮೇಲಿಂದ ಕೆಳಕ್ಕೆ

1.ಮರ್ಯಾದೆಯಿಟ್ಟು ಮಾಡಿರುವ ಹೋಲಿಕೆ (4)
2.ನಿಯಮದಂತೆ ಬಂದಿರುವ ಮೃತ್ಯು ದೇವತೆ (2)
3.ಅಸುರನ ಹತ್ತಿರ ಕಾಣಿಸಿರುವ ದೇವತೆ (2)
4.ಲೆಕ್ಕ ಶಾಸ್ತ್ರವಿಲ್ಲಿ ಉಲ್ಟಾ ಕಾಣುತ್ತಿದೆ (3)
6.ಹೊಣೆಯನ್ನು ಹೊತ್ತಿರುವವನು (3)
7.ಮರಳುಗಾಡನ್ನು ಹೀಗೂ ಕರೆವರು (4)
9.ರತ್ನಗಳ ಆಶ್ರಯ ಸ್ಥಾನ (4)
10.ಮಂಜಿನ ಹನಿ ಇಲ್ಲಿದೆ (3)
11.ಚಿರದಲ್ಲಿ ಚಿತ್ರ! (3)
13.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ (3)
15.ಕಾಣದಂತೆ ಅಡಗಿಸಿಡುವುದು (4)
16.ಕ್ಷಣಕಾಲ ಮಾತ್ರ ಇರುವಂಥದ್ದು (3)
17.ಅಬಲೆ ಬೀಸಿದ ಗಾಳ (2)
18.ವಿರೋಧದ ವಿರುದ್ಧ ಪದ (2)



5817ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಪಡುವಣ 6.ಜಾತವೇದ
7.ಸಮಾಸ 9.ಹುದ್ದರಿ
10.ತದೇಕಚಿತ್ತ 11.ನಿರ್ಯಾತ
12.ರಿಕಾಪು 16.ಕುವಿಚಾರ
17.ಮಾತಾಮಹಿ

ಮೇಲಿಂದ ಕೆಳಕ್ಕೆ:
1.ಉಪನ್ಯಾಸ 2.ಹಣತೆ
3.ಅಜಾರಿ 4.ಮದಕರಿ
8.ಸತತ 9.ಹುತ್ತರಿ
11.ನಿರಂಕುಶ 13.ಪುರೋಹಿತ
14.ಒರತೆ 15.ಗುಮಾನಿ

ಸುಡೊಕು 6203

7	9			3			6	
4		5			7		2	9
	8	3		9		1		7
		4			9		8	
	2			5				3
8			2				4	
	4			2		8		
			9					5
2		8		7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6202 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಎಸ್‌ಬಿಐ ಅಧ್ಯಕ್ಷ ಸಿ.ಎಸ್. ಸೆಟ್ಟಿ ಹೇಳಿಕೆ

ಠೇವಣಿ ಆಕರ್ಷಣೆಗೆ ಯೋಜನೆ



ಸಿ.ಎಸ್. ಸೆಟ್ಟಿ

ನವದೆಹಲಿ (ಪಿಟಿಐ): ಠೇವಣಿದಾರರನ್ನು ಆಕರ್ಷಿಸುವ ಸಂಬಂಧ ಹೊಸ ಯೋಜನೆ ರೂಪಿಸಲು ಚಿಂತನೆ ನಡೆಸಲಾಗಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಅಧ್ಯಕ್ಷ ಸಿ.ಎಸ್. ಸೆಟ್ಟಿ ತಿಳಿಸಿದ್ದಾರೆ.

ನಿಶ್ಚಿತ ಠೇವಣಿ (ಆರ್.ಡಿ) ಮತ್ತು ವ್ಯವಸ್ಥಿತ ಹೂಡಿಕೆ (ಎಸ್‌ಐಪಿ) ಸಂಯೋಜಿತ ಹೊಸ ಯೋಜನೆ ರೂಪಿಸಲು ಸಿದ್ಧತೆ ನಡೆದಿದೆ ಎಂದು ತಿಳಿಸಿದ್ದಾರೆ.

ಗ್ರಾಹಕರಿಗೆ ಹಣಕಾಸಿನ ವ್ಯವಹಾರದ ಬಗ್ಗೆ ಹೆಚ್ಚಿನ ತಿಳಿವಳಿಕೆ ಇದೆ. ಇದಕ್ಕೆ ಪೂರಕವಾಗಿ ಬ್ಯಾಂಕ್ ಕೂಡ ಮಾಡಿಸುತ್ತಿದೆ. ಹಾಗಾಗಿ, ನಾವು ಹೊಸ ಹೂಡಿಕೆಯ ವಿಧಾನ ಅನುಸರಿಸುವತ್ತ ದೃಷ್ಟಿ ಹರಿಸಿದ್ದೇವೆ ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಆರ್ಥಿಕ ಸಾಕ್ಷರತೆ ಹೆಚ್ಚಾದಂತೆ ಗ್ರಾಹಕರು ಬ್ಯಾಂಕ್‌ನಿಂದ ದೊರೆಯುವ ಪ್ರಯೋಜನಗಳತ್ತ ಎದುರು ನೋಡುತ್ತಾರೆ. ಯಾರೊಬ್ಬರು ಅಪಾಯಕ್ಕೆ ಸಿಲುಕುವ ಸ್ವತ್ತಿನಲ್ಲಿ ಹೂಡಿಕೆಗೆ ಇಚ್ಛಿಸುವುದಿಲ್ಲ. ಗ್ರಾಹಕರಿಗೆ ಇಷ್ಟವಾಗುವಂತಹ ಯೋಜನೆಗಳನ್ನೇ ನಾವು ರೂಪಿಸುತ್ತೇವೆ ಎಂದು ತಿಳಿಸಿದ್ದಾರೆ.

ಠೇವಣಿ ಸಂಗ್ರಹ ಹೆಚ್ಚಳಕ್ಕೆ ಸಾಂಪ್ರದಾಯಿಕ ವಿಧಾನ ಅನುಸರಿಸಲು ಮುಂದಾಗಿದ್ದೇವೆ. ಇದರಲ್ಲಿಯೇ ಕೆಲವು ಬದಲಾವಣೆ ತರಲಾಗುವುದು. ಸ್ಥಿರ ಠೇವಣಿ/ ನಿಶ್ಚಿತ ಠೇವಣಿ ಹಾಗೂ ಎಸ್‌ಐಪಿ ಸಂಯೋಜಿತ ಯೋಜನೆ ಜಾರಿಗೊಳಿಸಲಾಗುವುದು. ಗ್ರಾಹಕರಿಗೆ ಡಿಜಿಟಲ್ ಮೂಲಕ ಪಾವತಿಗೂ ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದ್ದಾರೆ.

ಹೊಸ ತಲೆಮಾರಿನ ಜನರಲ್ಲೂ ಠೇವಣಿ ಯೋಜನೆಗಳನ್ನು ಜನಪ್ರಿಯಗೊಳಿಸಲು ಬ್ಯಾಂಕ್ ತೀರ್ಮಾನಿಸಿದೆ. ಠೇವಣಿ ಸಂಗ್ರಹ ಹೆಚ್ಚಳಕ್ಕೆ ಬೃಹತ್ ಪ್ರಚಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

'ಜಿಡಿಪಿಗೆ ತಕ್ಕಂತೆ ಉದ್ಯೋಗ ಸೃಷ್ಟಿ ಇಲ್ಲ'



ರಘುರಾಮ್ ರಾಜನ್

'ಭಾರತದ ಜಿಡಿಪಿ ಶೇ 7ರಷ್ಟು ಬೆಳವಣಿಗೆಯಾಗುತ್ತಿದೆ. ಆದರೆ, ಇದಕ್ಕೆ ತಕ್ಕಂತೆ ಹೊಸ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ. ರಾಜ್ಯಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸಲ್ಲಿಕೆಯಾಗುವ ಅರ್ಜಿಗಳ ಸಂಖ್ಯೆಯನ್ನು ಅವಲೋಕಿಸಿದರೆ ಈ ಸಂಗತಿ ವೇದ್ಯವಾಗುತ್ತದೆ' ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ರಘುರಾಮ್ ರಾಜನ್ ಹೇಳಿದ್ದಾರೆ.

'ಕೇಂದ್ರ ಸರ್ಕಾರವು ಕಾರ್ಮಿಕರ ಸಂಖ್ಯೆಯನ್ನು ಹೆಚ್ಚು ಬೇಡುವ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡಬೇಕಿದೆ. ಆ ಮೂಲಕ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕಿದೆ' ಎಂದು ಹೇಳಿದ್ದಾರೆ.

'ದೇಶದಲ್ಲಿ ಉನ್ನತ ಸ್ತರದಲ್ಲಿ ಇರುವವರ ಆದಾಯ ಹೆಚ್ಚಿದೆ. ಹಾಗಾಗಿ, ಅವರ ಬದುಕು ಸುಖಕರವಾಗಿದೆ. ಆದರೆ, ದೇಶದ ಅರ್ಧದಷ್ಟು ಜನರ ದಿನಬಳಕೆಯ ವೆಚ್ಚವು ಕೋವಿಡ್ ಪೂರ್ವದ ಮಟ್ಟದಲ್ಲಿದ್ದ ಸ್ಥಿತಿಗೆ ಇನ್ನೂ ತಲುಪಿಲ್ಲ' ಎಂದು ತಿಳಿಸಿದ್ದಾರೆ.

'ದೇಶದ ಜಿಡಿಪಿ ಬೆಳವಣಿಗೆಗೆ ತಕ್ಕಂತೆ ಸಾಕಷ್ಟು ಉದ್ಯೋಗಗಳು ಸೃಷ್ಟಿಯಾಗುತ್ತಿವೆ ಎಂದು ನಾವು ಭಾವಿಸಿದ್ದೇವೆ. ಆದರೆ, ತಯಾರಿಕಾ ವಲಯದಲ್ಲಿ ಬಂಡವಾಳ ಹೂಡಿಕೆ ಹೆಚ್ಚುತ್ತಿದೆ. ಆದರೆ, ಅಲ್ಲಿ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ' ಎಂದು ಹೇಳಿದ್ದಾರೆ.

ಸರಕುಗಳು, ಯಂತ್ರೋಪಕರಣಗಳಿಗೆ ಹೆಚ್ಚು ಬಂಡವಾಳ ಹೂಡಿಕೆಯಾಗುತ್ತಿದ್ದು ಕೈಗಾರಿಕೆಗಳ ಬೆಳವಣಿಗೆ ಹೆಚ್ಚುತ್ತಿದೆ. ಆದರೆ, ಕಾರ್ಮಿಕರ ಸಂಖ್ಯೆಯನ್ನು ಹೆಚ್ಚು ಬೇಡುವ ಕೈಗಾರಿಕೆಗಳ ಬೆಳವಣಿಗೆ ಕಾಣುತ್ತಿಲ್ಲ ಎಂದಿದ್ದಾರೆ.

ಪಂಜಾಬ್‌ನಿಂದ 40 ಲಕ್ಷ ಟನ್ ಅಕ್ಕಿ ಖರೀದಿ: ಕೇಂದ್ರ

ಚಂಡೀಗಢ (ಪಿಟಿಐ): 2024–25ರ ಮುಂಗಾರು ಮಾರುಕಟ್ಟೆ ಋತುವಿನಲ್ಲಿ ಪಂಜಾಬ್‌ನಿಂದ 40 ಲಕ್ಷ ಟನ್ ಅಕ್ಕಿ ಖರೀದಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

'ಅಕ್ಕಿ ಖರೀದಿ ಮಾಡುವಂತೆ ರಾಜ್ಯದಿಂದ ಕೇಂದ್ರಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು. ಡಿಸೆಂಬರ್‌ನೊಳಗೆ ಇಷ್ಟು ಪ್ರಮಾಣದ ಅಕ್ಕಿ ಖರೀದಿ ಮಾಡುವ ಬಗ್ಗೆ ಕೇಂದ್ರವು ಪತ್ರದ ಮೂಲಕ ಲಿಖಿತ ಭರವಸೆ ನೀಡಿದೆ' ಎಂದು ಪಂಜಾಬ್‌ನ ಆಹಾರ ಇಲಾಖೆಯ ಕಾರ್ಯದರ್ಶಿ ವಿಕಾಸ್ ಗಾರ್ಗ್ ಮಾಹಿತಿ ನೀಡಿದ್ದಾರೆ.

ಬೆಂಗಳೂರು: ಮನೆಗಳ ಬೆಲೆ ಶೇ 29ರಷ್ಟು ಏರಿಕೆ– ಅನರಾಕ್



ನವದೆಹಲಿ (ಪಿಟಿಐ): ಬೆಂಗಳೂರು ಮತ್ತು ದೆಹಲಿಯಲ್ಲಿ ಮನೆಗಳ ಬೆಲೆಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಸರಾಸರಿ ಶೇ 29ರಷ್ಟು ಏರಿಕೆಯಾಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಭಾನುವಾರ ತಿಳಿಸಿದೆ.

ಬೇಡಿಕೆ ಹೆಚ್ಚಳ, ನಿರ್ಮಾಣ ವೆಚ್ಚ ಮತ್ತು ಐಷಾರಾಮಿ ಮನೆಗಳ ಬೇಡಿಕೆಯಿಂದಾಗಿ ಬೆಲೆ ಏರಿಕೆಯಾಗಿದೆ. ಆದರೆ, ಇದೇ ಅವಧಿಯಲ್ಲಿ ಬೆಂಗಳೂರು ಮತ್ತು ದೆಹಲಿಯಲ್ಲಿ ಮನೆಗಳ ಮಾರಾಟವು ಕ್ರಮವಾಗಿ ಶೇ 8 ಮತ್ತು ಶೇ 2ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬೆಂಗಳೂರಲ್ಲಿ ಪ್ರತಿ ಚದರ ಅಡಿ ಬೆಲೆ ₹6,275 ಇತ್ತು. ಪ್ರಸಕ್ತ ಅವಧಿಯಲ್ಲಿ ₹8,100ಕ್ಕೆ ಮುಟ್ಟಿದೆ. ದೆಹಲಿಯಲ್ಲಿ ₹7,200ಕ್ಕೆ ಹೆಚ್ಚಳವಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹5,570 ಇತ್ತು.

ಹೈದರಾಬಾದ್‌ನಲ್ಲಿ ಶೇ 32, ಮುಂಬೈ ಶೇ 24, ಪುಣೆ ಮತ್ತು ಚೆನ್ನೈ ಶೇ 16, ಕೋಲ್ಕತ್ತದಲ್ಲಿ ಮನೆಗಳ ಬೆಲೆ ಶೇ 14ರಷ್ಟು ಏರಿಕೆಯಾಗಿದೆ.

ಈ ಏಳು ನಗರಗಳಲ್ಲಿ ಮನೆಗಳ ಬೆಲೆಯು ವಾರ್ಷಿಕ ಸರಾಸರಿ ಶೇ 23ರಷ್ಟು ಏರಿಕೆಯಾಗಿದೆ. ಒಟ್ಟು 1.20 ಲಕ್ಷ ಮನೆಗಳು ಮಾರಾಟವಾಗಿವೆ. ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 11ರಷ್ಟು ಇಳಿಕೆಯಾಗಿದೆ ಎಂದು ವಿವರಿಸಿದೆ.

ಹೂಡಿಕೆ ಹೆಸರಲ್ಲಿ ವಂಚನೆ ಹೇಗೆ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಆನ್‌ಲೈನ್ ಸ್ಟಾಕ್ ಟ್ರೇಡಿಂಗ್ ಹೆಸರಿನಲ್ಲಿ ₹2,200 ಕೋಟಿ ವಂಚಿಸಿದ ಆರೋಪದ ಮೇಲೆ ಸೆಪ್ಟೆಂಬರ್‌ನ ಆರಂಭದಲ್ಲಿ ಅಸ್ಸಾಂನಲ್ಲಿ 38 ಜನರನ್ನು ಬಂಧಿಸಲಾಯಿತು. ಅದಕ್ಕೂ ಮೊದಲು ಆಗಸ್ಟ್‌ನಲ್ಲಿ ಅಸ್ಸಾಂ ಪೊಲೀಸರು, ₹7,000 ಕೋಟಿ ಮೌಲ್ಯದ ಸ್ಟಾಕ್ ಟ್ರೇಡಿಂಗ್ ವಂಚನೆ ಪ್ರಕರಣವನ್ನು ಬಯಲಿಗೆಳೆದಿದ್ದರು. ಮೈಸೂರಿನಲ್ಲಿ ನಕಲಿ ಟ್ರೇಡಿಂಗ್ ಆ್ಯಪ್‌ಗಳಿಂದ ₹32 ಕೋಟಿ ಮೊತ್ತದ ವಂಚನೆಯಾಗಿರುವುದು ಆಗಸ್ಟ್‌ನ ಕೊನೆಯಲ್ಲಿ ಬೆಳಕಿಗೆ ಬಂದಿತ್ತು.

ಹೌದು, ಭಾರತದಲ್ಲಿ ಹಾಗೂ ಜಾಗತಿಕವಾಗಿ ಸ್ಟಾಕ್ ಮಾರ್ಕೆಟ್ ಟ್ರೇಡಿಂಗ್ ಹೆಸರಿನಲ್ಲಿ ಮೋಸ ಮಾಡುವ ಪ್ರಕರಣಗಳು ಗಣನೀಯವಾಗಿ ಏರಿಕೆಯಾಗುತ್ತಿವೆ. ಕಳೆದ 6 ವರ್ಷದ ಅಂಕಿ-ಅಂಶವನ್ನು ಅವಲೋಕಿಸಿದರೆ ಹಣಕಾಸಿಗೆ ಸಂಬಂಧಿಸಿದ ವಂಚನೆಗಳು ಗರಿಷ್ಠ ಮಟ್ಟದಲ್ಲಿವೆ.

'ಇಂಡಿಯನ್ ಸೈಬರ್ ಕ್ರೈಮ್ ಕೋ ಆರ್ಡಿನೇಷನ್ ಸೆಂಟರ್'ನ ಮಾಹಿತಿ ಪ್ರಕಾರ ಪ್ರಸಕ್ತ ವರ್ಷದ ಜನವರಿಯಿಂದ ಏಪ್ರಿಲ್ ಅವಧಿಯಲ್ಲಿ ಸೈಬರ್ ವಂಚನೆಗಳಿಂದ ಒಟ್ಟಾರೆ ಸುಮಾರು ₹1,750 ಕೋಟಿ ಕಳೆದುಕೊಂಡಿದ್ದಾರೆ. ಈ ಪೈಕಿ ಶೇ 80ರಷ್ಟು ವಂಚನೆಗಳು ಹಣಕಾಸಿಗೆ ಸಂಬಂಧಿಸಿದ ಅಪರಾಧಗಳಾಗಿವೆ. ವಂಚಕರು ಹೊಸ ತಂತ್ರ ಬಳಸಿ ಜನರ ದುಡ್ಡಿಗೆ ಕನ್ನ ಹಾಕುತ್ತಿದ್ದಾರೆ.

ಡಿಜಿಟಲ್ ಮಾಧ್ಯಮಗಳನ್ನು ಮುಂದಿಟ್ಟುಕೊಂಡು ಮೋಸ ಮಾಡುವ ಜಾಲ ಈಗ ದೊಡ್ಡ ಮಟ್ಟದಲ್ಲಿ ವಿಸ್ತರಿಸಿಕೊಂಡಿದೆ. ವಾಟ್ಸ್‌ಆ್ಯಪ್, ಫೇಸ್‌ಬುಕ್, ಟೆಲಿಗ್ರಾಂ, ಇನ್‌ಸ್ಟಾಗ್ರಾಂ ವೇದಿಕೆಗಳನ್ನು ಕದೀಮರು ಗಾಳವಾಗಿ ಬಳಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಿಮ್ಮ ಹಣ ಮತ್ತು ಹೂಡಿಕೆಯನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವುದು ಹೇಗೆ ಎನ್ನುವುದನ್ನು ತಿಳಿಯೋಣ ಬನ್ನಿ.

ಹೂಡಿಕೆ ವಂಚನೆ ಹೇಗೆ ನಡೆಯುತ್ತದೆ?: ಡಿಜಿಟಲ್ ಮಾಧ್ಯಮಗಳ ಮೂಲಕ 'ಪಿಗ್ ಬುಚ್ಚರಿಂಗ್' ಅನ್ನೋ ವಂಚನೆ ಈಗ ಚಾಲ್ತಿಯಲ್ಲಿದೆ. ಪಿಗ್ ಬುಚ್ಚರಿಂಗ್ ಎಂದರೆ ನಂಬಿಸಿ ಮೋಸ ಮಾಡುವ ಜಾಲ. ಇಲ್ಲಿ ವಂಚಕರ ಜಾಲಕ್ಕೆ ಬಿದ್ದು ಮೋಸ ಹೋಗುವವರನ್ನು 'ಪಿಗ್' ಎಂದು ಕರೆಯಲಾಗುತ್ತದೆ.

ಈ ವಂಚನೆ ಹಲವು ಹಂತಗಳಲ್ಲಿ ನಡೆಯುತ್ತದೆ. ಬೇಗ ಶ್ರೀಮಂತರಾಗಬೇಕು. ಸುಲಭವಾಗಿ ಹೆಚ್ಚು ಹಣ ಗಳಿಸಬೇಕು ಎನ್ನುವ ಮನಸ್ಥಿತಿ ಇರುವವರನ್ನು ಹುಡುಕಿ ಅವರಲ್ಲಿ ನಂಬಿಕೆ ಬರುವಂತೆ ನಡೆದುಕೊಂಡು ನಂತರ ವ್ಯವಸ್ಥಿತವಾಗಿ ವಂಚನೆ ಮಾಡುವ ತಂತ್ರಗಾರಿಕೆ ಇಲ್ಲಿ ಕೆಲಸ ಮಾಡುತ್ತದೆ. ಫೇಸ್‌ಬುಕ್, ವಾಟ್ಸ್‌ಆ್ಯಪ್ ಅಥವಾ ಇನ್‌ಸ್ಟಾಗ್ರಾಂನಲ್ಲಿ ದೊಡ್ಡ ಸ್ಟಾಕ್ ಬ್ರೋಕಿಂಗ್ ಕಂಪನಿಯ ಹೆಸರಿನಲ್ಲಿ, ಖ್ಯಾತ ಹಣಕಾಸು ಸಲಹೆಗಾರರ ಹೆಸರಿನಲ್ಲಿ ಹಣಕಾಸು ಸಲಹೆಗಳು ಹರಿದಾಡುವುದನ್ನು ನೋಡಿರಬಹುದು.

ಈ ಷೇರು ಶೇ 30ರಷ್ಟು ಏರಿಕೆ ಆಗುತ್ತದೆ. ಆ ಮ್ಯೂಚುವಲ್ ಫಂಡ್ ಶೇ 25ರಷ್ಟು ಗಳಿಕೆ ಒದಗಿಸುತ್ತದೆ. ಕೂಡಲೇ, ಈ ಮೊಬೈಲ್ ನಂಬರ್‌ನ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರಿ ಎಂಬಿತ್ಯಾದಿ ಜಾಹೀರಾತುಗಳನ್ನು ಗಮನಿಸಿರುತ್ತೀರಿ.

ಅಸಲಿಗೆ ಈ ಜಾಹೀರಾತುಗಳು, ಸೋಷಿಯಲ್ ಮೀಡಿಯಾ ಪ್ರೊಫೈಲ್‌ಗಳನ್ನು ನಿರ್ವಹಿಸುವ ಕಂಪನಿಗಳಾಗಲಿ, ಹಣಕಾಸು ಸಲಹೆಗಾರರಾಗಲಿ ನೀಡಿರುವುದು ಇಲ್ಲ. ಖ್ಯಾತನಾಮ ಬ್ರೋಕಿಂಗ್ ಕಂಪನಿಗಳ ಮತ್ತು ಹಣಕಾಸು ಸಲಹೆಗಾರರ ಹೆಸರು ಬಳಸಿಕೊಂಡು ವಂಚಕರು ಮೋಸ ಮಾಡಲು ಗಾಳ ಹಾಕಿರುತ್ತಾರೆ.

ಹೆಸರಾಂತ ವ್ಯಕ್ತಿಗಳು, ಕಂಪನಿಗಳ ಸೋಗಿನಲ್ಲಿ ಹೋದಾಗ ನಂಬಿಕೆ ಗಳಿಸಿಕೊಳ್ಳುವುದು ಸುಲಭ ಎನ್ನುವುದು ವಂಚಕರ ಲೆಕ್ಕಾಚಾರ. ಒಮ್ಮೆ ಆ ಜಾಹೀರಾತಿನ ಲಿಂಕ್ ಮೇಲೆ ಕ್ಲಿಕ್ ಮಾಡುತ್ತಿದ್ದಂತೆ ನಿಮ್ಮನ್ನು ವಾಟ್ಸ್‌ಆ್ಯಪ್ ಅಥವಾ ಟೆಲಿಗ್ರಾಂ ಗ್ರೂಪ್‌ಗೆ ಸೇರಿಸಲಾಗುತ್ತದೆ. ಗ್ರೂಪ್‌ಗೆ ಸೇರಿಸಿದ ಮೇಲೆ ನಿಮಗೆ ನಂಬಿಕೆ ಹುಟ್ಟಿಸುವಂತಹ ವ್ಯವಸ್ಥಿತ ಪ್ರಯತ್ನ ಹಂತ ಹಂತವಾಗಿ ಜರುಗುತ್ತದೆ. ಗ್ರೂಪ್‌ಗೆ ಸೇರಿದ ವ್ಯಕ್ತಿಗೆ ವಿಶ್ವಾಸ ಬರುವಂತೆ ಮಾಡಲು ವಂಚಕರು ವಾರಗಟ್ಟಲೆ, ತಿಂಗಳುಗಟ್ಟಲೆ ಪ್ರಯತ್ನಿಸುತ್ತಾರೆ.

ನಿಮಗೂ ಆತನ ಮೇಲೆ ವಿಶ್ವಾಸ ಮೂಡಿದೆ ಅನಿಸಿದ ಮೇಲೆ ಆತ ನಿಮಗೆ ಹೂಡಿಕೆ ಅವಕಾಶವೊಂದರ ಬಗ್ಗೆ ತಿಳಿಸುತ್ತಾನೆ. ನಮ್ಮ ಬಳಿ ಇನ್‌ಸೈಡರ್ ಟ್ರೇಡಿಂಗ್ ಸಲಹೆ ಇವೆ. ಈ ಷೇರಿನಲ್ಲಿ ಹಣ ಹಾಕಿದರೆ ಪಕ್ಕಾ ಶೇ 40ರಷ್ಟು ಲಾಭ ಸಿಗಲಿದೆ ಎಂದು ತಿಳಿಸುತ್ತಾರೆ.

ಗಳಿಕೆಯ ಬಗ್ಗೆ ನಂಬಿಕೆ ಬರುವಂತೆ ಮಾಡಲು ವಾಟ್ಸ್‌ಆ್ಯಪ್‌ಗೆ ತಮ್ಮ ಹೂಡಿಕೆ ಪೋರ್ಟ್ ಫೋಲಿಯೊದ ಸ್ಕ್ರೀನ್ ಶಾಟ್ ಹಾಕುತ್ತಾರೆ. ಇದರ ಜೊತೆ ಜೊತೆಗೆ ಗ್ರೂಪ್‌ನಲ್ಲಿರುವ ಇನ್ನಿತರ ವಂಚಕರು ಮುಂದೆ ಬರುವ ಈ ಷೇರಿನಲ್ಲಿ ಶೇ 35ರಷ್ಟು ಲಾಭ ಪಕ್ಕಾ, ಖಂಡಿತ ಈ ಷೇರು ಖರೀದಿ ತಪ್ಪಿಸಬಾರದು. ಬರುವ ತಿಂಗಳು ಜರುಗುವ ಐಪಿಒವೊಂದರಲ್ಲಿ ಹೂಡಿದರೆ ಶೇ 100ರಷ್ಟು ಲಿಸ್ಟಿಂಗ್ ಗೇನ್ಸ್ ಗ್ಯಾರಂಟಿ ಎಂಬಿತ್ಯಾದಿ ಸಂಭಾಷಣೆ ನಡೆಸುತ್ತಾರೆ.

ಗ್ರೂಪ್‌ಗೆ ಸೇರಿರುವವರನ್ನು ಹೂಡುವಂತೆ ಪ್ರೇರೇಪಿಸುತ್ತಾರೆ. ಈ ಅವಕಾಶ ಮುಂದೆಂದೂ ಸಿಗುವುದಿಲ್ಲ ಎಂಬ ಭ್ರಮೆ ಹುಟ್ಟಿಸುತ್ತಾರೆ. ಹೂಡಿಕೆ ಮಾಡಲು ನೀವು ತಯಾರಿದ್ದೀರಿ ಎಂದು ತಿಳಿದ ತಕ್ಷಣ ಹಣ ಪಾವತಿಸುವ ಲಿಂಕ್ ಕಳುಹಿಸುತ್ತಾರೆ. ಹಣ ಹೂಡಿಕೆ ಮಾಡಿದ ಕೆಲ ದಿನಗಳ ಬಳಿಕ ನಿಮ್ಮ ಪೋರ್ಟ್ ಫೋಲಿಯೊ ಉತ್ತಮ ಲಾಭ ಗಳಿಸಿದೆ ಎಂದು ತೋರಿಸುತ್ತಾರೆ. ನಂಬಿಕೆ ಬರುವಂತೆ ಮಾಡಲು ಲಾಭ ಎಂದು ಹೇಳಿಕೊಂಡು ಒಂದಷ್ಟು ಮೊತ್ತವನ್ನು ನಿಮಗೆ ಕೊಡುತ್ತಾರೆ. ಲಾಭ ಸಿಕ್ಕಿದ ಕೂಡಲೇ ನಿಮಗೆ ನಂಬಿಕೆ ಹೆಚ್ಚಾಗುತ್ತದೆ. ಆಗ ದೊಡ್ಡ ಮೊತ್ತವನ್ನು ನೀವು ಹೂಡಿಕೆ ಮಾಡುತ್ತೀರಿ. ದೊಡ್ಡ ಮೊತ್ತ ಹೂಡಿಕೆ ಮಾಡುತ್ತಿದ್ದಂತೆ ಅವರು ನಿಮ್ಮ ಕೈಗೆ ಸಿಗುವುದಿಲ್ಲ. ನಾಪತ್ತೆಯಾಗುತ್ತಾರೆ.

ವಂಚನೆಯಿಂದ ಪಾರಾಗುವುದು ಹೇಗೆ?: ಯಾರಾದರೂ ಅಲ್ಪಕಾಲದಲ್ಲಿ ನಿಮಗೆ ಹಣ ದ್ವಿಗುಣ ಮಾಡಿಕೊಡುತ್ತೇವೆ. ಶೇ 30ರಷ್ಟು ಲಾಭಾಂಶ ಕೊಡುತ್ತೇವೆ ಎಂದು ಹೇಳಿದರೆ ಅವರನ್ನು ಅನುಮಾನದಿಂದಲೇ ನೋಡಬೇಕು. ವಂಚಕರು ಸಾಮಾನ್ಯವಾಗಿ ಮೋಸ ಮಾಡಲು ಬಳಸುವ ತಂತ್ರಗಾರಿಕೆಗಳು ಇವು. ಬ್ಯಾಂಕ್‌ನ ನಿಶ್ಚಿತ ಠೇವಣಿ/ ಸರ್ಕಾರದ ಗ್ಯಾರಂಟಿ ಇರುವ ಹೂಡಿಕೆಗಳಿಗಿಂತ ಯಾರಾದರೂ ಅತಿಯಾದ ಲಾಭಾಂಶವನ್ನು ನಿಮಗೆ ಒದಗಿಸಿಕೊಡುತ್ತೇವೆ ಎಂದು ಹೇಳಿದರೆ ಅದೊಂದು ಹಣ ವಂಚಿಸುವ ಜಾಲವಾಗಿರಬಹುದು ಹುಷಾರ್.

ಯಾವುದೋ ಗೊತ್ತಿಲ್ಲದ ವಾಟ್ಸ್‌ಆ್ಯಪ್ ನಿಂದ ಟ್ರೇಡಿಂಗ್ ಗುಂಪಿಗೆ ಸೇರುವಂತೆ ಲಿಂಕ್ ಬಂದರೆ ಬಹಳ ಎಚ್ಚರವಾಗಿರಿ. ಷೇರು ಹೂಡಿಕೆ ಮಾಡಲು ಸಾಕಷ್ಟು ಅಧ್ಯಯನ ಮತ್ತು ತಿಳಿವಳಿಕೆ ಬೇಕು. ಯಾರೋ ಏಕೆ ಉಚಿತವಾಗಿ ಟ್ರೇಡಿಂಗ್ ಸಲಹೆ ಕೊಟ್ಟು ನಿಮ್ಮನ್ನು ಶ್ರೀಮಂತರನ್ನಾಗಿ ಮಾಡುತ್ತಾರೆ ಅಲ್ಲವೇ? ಇನ್ನೂ ಸಾಮಾಜಿಕ ಜಾಲತಾಣಗಳಲ್ಲಿರುವ ಗೊತ್ತುಗುರಿಯಿಲ್ಲದ ಲಿಂಕ್‌ಗಳ ಮೇಲೆ ಕ್ಲಿಕ್ ಮಾಡಬೇಡಿ. ಕೆಲವು ಬಾರಿ ಗೊತ್ತಿಲ್ಲದೆ ಲಿಂಕ್ ಕ್ಲಿಕ್ ಮಾಡಿದಾಗ ನಕಲಿ ಅಪ್ಲಿಕೇಷನ್‌ಗಳು ನಿಮ್ಮ ಮೊಬೈಲ್‌ನ ಮಾಹಿತಿ ಕದಿಯುವ ಸಾಧ್ಯತೆ ಇರುತ್ತದೆ. ವಂಚಕರು ಸಾಮಾನ್ಯವಾಗಿ ತಮ್ಮ ವೈಯಕ್ತಿಕ ಖಾತೆಗೆ ಹಣ ಹಾಕುವಂತೆ ಮನವೊಲಿಸುವ ಪ್ರಯತ್ನ ಮಾಡುತ್ತಾರೆ. ಈ ಬಗ್ಗೆ ಜಾಗ್ರತೆವಹಿಸಿ.

ಮೋಸ ಹೋಗಿದ್ದರೆ ಏನು ಮಾಡಬೇಕು?: ಈಗಾಗಲೇ, ಇಂತಹ ವಂಚನೆಗಳಿಗೆ ಒಳಗಾಗಿದ್ದರೆ ಸೈಬರ್ ಪೊಲೀಸರಿಗೆ ಇಲ್ಲವೇ ಆರ್ಥಿಕ ಅಪರಾಧಗಳ ವಿಭಾಗಕ್ಕೆ ದೂರು ಕೊಡಿ. ಹಣಕಾಸಿನ ಅಪರಾಧ ಯಾವ ವ್ಯಾಪ್ತಿಗೆ ಬರುತ್ತದೆ ಎನ್ನುವುದನ್ನು ಅರಿತು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ), ಆರ್‌ಬಿಐಗೆ ದೂರು ಸಲ್ಲಿಸಿ. ಪೂರಕ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಗೆ ನೀಡಿ ತನಿಖೆಗೆ ಸಹಕರಿಸಿ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಸೆಪ್ಟೆಂಬರ್ ಕೊನೆಯಲ್ಲೂ ಜಿಗಿದ ಷೇರುಪೇಟೆ



ಸೆಪ್ಟೆಂಬರ್ 27ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. 85,571 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.22ರಷ್ಟು ಗಳಿಸಿಕೊಂಡಿದೆ. 26,178 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 1.5ರಷ್ಟು ಜಿಗಿದಿದೆ.

ಚೀನಾ ಆರ್ಥಿಕ ಪ್ರಗತಿಯ ನಿಗದಿತ ಗುರಿ ಮುಟ್ಟಲಿದೆ ಎಂಬ ವಿಶ್ವಾಸ, ಅಮೆರಿಕದ ಜಿಡಿಪಿ ದತ್ತಾಂಶ ಸೇರಿ ಹಲವು ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಎಫ್‌ಎಂಸಿಜಿ ಹೊರತುಪಡಿಸಿ ಇನ್ನುಳಿದ ಸೂಚ್ಯಂಕಗಳು ಜಿಗಿತ ಕಂಡಿವೆ. ಲೋಹ ವಲಯ ಶೇ 6.82, ಅನಿಲ ಮತ್ತು ತೈಲ ಶೇ 4.72, ವಾಹನ ಶೇ 4.51, ಎನರ್ಜಿ ಶೇ 3.88, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3.05, ಮಾಧ್ಯಮ ಶೇ 2.32, ಫಾರ್ಮಾ ಶೇ 2.29, ರಿಯಲ್ ಎಸ್ಟೇಟ್ ಶೇ 1.75, ಫೈನಾನ್ಸ್ ಶೇ 0.52, ಮಾಹಿತಿ ತಂತ್ರಜ್ಞಾನ ಶೇ 0.28 ಮತ್ತು ಬ್ಯಾಂಕ್ ಸೂಚ್ಯಂಕಗಳು ಶೇ 0.08ರಷ್ಟು ಗಳಿಸಿಕೊಂಡಿವೆ. ಎಫ್‌ಎಂಸಿಜಿ ವಲಯ ಶೇ 0.11ರಷ್ಟು ಕುಸಿದಿದೆ.

ಗಳಿಕೆ–ಇಳಿಕೆ: ನಿಫ್ಟಿಯಲ್ಲಿ ಬಿಪಿಸಿಎಲ್ ಶೇ 10.8, ಟಾಟಾ ಸ್ಟೀಲ್ ಶೇ 9.5, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 7.78, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 7.63, ಮಾರುತಿ ಸುಜುಕಿ ಶೇ 6.77, ಬಜಾಜ್ ಆಟೊ ಶೇ 5.8, ಕೋಲ್ ಇಂಡಿಯಾ ಶೇ 5.05, ಸನ್ ಫಾರ್ಮಾ ಶೇ 4.58, ಬಜಾಜ್ ಫಿನ್‌ಸರ್ವ್ ಶೇ 4.55 ಮತ್ತು ಅದಾನಿ ಎಂಟರ್ ಪ್ರೈಸಸ್ ಶೇ 4.08ರಷ್ಟು ಗಳಿಸಿಕೊಂಡಿವೆ.

ಎಲ್‌ಟಿಐ ಮೈಂಡ್ ಟ್ರೀ ಶೇ 3.72, ಐಸಿಐಸಿಐ ಬ್ಯಾಂಕ್ ಶೇ 2.52, ಎಲ್ ಆ್ಯಂಡ್ ಟಿ ಶೇ 2.36, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 1.73, ಟೆಕ್ ಮಹೀಂದ್ರ ಶೇ 1.27, ಟಾಟಾ ಕನ್ಸ್ಯೂಮರ್ ಶೇ 1.26, ಇಂಡಸ್‌ಇಂಡ್ ಬ್ಯಾಂಕ್ ಶೇ 1.16, ಹೀರೊ ಮೋಟೊಕಾರ್ಪ್ ಶೇ 0.99, ಹಿಂದುಸ್ತಾನ್ ಯುನಿಲಿವರ್ ಶೇ 0.21ರಷ್ಟು ಕುಸಿದಿವೆ.

ಮುನ್ನೋಟ: ಅಕ್ಟೋಬರ್ 7ರಿಂದ 9ರ ವರೆಗೆ ಆರ್‌ಬಿಐ ಹಣಕಾಸು ಸಮಿತಿ ಸಭೆ ನಡೆಯಲಿದೆ. ಬಡ್ಡಿದರ ಇಳಿಕೆ ಬಗ್ಗೆ ಆರ್‌ಬಿಐ ನಿಲುವೇನು ಎನ್ನುವ ಬಗ್ಗೆ ಈ ಸಭೆಯಲ್ಲಿ ಸ್ಪಷ್ಟತೆ ಸಿಗಲಿದೆ. ಉಳಿದಂತೆ ಅಕ್ಟೋಬರ್ 2ನೇ ವಾರದ ಬಳಿಕ ಕಂಪನಿಗಳ ಎರಡನೇ ತ್ರೈಮಾಸಿಕ ಸಾಧನೆಯ ವರದಿಗಳು ಬಿಡುಗಡೆಯಾಗಲಿದ್ದು, ಹೂಡಿಕೆದಾರರು ಅದರತ್ತ ದೃಷ್ಟಿ ಹರಿಸಿದ್ದಾರೆ. ಜಾಗತಿಕ ವಿದ್ಯಮಾನಗಳು ಮತ್ತು ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.



ರಷ್ಯಾ ನಡೆಸಿದ ಕ್ಷಿಪಣಿ ದಾಳಿಗೆ ಉಕ್ರೇನ್‌ನ ಝುಪೊರಿಝಿಯಾ ನಗರದ ಕಟ್ಟಡವೊಂದಕ್ಕೆ ಹಾನಿಯಾಗಿದೆ —ಎಎಫ್‌ಪಿ ಚಿತ್ರ

125 ಡ್ರೋನ್ ಹೊಡೆದುರುಳಿಸಿದ ರಷ್ಯಾ

ಕೀವ್ (ಎಪಿ): ರಷ್ಯಾ ಸೇನೆಯು ಭಾನುವಾರ ಉಕ್ರೇನ್‌ನ 125 ಡ್ರೋನ್‌ಗಳನ್ನು ಹೊಡೆದುರುಳಿಸಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಎರಡೂ ದೇಶಗಳ ನಡುವೆ ಯುದ್ಧ ಆರಂಭವಾದ ಬಳಿಕ (2022ರ ಫೆಬ್ರುವರಿ 22ರಂದು) ಒಂದೇ ದಿನ ಉಕ್ರೇನ್, ಇಷ್ಟು ದೊಡ್ಡ ಪ್ರಮಾಣದ ಡ್ರೋನ್ ದಾಳಿ ನಡೆಸಿದ್ದು ಇದೇ ಮೊದಲು.

'ರಷ್ಯಾದ ಏಳು ಪ್ರಾಂತ್ಯಗಳನ್ನು ಗುರಿಯಾಗಿಸಿ ಡ್ರೋನ್ ದಾಳಿ ನಡೆದಿದೆ. ವೊಲ್ಗೊಗ್ರಾಡ್ ಮೇಲೆ ಅತಿಹೆಚ್ಚು ಅಂದರೆ 67 ಡ್ರೋನ್‌ಗಳನ್ನು ಹಾರಿ ಬಿಡಲಾಗಿತ್ತು. ವೊರೊನೆಝ್ ಪ್ರಾಂತ್ಯದಲ್ಲಿ 17 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ. ಇಲ್ಲಿ ಡ್ರೋನ್‌ಗಳ ಅವಶೇಷ ಬಿದ್ದು ವಸತಿ ಸಮುಚ್ಚಯ ಹಾಗೂ ಒಂದು ಮನೆಗೆ ಹಾನಿಯಾಗಿದೆ' ಎಂದು ಮೂಲಗಳು ತಿಳಿಸಿವೆ.

'ರೊಸ್ಟೊವ್ ಪ್ರಾಂತ್ಯದ ಮೇಲೆ 18 ಡ್ರೋನ್‌ಗಳು ಹಾರಿಬಂದವು. ಡ್ರೋನ್ ಅವಶೇಷ ಬಿದ್ದಾಗ ಉಂಟಾದ ಬೆಂಕಿಯಿಂದ 20 ಹೆಕ್ಟೇರ್‌ನಷ್ಟು ಕಾಡು ನಾಶವಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಹೋರಾಟ ಮುಂದುವರಿಸಿದ್ದಾರೆ' ಎಂದು ಇಲ್ಲಿನ ಗವರ್ನರ್ ವಾಸಿಲಿ ಗೊಲುಬೆವ್ ಮಾಹಿತಿ ನೀಡಿದ್ದಾರೆ.

14 ಮಂದಿಗೆ ಗಾಯ: ದಕ್ಷಿಣ ಉಕ್ರೇನ್‌ನ ಝುಪೊರಿಝಿಯಾ ನಗರದ ಮೇಲೆ ರಷ್ಯಾ ಸೇನೆ ಶನಿವಾರ ರಾತ್ರಿಯಿಡೀ ಕ್ಷಿಪಣಿ ದಾಳಿ ನಡೆಸಿದ್ದು, 14 ಮಂದಿ ಗಾಯಗೊಂಡಿದ್ದಾರೆ.

'ಬಹುಮಹಡಿ ಕಟ್ಟಡಗಳು ಮತ್ತು ವಸತಿ ಸಮುಚ್ಚಯಗಳಿಗೆ ಹಾನಿ ಉಂಟಾಗಿದೆ. ರೈಲ್ವೆ ಮೂಲಸೌಕರ್ಯದ ಮೇಲೂ ದಾಳಿ ನಡೆದಿದ್ದು, ನಗರದಲ್ಲಿ ರೈಲು ಸಂಚಾರ ಸ್ಥಗಿತಗೊಂಡಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಠುವಾ: ಉಗ್ರನ ಹತ್ಯೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಠುವಾ ಜಿಲ್ಲೆಯ ಹಳ್ಳಿಯೊಂದರಲ್ಲಿ ಭಾನುವಾರ ನಡೆದ ಕಾರ್ಯಾಚರಣೆಯಲ್ಲಿ ಒಬ್ಬ ಉಗ್ರನನ್ನು ಹತ್ಯೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಭಾನುವಾರ ಮಧ್ಯಾಹ್ನ ಬಿಲ್ಲವರ ತಹಸಿಲ್‌ನ ಕೋಗ್-ಮಂಡಲಿಯಲ್ಲಿ ಪೊಲೀಸರು ಜೈಷೆ ಮೊಹಮ್ಮದ್ (ಜೆಇಎಂ) ಸಂಘಟನೆಗೆ ಸೇರಿದ ಉಗ್ರನನ್ನು ಎನ್‌ಕೌಂಟರ್ ಮಾಡಿದ್ದು, ಮೃತದೇಹವನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮೂರ್ನಾಲ್ಕು ವಿದೇಶಿ ಉಗ್ರರು ಇರುವ ಬಗ್ಗೆ ಮಾಹಿತಿ ದೊರೆತ ಕಾರಣ ಗ್ರಾಮದಲ್ಲಿ ಶನಿವಾರ ಕಾರ್ಯಾಚರಣೆ ಆರಂಭಿಸಲಾಗಿತ್ತು. ಜಂಟಿ ಭದ್ರತಾ ತಂಡದ ಮೇಲೆ ಉಗ್ರರು ಗುಂಡು ಹಾರಿಸಿದ್ದ ಪರಿಣಾಮ ಒಬ್ಬ ಪೊಲೀಸ್ ಅಧಿಕಾರಿ ಮೃತಪಟ್ಟಿದ್ದು, ಇಬ್ಬರು ಅಧಿಕಾರಿಗಳು ಗಾಯಗೊಂಡಿದ್ದಾರೆ' ಎಂದು ಜಮ್ಮು ವಲಯದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಆನಂದ್ ಜೈನ್ ಹೇಳಿದರು.

'ಮನೆಯೊಂದರಲ್ಲಿ ಉಗ್ರರು ಅಡಗಿರುವ ಮಾಹಿತಿ ಲಭ್ಯವಾಗಿದ್ದು, ಶೀಘ್ರವೇ ಅವರನ್ನು ಪತ್ತೆಹಚ್ಚುವ ಸಲುವಾಗಿ ಕಾರ್ಯಾಚರಣೆ ನಡೆಸುತ್ತಿದ್ದೇವೆ' ಎಂದು ಜೈನ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ರಜೌರಿಯಲ್ಲೂ ಎನ್‌ಕೌಂಟರ್: ರಜೌರಿ ಜಿಲ್ಲೆಯ ಥನಮಂಡಿ ಪ್ರದೇಶದಲ್ಲಿಯೂ ಭಾನುವಾರ ಸಂಜೆ ಭದ್ರತಾ ಸಿಬ್ಬಂದಿ ಎನ್‌ಕೌಂಟರ್ ನಡೆಸಿದ್ದಾರೆ.

ಎನ್‌ಕೌಂಟರ್‌ನಲ್ಲಿ ಎಷ್ಟು ಉಗ್ರರು ಹತರಾಗಿದ್ದಾರೆ ಎಂಬ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ.

ಐ.ಟಿ ಕಾಯ್ದೆ ಪರಾಮರ್ಶೆ ಸಲಹೆಗೆ ಆಹ್ವಾನ ನಿರೀಕ್ಷೆ



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ನೇರ ತೆರಿಗೆ ಕಾನೂನಿನ ಸರಳೀಕರಣಕ್ಕೆ ನಿರ್ಧರಿಸಿದೆ. ಹಾಗಾಗಿ, ಅಕ್ಟೋಬರ್‌ನಿಂದ ಖಾಸಗಿ ವಲಯ ಮತ್ತು ತೆರಿಗೆ ಪರಿಣತರಿಂದ ಸಲಹೆಗಳನ್ನು ಆಹ್ವಾನಿಸುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ.

ಆರು ದಶಕದಷ್ಟು ಹಳೆಯದಾದ ಆದಾಯ ತೆರಿಗೆ ಕಾಯ್ದೆ 1961ರ ಸಮಗ್ರ ಬದಲಾವಣೆ ಬಗ್ಗೆ 2024–25ನೇ ಸಾಲಿನ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿತ್ತು. ಇದಕ್ಕೆ ಪೂರಕವಾಗಿ ಕೇಂದ್ರ ನೇರ ತೆರಿಗೆಗಳ ಮಂಡಳಿಯು ಕಾಯ್ದೆಯ ಸಮಗ್ರ ಪರಾಮರ್ಶೆಗೆ ಸಂಬಂಧಿಸಿದಂತೆ ಆಂತರಿಕ ಸಮಿತಿಯನ್ನು ರಚಿಸಿದೆ.

ಸರಳ ಭಾಷೆಯಲ್ಲಿ ತೆರಿಗೆದಾರರಿಗೆ ಅರ್ಥವಾಗುವಂತೆ ಕಾಯ್ದೆ ರೂಪಿಸಲು ಸರ್ಕಾರ ಮುಂದಾಗಿದೆ. ವಿವಿಧ ವರ್ಗದ ಜನರಿಂದ ಸಲಹೆ ಸ್ವೀಕರಿಸುವ ಸಂಬಂಧ ಪೋರ್ಟಲ್ ರೂಪಿಸಲಿದೆ.

'ಅಕ್ಟೋಬರ್ ಮೊದಲ ವಾರದಲ್ಲಿಯೇ ಸಲಹೆಗಳನ್ನು ಸ್ವೀಕರಿಸುವ ಸಾಧ್ಯತೆಯಿದೆ' ಎಂದು ಮೂಲಗಳು ತಿಳಿಸಿವೆ.

'ಸರ್ಕಾರವು ಹೊಸ ಕಾಯ್ದೆ ರೂಪಿಸಲು ಮುಂದಾಗುತ್ತಿಲ್ಲ. ಕೆಲವು ತೆರಿಗೆ ಷರತ್ತುಗಳನ್ನು ಬದಲಾಯಿಸುವ ಸಾಧ್ಯತೆಯಿದೆ. 100ಕ್ಕೂ ಹೆಚ್ಚು ಪುಟಗಳನ್ನು ಕಡಿಮೆ ಮಾಡುವ ಸಾಧ್ಯತೆಯಿದೆ. ತೆರಿಗೆ ಕುರಿತ ಸರಳ ಭಾಷೆ ಬಳಕೆ ಮೂಲಕ ವ್ಯಾಜ್ಯಗಳ ಸಂಖ್ಯೆಯನ್ನು ತಗ್ಗಿಸುವ ಉದ್ದೇಶ ಹೊಂದಿದೆ' ಎಂದು ಹೇಳಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಜುಲೈನಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಆರು ತಿಂಗಳೊಳಗೆ ಹೊಸ ಕಾಯ್ದೆ ಜಾರಿಗೊಳಿಸುವ ಬಗ್ಗೆ ಪ್ರಸ್ತಾಪಿಸಿದ್ದರು. ಹಾಗಾಗಿ, ಈ ಪ್ರಕ್ರಿಯೆಯು ಜನವರಿಗೆ ಮುಕ್ತಾಯವಾಗಲಿದೆ. ಬಜೆಟ್ ಅಧಿವೇಶನದಲ್ಲಿ ಹೊಸ ಮಸೂದೆ ಮಂಡನೆಯಾಗುವ ಸಾಧ್ಯತೆಯಿದೆ.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹360-538

ದ್ವಿತಳಿ (ಬಿ.ವಿ) ₹333-714

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100ಕ್ಕೆ	₹550
12 ಕ್ಕೆ	₹75

ಮೈಸೂರು

100ಕ್ಕೆ	₹555

ಚಂದ್ರಯಾನ–3: ಅತ್ಯಂತ ಹಳೆಯ ಕುಳಿಯಲ್ಲಿ ಇಳಿದಿದ್ದ ಗಗನನೌಕೆ

ನವದೆಹಲಿ(ಪಿಟಿಐ): 'ಚಂದ್ರಯಾನ–3' ಗಗನನೌಕೆಯು ಚಂದಿರನ ಅಂಗಳದಲ್ಲಿರುವ ಅತ್ಯಂತ ಹಳೆಯ ಕುಳಿಗಳಲ್ಲಿ ಇಳಿದಿರುವ ಸಾಧ್ಯತೆ ಇದೆ ಎಂದು ಇಸ್ರೊ ವಿಜ್ಞಾನಿಗಳು ಹೇಳಿದ್ದಾರೆ.

ಈ ಕುಳಿಗಳು 3.85 ಶತಕೋಟಿ ವರ್ಷಗಳ ಹಿಂದೆ ರಚನೆಯಾಗಿವೆ. ಇವು ಚಂದ್ರನಲ್ಲಿರುವ ಅತ್ಯಂತ ಹಳೆಯ ಕುಳಿಗಳು ಎಂದು ಅಹಮದಾಬಾದ್‌ನಲ್ಲಿರುವ ಭೌತಿಕ ಸಂಶೋಧನಾ ಪ್ರಯೋಗಾಲಯ ಹಾಗೂ ಇಸ್ರೊ ಸಂಶೋಧಕರ ತಂಡ ಹೇಳಿದೆ.

ಪ್ರಗ್ಯಾನ್ (ರೋವರ್) ಕಳುಹಿಸಿರುವ ಚಿತ್ರಗಳ ವಿಶ್ಲೇಷಣೆಯಿಂದ ಇದು ಗೊತ್ತಾಗಿದೆ.

'ಚಂದ್ರಯಾನ–3 ಗಗನನೌಕೆ ಇಳಿದಿದ್ದ ಜಾಗ ಚಂದಿರನ ಮೇಲ್ಮೈನಲ್ಲಿಯೇ ಅತಿ ವಿಶಿಷ್ಟ ಸ್ಥಳವಾಗಿದೆ. ಯಾವ ಬಾಹ್ಯಾಕಾಶ ಕಾರ್ಯಕ್ರಮಗಳ ನೌಕೆಯೂ ಈ ಸ್ಥಳದಲ್ಲಿ ಇಳಿದಿಲ್ಲ. ಪ್ರಗ್ಯಾನ್ (ರೋವರ್) ಕಳಿಸಿರುವ ಚಿತ್ರಗಳು ಚಂದ್ರನ ಈ ಅಕ್ಷಾಂಶದಿಂದ ಕಳುಹಿಸಲಾಗಿರುವ ಮೊದಲ ಚಿತ್ರಗಳಾಗಿವೆ' ಎಂದು ಭೌತಿಕ ಸಂಶೋಧನಾ ಪ್ರಯೋಗಾಲಯದ ಗ್ರಹ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಎಸ್.ವಿಜಯನ್ ಹೇಳಿದ್ದಾರೆ.

'ಈ ಚಿತ್ರಗಳು ಚಂದ್ರ ವಿಕಾಸ ಹೊಂದಿದ ಪ್ರಕ್ರಿಯೆ ಕುರಿತು ಮಾಹಿತಿ ನೀಡುತ್ತವೆ' ಎಂದೂ ಹೇಳಿದ್ದಾರೆ.

ಕ್ಷುದ್ರಗ್ರಹವೊಂದು ಗ್ರಹ ಅಥವಾ ಚಂದ್ರನ ಮೇಲ್ಮೈಗೆ ರಭಸದಿಂದ ಅಪ್ಪಳಿಸಿದಾಗ ಈ ಕುಳಿಗಳು ಉಂಟಾಗುತ್ತವೆ. ಚಂದ್ರನಲ್ಲಿ ಉಂಟಾಗಿರುವ ಈ ಕುಳಿಯ ವ್ಯಾಸ 160 ಕಿ.ಮೀ. ನಷ್ಟಿದ್ದು, ಅರ್ಧವೃತ್ತಾಕಾರದಲ್ಲಿ ಇರುವುದು ಚಿತ್ರಗಳ ವಿಶ್ಲೇಷಣೆಯಿಂದ ತಿಳಿದು ಬಂದಿದೆ ಎಂದು ವಿಜಯನ್ ಹೇಳಿದ್ದಾರೆ.

ಕಠ್ಮಂಡು ಕಣಿವೆಯಲ್ಲಿ ಧಾರಾಕಾರ ವರ್ಷಧಾರೆ: ಬಾಗ್ಮತಿ ನದಿಯಲ್ಲಿ ನೆರೆ

ಪ್ರವಾಹ: ಸಾವಿನ ಸಂಖ್ಯೆ 148ಕ್ಕೆ



ನೇಪಾಳದ ಕಠ್ಮಂಡುವಿನಲ್ಲಿ ಪ್ರವಾಹದಿಂದಾಗಿ ಜನವಸತಿ ಪ್ರದೇಶ ಭಾನುವಾರ ಜಲಾವೃತ್ತವಾಗಿತ್ತು —ಪಿಟಿಐ ಚಿತ್ರ

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಧಾರಾಕಾರವಾಗಿ ಮಳೆಯಾಗುತ್ತಿದ್ದು, ಪ್ರವಾಹ, ಭೂಕುಸಿತ ಮತ್ತಿತರ ಅವಘಡಗಳಲ್ಲಿ ಮೃತಪಟ್ಟವರ ಸಂಖ್ಯೆ 148ಕ್ಕೆ ಏರಿದೆ.

ಪೂರ್ವ ಹಾಗೂ ಮಧ್ಯ ನೇಪಾಳದ ಹಲವು ಪ್ರದೇಶಗಳು ಶುಕ್ರವಾರದಿಂದಲೂ ಮುಳುಗಡೆಯಾಗಿವೆ.

ದೇಶದ ಕೆಲವು ಭಾಗಗಳಲ್ಲಿ ಪ್ರವಾಹ ಉಲ್ಬಣಗೊಂಡಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ರಸ್ತೆಗಳು ಹಾನಿಗೀಡಾಗಿದ್ದು, ಸಂಪರ್ಕ ಕಡಿತದಿಂದಾಗಿ ಅಸಂಖ್ಯಾತ ಪ್ರಯಾಣಿಕರು ತೊಂದರೆಗೆ ಸಿಲುಕಿದ್ದಾರೆ.


ನದಿಗಳು ಉಕ್ಕಿ ಹರಿಯುತ್ತಿದ್ದು, ಪ್ರವಾಹ, ಭೂಕುಸಿತ, ತಗ್ಗು ಪ್ರದೇಶಗಳ ಮುಳುಗಡೆಯಿಂದಾಗಿ 55 ಜನರು ನಾಪತ್ತೆಯಾಗಿದ್ದಾರೆ. 101 ಮಂದಿ ಗಾಯಗೊಂಡಿದ್ದಾರೆ ಎಂದು ಸಶಸ್ತ್ರ ಪೊಲೀಸ್ ಪಡೆಯ ಮೂಲಗಳು ತಿಳಿಸಿವೆ.

ಕಠ್ಮಂಡು ಕಣಿವೆಯಲ್ಲಿ ಒಟ್ಟು 43 ಮಂದಿ ಮೃತಪಟ್ಟಿದ್ದಾರೆ. ಕನಿಷ್ಠ 322 ಮನೆಗಳು ಹಾಗೂ 16 ಸೇತುವೆಗಳು ಹಾನಿಗೊಳಗಾಗಿವೆ. ಭದ್ರತಾ ಸಿಬ್ಬಂದಿಯು 3,626 ಜನರನ್ನು ರಕ್ಷಿಸಿದ್ದಾರೆ. 20 ಸಾವಿರ ಭದ್ರತಾ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದಾರೆ.

40–45 ವರ್ಷಗಳಲ್ಲಿ ಕಠ್ಮಂಡು ಕಣಿವೆಯಲ್ಲಿ ಇಂತಹ ವಿನಾಶಕಾರಿ ನೆರೆಯನ್ನು ನಾವು ನೋಡಿರಲಿಲ್ಲ ಎಂದು ಸ್ಥಳೀಯರು ಹೇಳಿದ್ದಾರೆ. ಬಾಗ್ಮತಿ ನದಿಯಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರಿದೆ.

ಧಾಡಿಂಗ್ ಜಿಲ್ಲೆಯಲ್ಲಿ ಚಲಿಸುತ್ತಿದ್ದ ಬಸ್‌ವೊಂದು ಭೂಕುಸಿತ ಸಂಭವಿಸಿದ್ದರಿಂದ ಮಣ್ಣಿನಡಿ ಸಿಲುಕಿ ಕನಿಷ್ಠ 19 ಜನರು ಜೀವಂತ ಸಮಾಧಿಯಾಗಿದ್ದಾರೆ. ಭಕ್ತಪುರದಲ್ಲಿ ಮನೆ ಕುಸಿದು ಐವರು ಮೃತಪಟ್ಟಿದ್ದಾರೆ.

ಮಕವಾನಪುರದಲ್ಲಿ ನೇಪಾಳ ಫುಟ್‌ಬಾಲ್ ಅಸೋಸಿಯೇಷನ್ ನಡೆಸುತ್ತಿರುವ ತರಬೇತಿ ಕೇಂದ್ರವು ಕುಸಿದಿದ್ದು, ಆರು ಮಂದಿ ಆಟಗಾರರು ಅಸುನೀಗಿದ್ದಾರೆ. ಹಲವರು ಪ್ರವಾಹದಲ್ಲಿ ಸಿಲುಕಿದ್ದಾರೆ. ಮಂಗಳವಾರದವರೆಗೂ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.





ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನದಲ್ಲಿ ವಿವಿಎಸ್ ಲಕ್ಷ್ಮಣ್ (ಎಡಚಿತ್ರ). ಕೇಂದ್ರದಲ್ಲಿರುವ ಜಿಮ್ನಾಷಿಯಂ –ಪ್ರಜಾವಾಣಿ ಚಿತ್ರಗಳು/ಎಸ್‌ಕೆ. ದಿನೇಶ್

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಇನ್ನು ಬಿಸಿಸಿಐ ಶ್ರೇಷ್ಠತಾ ಕೇಂದ್ರ

ಕ್ರಿಕೆಟಿಗರ ಕನಸಿನ ತಾಣ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ..

ಈ ಮೂರು ಪದಗಳು ಕ್ರಿಕೆಟಿಗರ ಪಾಲಿಗೆ ಭರವಸೆಯ ಆಶಾಕಿರಣಗಳಿದ್ದಂತೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಳೆದೆರಡು ದಶಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್‌ಸಿಎ (ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ) ಮಡಿಲಲ್ಲಿ ಆರೈಕೆ, ತರಬೇತಿ ಮತ್ತು ಪುನಶ್ಚೇತನ ಕ್ಕೊಳಗಾದ ಆಟಗಾರರು ದಿಗ್ಗಜರಾಗಿ ಬೆಳೆದ ಕತೆಗಳು ಹಲವಾರಿವೆ. ತೀರಾ ಇತ್ತೀಚೆಗೆ ವಿಕೆಟ್‌ಕೀಪರ್ ರಿಷಭ್ ಪಂತ್ ಅವರ ಉದಾಹರಣೆ ಚಾರಿತ್ರಿಕವೇ ಸರಿ. ಭೀಕರ ರಸ್ತೆ ಅಪಘಾತದಲ್ಲಿ ಗಾಯಗೊಂಡು, ಶಸ್ತ್ರಚಿಕಿತ್ಸೆಗೊಳಗಾಗಿದ್ದ ಪಂತ್ ಪುನಶ್ಚೇತನಕ್ಕಾಗಿ ಸುಮಾರು ಒಂದು ವರ್ಷ ಎನ್‌ಸಿಎನಲ್ಲಿದ್ದರು. ಸಂಪೂರ್ಣ ಫಿಟ್ ಆಗಿ ಐಪಿಎಲ್, ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಮಿಂಚಿದರು. ಅಷ್ಟೇ ಅಲ್ಲ. ಈಚೆಗೆ ಚೆನ್ನೈನಲ್ಲಿ ಬಾಂಗ್ಲಾ ಎದುರಿನ ಟೆಸ್ಟ್‌ನಲ್ಲಿ ಶತಕ ಸಿಡಿಸಿದರು. ವೇಗಿ ಜಸ್‌ಪ್ರೀತ್ ಬೂಮ್ರಾ, ಬ್ಯಾಟರ್ ಕೆ.ಎಲ್. ರಾಹುಲ್ ಸೇರಿದಂತೆ ಇನ್ನೂ ಹಲವರು ತಮ್ಮ ಗಾಯ ಶಮನಗೊಳಿಸಿಕೊಂಡು ಕಣಕ್ಕೆ ಮರಳಿದವರಿದ್ದಾರೆ.

ಅಂತಹ ಎನ್‌ಸಿಎಗೂ ಒಂದು ಕನಸಿತ್ತು. ಸ್ವಂತ, ಸುಸಜ್ಜಿತ ಮತ್ತು ಸಮಗ್ರ ಸೌಲಭ್ಯಗಳನ್ನು ಒಳಗೊಂಡ ಸೂರು ಇರಬೇಕೆಂಬ ಕನಸು ಅದು. ಈಗ ಅದು ಕೈಗೂಡಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತಿರುವ 40 ಎಕರೆ ಜಾಗದಲ್ಲಿ ಭವ್ಯವಾದ ಶ್ರೇಷ್ಠತಾ ಕೇಂದ್ರ ತಲೆ ಎತ್ತಿದೆ. ಅಂದಹಾಗೆ ಎನ್‌ಸಿಎ ಇನ್ನು ಮುಂದೆ ಬಿಸಿಸಿಐ ಶ್ರೇಷ್ಠತಾ ಕೇಂದ್ರವೆಂದು ಕರೆಸಿ ಕೊಳ್ಳಲಿದೆ. ಶನಿವಾರ ನಡೆದ ಸರಳ ಸಮಾರಂಭದಲ್ಲಿ ಈ ಮರುನಾಮಕರಣ ಮಾಡಿ ಹಾಗೂ ಕೇಂದ್ರವನ್ನು ಲೋಕಾರ್ಪಣೆ ಮಾಡಲಾಯಿತು.

ವಿಮಾನ ನಿಲ್ದಾಣದಿಂದ ಟೇಕಾಫ್ ಆಗುವ ಲೋಹದ ಹಕ್ಕಿಗಳನ್ನು ಈ ಕೇಂದ್ರದ ಅಂಗಳದಲ್ಲಿ ನಿಂತು ನೋಡಬಹುದು. ಅದೇ ರೀತಿ ಕ್ರಿಕೆಟ್ ಆಟದಲ್ಲಿ ಆಗಸದೆತ್ತರಕ್ಕೆ ಸಾಧಿಸುವ ಕನಸು ಕಾಣಬಹುದು. ಅದಕ್ಕಾಗಿ ಇಲ್ಲಿಗೆ ಬರುವ ಹಿರಿ–ಕಿರಿಯ ಆಟಗಾರರಿಗೆ ಭರಪೂರ ಸೌಲಭ್ಯಗಳು ಇವೆ.

ದೊಡ್ಡ ಪ್ರವೇಶ ದ್ವಾರವನ್ನು ದಾಟಿ ಮುಖ್ಯ ಕಟ್ಟಡ ಪ್ರವೇಶಿಸುತ್ತಿದ್ದಂತೆಯೇ ಹಾಲ್ ಆಫ್ ಫೇಮ್ ಇದೆ. ಅಂತಿಮ ಹಂತದ ಕಾಮಗಾರಿಗಳು ಪ್ರಗತಿ ಯಲ್ಲಿವೆ. ಹಾಗೆ ದಾಟಿ ಇನ್ನೊಂದು ದ್ವಾರದ ಹೊಸ್ತಿಲು ದಾಟಿದರೆ ಹಸಿರುಟ್ಟು ಕಂಗೊಳಿಸುತ್ತಿರುವ ಕ್ರಿಕೆಟ್ ಮೈದಾನ ಕಣ್ಮನ ಸೆಳೆಯುತ್ತದೆ. 85 ಯಾರ್ಡ್ ಬೌಂಡರಿ ಇರುವ ವಿಶ್ವದರ್ಜೆ ಕ್ರೀಡಾಂಗಣ ಇದು. ಮುಂಬೈ ಕೆಂಪು ಮಣ್ಣಿನಿಂದ ಸಿದ್ಧಗೊಳಿಸಿರುವ 13 ಪಿಚ್‌ಗಳು ಇಲ್ಲಿವೆ. ಹೊನಲು ಬೆಳಕಿನ ಕಂಬಗಳು, ಸೌಥ್ ಪೆವಿಲಿಯನ್ ಮತ್ತು ಪಂದ್ಯಗಳ ನೇರಪ್ರಸಾರ ಸೌಲಭ್ಯ ಕೇಂದ್ರ ಕೂಡ ಇಲ್ಲಿದೆ.

ಇಲ್ಲಿಂದ ಎಡಗಡೆಗೆ ಸಾಗಿದರೆ ಬಿ ಮೈದಾನ ಸೆಳೆಯುತ್ತದೆ. 75 ಯಾರ್ಡ್ ಬೌಂಡರಿ ಇರುವ ಇದರಲ್ಲಿ ಮಂಡ್ಯದ ಕಪ್ಪುಮಣ್ಣು ಬಳಸಿ ಮಾಡಲಾಗಿರುವ 11 ಪಿಚ್‌ಗಳಿವೆ. ಪಕ್ಕದಲ್ಲಿರುವ ಮೂರನೇ ಮೈದಾನ (ಸಿ)ದಲ್ಲಿ ಒಡಿಶಾದ ಕಾಲಾಹಾಂಡಿಯಿಂದ ತರಿಸಿರುವ ಕಪ್ಪುಮಣ್ಣಿನಿಂದ ಸಿದ್ಧವಾದ 9 ಪಿಚ್‌ಗಳಿವೆ. ಈ 3 ಮೈದಾನಗಳಲ್ಲಿ ಮಳೆ ನೀರು ತ್ವರಿತವಾಗಿ ಹರಿದು ಹೋಗಲು ಸಬ್‌ಸರ್ಫೇಸ್ ವ್ಯವಸ್ಥೆ ಮಾಡಲಾಗಿದೆ.

ನೆಟ್ಸ್‌ಗಾಗಿ 45 ಪಿಚ್: ಮೈದಾನಗಳಾಚೆ ನೆಟ್ಸ್ ಅಭ್ಯಾಸಕ್ಕಾಗಿ 45 ಪಿಚ್‌ಗಳು ಇವೆ. ಜೊತೆಗೆ ಹೊನಲು ಬೆಳಕಿನ ವ್ಯವಸ್ಥೆ ಇದೆ. ಓಟದ ಅಭ್ಯಾಸಕ್ಕಾಗಿ ಟ್ರ್ಯಾಕ್ ಮತ್ತು ಫೀಲ್ಡಿಂಗ್ ಅಭ್ಯಾಸದ ಸೌಕರ್ಯಗಳು ಇವೆ. ಕ್ಯಾಮೆರಾಗಳ ಮೂಲಕ ಆಟಗಾರರ ಸಾಮರ್ಥ್ಯ ವಿಶ್ಲೇಷಿಸುವ ತಂತ್ರಜ್ಞಾನ ಇಲ್ಲಿ ಅಳವಡಿಸಲಾಗಿದೆ.

16 ಸಾವಿರ ಚದರಡಿ ಜಾಗದಲ್ಲಿ ನಿರ್ಮಿಸಿರುವ ದೊಡ್ಡ ಕಟ್ಟಡದಲ್ಲಿ ಸ್ಲೀಪಿಂಗ್ ಪಾಡ್‌ಗಳಿರುವ ಜಿಮ್ನಾಷಿಯಂ, ಅಥ್ಲೆಟಿಕ್ಸ್ ಟ್ರ್ಯಾಕ್, ಫಿಸಿಯೊಥೆರಪಿ ಕೇಂದ್ರ, ಕ್ರೀಡಾ ವಿಜ್ಞಾನ ಮತ್ತು ಔಷಧಿ ಪ್ರಯೋಗಾಲಯ, ಝುಕುಜಿ, ಸೌನಾ ಮತ್ತು ಹಬೆಸ್ನಾನ, ಐಸ್ ಬಾತ್, 25 ಮೀಟರ್ಸ್ ಈಜುಕೊಳ ಸೌಲಭ್ಯಗಳು ಇವೆ. ಇದಲ್ಲದೇ ಭವ್ಯವಾದ ಭೋಜನಶಾಲೆ, ಆಡಳಿತ ಕಚೇರಿಗಳು, ಸಭಾಭವನ, ವಸತಿ ಕೋಣೆಗಳು ಕೂಡ ಇವೆ.

ಅಂತಿಮ ಹಂತದ ಕೆಲವು ಕಾಮಗಾರಿಗಳು ಭರದಿಂದ ನಡೆಯುತ್ತಿದ್ದು 2025ರ ಜನವರಿಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲಿದೆ.

ವಿಶ್ವದರ್ಜೆಯ ಶ್ರೇಷ್ಠ ಕೇಂದ್ರ: ಲಕ್ಷ್ಮಣ್ ಹೆಮ್ಮೆ

‘ಕ್ರಿಕೆಟ್ ಮತ್ತು ಇನ್ನಿತರ ಕ್ರೀಡೆಗಳಿಗೆ ಸಂಬಂಧಿಸಿದಂತೆ ವಿಶ್ವದ ಬೇರೆಬೇರೆ ಅಕಾಡೆಮಿಗಳನ್ನು ನಾನು ನೋಡಿರುವೆ. ಅಲ್ಲಿಯೆ ಉನ್ನತ ಸೌಲಭ್ಯಗಳನ್ನು ನೋಡಿದ್ದೇನೆ. ಇದೀಗ ನಮ್ಮಲ್ಲಿಯೂ ವಿಶ್ವದರ್ಜೆಯ ಶ್ರೇಷ್ಠತಾ ಕೇಂದ್ರವು ನಿರ್ಮಾಣವಾಗಿರುವುದು ಹೆಮ್ಮೆಯ ವಿಷಯ. ಪ್ರಸಕ್ತ ಪೀಳಿಗೆಯ ಕ್ರಿಕೆಟಿಗರಿಗೆ ಎಲ್ಲ ರೀತಿಯ ಅತ್ಯಾಧುನಿಕ ಸೌಲಭ್ಯಗಳು ಸಿಗುತ್ತಿವೆ’ ಎಂದು ಎನ್‌ಸಿಎ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಹೇಳಿದರು.

ಭಾನುವಾರ ಮಾಧ್ಯಮ ಪ್ರತಿನಿಧಿಗಳಿಗೆ ಬಿಸಿಸಿಐ ಶ್ರೇಷ್ಠತಾ ಕೇಂದ್ರವನ್ನು ಪ್ರದರ್ಶಿಸಿದ ನಂತರ ಲಕ್ಷ್ಮಣ್ ಮಾತನಾಡಿದರು. ಶನಿವಾರ ನಡೆದ ಕಾರ್ಯಕ್ರಮದಲ್ಲಿ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಜಯ್ ಶಾ ಮತ್ತಿತರ ಪದಾಧಿಕಾರಿಗಳು ಈ ಕೇಂದ್ರವನ್ನು ಔಪಚಾರಿಕವಾಗಿ ಉದ್ಘಾಟಿಸಿದ್ದರು.

‘ಬಿಸಿಸಿಐ ಮಹತ್ವಾಕಾಂಕ್ಷೆಯ ಯೋಜನೆ ಇದು. 2022ರಲ್ಲಿ ಅಡಿಗಲ್ಲು ಹಾಕಲಾಗಿತ್ತು. 15 ತಿಂಗಳುಗಳಲ್ಲಿ ನಿರ್ಮಿಸಲು ಗುರಿ ನೀಡಲಾಗಿತ್ತು. ಇಷ್ಟು ಕಡಿಮೆ ಅವಧಿಯಲ್ಲಿ ದೊಡ್ಡ ಕಾರ್ಯ ಕೈಗೂಡುವುದೇ ಎಂಬ ಆತಂಕ ಆಗ ನನಗಿತ್ತು. ಆದರೆ, ಇಷ್ಟೇ ಅವಧಿಯಲ್ಲಿ ಎಲ್ಲವೂ ಸಿದ್ಧವಾಗಿದೆ. ಬಿಸಿಸಿಐ ಸೇರಿದಂತೆ ಎಲ್ಲ ವಿಭಾಗಗಳ ತಂಡಗಳೂ ಅದ್ಭುತವಾಗಿ ಕಾರ್ಯ-ನಿರ್ವಹಿಸಿವೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಬೆಂಗಳೂರಿನ ಕ್ರಿಕೆಟ್ ಪರಂಪರೆಗೆ ಇದು ಹೊಸ ಗರಿ ಮೂಡಿಸಿದೆ. ಇಲ್ಲಿಯ ಹವಾಗುಣವು ಕ್ರಿಕೆಟ್ ಕಲಿಕೆ ಮತ್ತು ಬೆಳವಣಿಗೆಗೆ ಅತ್ಯಂತ ಸೂಕ್ತವಾಗಿದೆ. ಜೂನಿಯರ್ ಮತ್ತು ಸೀನಿಯರ್ ಆಟಗಾರರಿಗೆ ವಿಶ್ವದರ್ಜೆಯ ತರಬೇತಿ ನೀಡಲು ಸೂಕ್ತವಾಗಿದೆ’ ಎಂದರು.

ಐಪಿಎಲ್: ಆರು ಆಟಗಾರರನ್ನು ಉಳಿಸಲು ಅವಕಾಶ



ಎಂ.ಎಸ್ ಧೋನಿ

ಬೆಂಗಳೂರು (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) ಹತ್ತು ಫ್ರಾಂಚೈಸಿಗಳಿಗೆ ಗರಿಷ್ಠ ಆರು ಆಟಗಾರರನ್ನು ಉಳಿಸಿಕೊಳ್ಳಲು ಅವಕಾಶ ನೀಡುವುದು ಸೇರಿದಂತೆ ಶನಿವಾರ ನಡೆದ ಐಪಿಎಲ್ ಸಭೆಯಲ್ಲಿ ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

ಐಪಿಎಲ್ 2025ರ ಆವೃತ್ತಿಗಾಗಿ ಫ್ರಾಂಚೈಸಿಗೆ ಪರ್ಸ್ ಮೊತ್ತವನ್ನು ₹ 120 ಕೋಟಿಗೆ ನಿಗದಿಪಡಿಸಲಾಗಿದೆ. ಅದರಲ್ಲಿ ₹75 ಕೋಟಿಯನ್ನು ತಂಡವು ಉಳಿಸಿಕೊಳ್ಳುವ ಆರು ಆಟಗಾರರಿಗೆ ವಿನಿಯೋಗಿಸಬೇಕಿದೆ. ರೈಟ್ ಟು ಮ್ಯಾಚ್ (ಆರ್‌ಟಿಎಂ) ಕಾರ್ಡ್‌ಗೆ ಮತ್ತೆ ಅವಕಾಶ ನೀಡಲಾಗಿದೆ.

ಕನಿಷ್ಠ ಐದು ಕ್ಯಾಲೆಂಡರ್ ವರ್ಷಗಳ ವರೆಗೆ ಅಂತರರಾಷ್ಟ್ರೀಯ ಪಂದ್ಯವನ್ನು ಆಡದ ಎಲ್ಲ ಭಾರತ ಆಟಗಾರರನ್ನು ‘ಅನ್‌ಕ್ಯಾಪ್ಡ್ ಆಟಗಾರರು’ ಎಂದು ಪರಿಗಣಿಸಲು ನಿರ್ಧರಿಸಿದೆ. ತಂಡವು ಉಳಿಸಿಕೊಳ್ಳುವ ಆಟಗಾರರಲ್ಲಿ ಒಬ್ಬ ಅನ್‌ಕ್ಯಾಪ್ಡ್ ಆಟಗಾರ ಇರಬೇಕೆಂದು ನಿಯಮ ರೂಪಿಸಿದೆ. ಹೀಗಾಗಿ, ಈ ನಿಯಮದಡಿ ಮಹೇಂದ್ರ ಸಿಂಗ್ ಧೋನಿ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ ತಂಡವು ಉಳಿಸಿಕೊಳ್ಳಲು ಅವಕಾಶವಿದೆ. ಅನ್‌ಕ್ಯಾಪ್ಡ್ ಆಟಗಾರನಿಗೆ ಗರಿಷ್ಠ ₹ 4 ಕೋಟಿ ವಿನಿಯೋಗಿಸಬಹು-ದಾಗಿದೆ. ಧೋನಿ ಅವರನ್ನು ಚೆನ್ನೈ ತಂಡ ಉಳಿಸಿಕೊಂಡರೂ ಅವರ ಸಂಭಾವಣೆ ಈ ಹಿಂದಿಗಿಂತ ಕಡಿಮೆ ಇರಲಿದೆ.

ಯಾವುದೇ ವಿದೇಶಿ ಆಟಗಾರ ಮೆಗಾ ಹರಾಜಿಗೆ ನೋಂದಾಯಿಸಿಕೊಳ್ಳಬೇಕು. ನೋಂದಾಯಿಸಿಕೊಳ್ಳದಿದ್ದರೆ, ಮುಂದಿನ ವರ್ಷದ ಆಟಗಾರರ ಹರಾಜಿನಲ್ಲಿ ನೋಂದಾಯಿಸಲು ಅವರು ಅನರ್ಹರಾಗುತ್ತಾರೆ. ಹರಾಜಿನಲ್ಲಿ ತಂಡಕ್ಕೆ ಆಯ್ಕೆಯಾದ ಬಳಿಕ ಗಾಯದ ಅಥವಾ ನಿರ್ದಿಷ್ಟ ಕಾರಣದ ಹೊರತಾಗಿ ಯಾವುದೇ ವಿದೇಶಿ ಆಟಗಾರ ಐಪಿಎಲ್‌ನಿಂದ ಹಿಂದೆ ಸರಿದರೆ, 2 ವರ್ಷಗಳವರೆ-ಗೆ ನಿಷೇಧ ಹೇರುವ ನಿಯಮ ಜಾರಿಗೊ-ಳಿಸಲಾಗಿದೆ.

ಬಿಸಿಸಿಐ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ರಾಜ್ಯ ಸಂಸ್ಥೆಗಳ ಆಗ್ರಹ

ದುಲೀಪ್ ಟ್ರೋಫಿ; ಮತ್ತೆ ವಲಯ ತಂಡಗಳು?

ಬೆಂಗಳೂರು(ಪಿಟಿಐ): ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮತ್ತೆ ವಲಯವಾರು ತಂಡಗಳನ್ನು ಆಡಿಸುವ ಪದ್ಧತಿಯನ್ನು ಮರಳಿ ಜಾರಿಗೊಳಿಸುವ ಸಾಧ್ಯತೆ ಇದೆ. ಮುಂದಿನ ವರ್ಷದ ಟೂರ್ನಿಯಲ್ಲಿ ವಲಯ ಪದ್ಧತಿ ಜಾರಿಯಾಗಬಹುದು.

ಈಚೆಗಷ್ಟೇ ನಡೆದಿದ್ದ ದುಲೀಪ್ ಟ್ರೋಫಿ ಟೂರ್ನಿಯಲ್ಲಿ ನಾಲ್ಕು ತಂಡಗಳನ್ನು ಎ, ಬಿ, ಸಿ ಮತ್ತು ಡಿ ಎಂದು ವಿಂಗಡಿಸಲಾಗಿತ್ತು. ಆದರೆ ಹಳೆಯ ಟೂರ್ನಿಗಳಲ್ಲಿ ಆರು ತಂಡಗಳಿದ್ದವು. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಕೇಂದ್ರ ಮತ್ತು ನಾರ್ತ್ ಈಸ್ಟ್ ವಲಯ ತಂಡಗಳು ಸೆಣಸುತ್ತಿದ್ದವು. ಈ ಸಲ ನಾಲ್ಕು ತಂಡಗಳನ್ನು ಮಾತ್ರ ಆಡಿಸುವ ಸಲುವಾಗಿ ವಲಯವಾರು ಪದ್ಧತಿಯನ್ನು ಕೈಬಿಡಲಾಗಿತ್ತು.

ನಗರದಲ್ಲಿ ಭಾನುವಾರ ನಡೆದ ಬಿಸಿಸಿಐನ 93ನೇ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ದುಲೀಪ್ ಟ್ರೋಫಿ ಟೂರ್ನಿಯಲ್ಲಿ ಹಳೆ ಪದ್ಧತಿಯನ್ನು ಮರಳಿ ಜಾರಿಗೊಳಿಸುವ ಕುರಿತು ಚರ್ಚೆ ನಡೆಯಿತು.

‘ಈ ಸಲ ದುಲೀಪ್ ಟ್ರೋಫಿ ಟೂರ್ನಿ ಯಲ್ಲಿ ಅನುಸರಿಸಿದ ಪದ್ಧತಿಯಿಂದ ಎಲ್ಲ ರಾಜ್ಯಗಳ ಆಟಗಾರರಿಗೆ ಸೂಕ್ತ ಪ್ರಾತಿನಿಧ್ಯ ದೊರೆಯಲಿಲ್ಲವೆಂದು ರಾಜ್ಯ ಕ್ರಿಕೆಟ್ ಸಂಸ್ಥೆಗಳು ದೂರಿದವು. ಇದರಿಂದಾಗಿ ಸಾಂಪ್ರದಾಯಿಕ ಮಾದರಿಯನ್ನು ಅನುಸರಿಸಿ ವಲಯವಾರು ತಂಡಗಳನ್ನು ರಚಿಸುವ ಕುರಿತು ಅಭಿಮತ ವ್ಯಕ್ತವಾಯಿತು. ಇದರಿಂದ ಎಲ್ಲ ರಾಜ್ಯಗಳ ಆಟಗಾರರಿಗೂ ಆಡುವ ಅವಕಾಶ ಸಿಗುವ ಆಶಯ ವ್ಯಕ್ತವಾಯಿತು’ ಎಂದು ಸದಸ್ಯರೊಬ್ಬರು ತಿಳಿಸಿದರು.



ಜಯ್ ಶಾ

ನೂತನ ಕಾರ್ಯದರ್ಶಿ ನೇಮಕ ಪ್ರಕ್ರಿಯೆ: ಬಿಸಿಸಿಐ ಪ್ರಧಾನ ಕಾರ್ಯದರ್ಶಿ ಜಯ್ ಶಾ ಅವರು ಡಿಸೆಂಬರ್‌ನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸುವರು. ಆದರಿಂದಾಗಿ ನವೆಂಬರ್ ಕೊನೆಯ ವಾರದಲ್ಲಿ ಅವರು ಬಿಸಿಸಿಐ ಹುದ್ದೆಯಿಂದ ನಿರ್ಗಮಿಸಲಿದ್ದಾರೆ.

ಇದರಿಂದಾಗಿ ತೆರವಾಗುವ ಕಾರ್ಯದರ್ಶಿ ಹುದ್ದೆಗೆ ಉತ್ತರಾಧಿಕಾರಿಯನ್ನು ನಿಗದಿಪಡಿಸುವ ಪ್ರಕ್ರಿಯೆಯನ್ನು ಚುರುಕುಗೊಳಿಸಬೇಕು ಎಂದು ಸಭೆಯಲ್ಲಿ ಜಯ್ ಶಾ ಅವರಿಗೆ ಮನವಿ ಮಾಡಲಾಯಿತು.

ಸಭೆಯ ಅಜೆಂಡಾದಲ್ಲಿ ನೂತನ ಕಾರ್ಯದರ್ಶಿ ನೇಮಕ ಕುರಿತ ಚರ್ಚೆಯು ಇರಲಿಲ್ಲ.

‘ಪ್ರಸ್ತುತ ಅಧಿಕಾರದಲ್ಲಿರುವ ಕಾರ್ಯದರ್ಶಿಗೆ ಮನವಿ ಮಾಡುವುದು ಔಪಚಾರಿಕವಾಗಿದೆ. ಐಪಿಎಲ್ ಹರಾಜು ಪ್ರಕ್ರಿಯೆ ಸೇರಿದಂತೆ ಕೆಲವು ಮಹತ್ವದ ಕಾರ್ಯಕ್ರಮಗಳು ಮುಂಬರಲಿವೆ. ಆದ್ದರಿಂದ ಅಷ್ಟರೊಳಗೆ ನೂತನ ಕಾರ್ಯದರ್ಶಿ ನೇಮಕ ಮಾಡುವುದು ಬೇಕಿದೆ’ ಎಂದು ಮೂಲಗಳು ತಿಳಿಸಿವೆ.

ಶಾ ಅವರ ಸ್ಥಾನಕ್ಕೆ ಡಿಡಿಸಿಎ ಅಧ್ಯಕ್ಷ ರೋಹನ್ ಜೇಟ್ಲಿ, ಬಿಸಿಸಿಐ ಖಜಾಂಚಿ ಆಶಿಶ್ ಶೆಲಾರ್, ಜಂಟಿ ಕಾರ್ಯದರ್ಶಿ ದೇವಜಿತ್ ಸೈಕಿಯಾ, ಗುಜರಾತ್ ಕ್ರಿಕೆಟ್ ಸಂಸ್ಥೆ ಕಾರ್ಯದರ್ಶಿ ಅನಿಲ್ ಪಟೇಲ್ ಅವರ ರೇಸ್‌ನಲ್ಲಿದ್ದಾರೆ.

ಮುಂದಿನ ನಡೆಯುವ ಐಸಿಸಿ ಸಭೆಯಲ್ಲಿ ಬಿಸಿಸಿಐ ಪ್ರತಿನಿಧಿಸುವ ನಿರ್ದೇಶಕ ಮತ್ತು ಪರ್ಯಾಯ ನಿರ್ದೇಶಕರ ಸ್ಥಾನಗಳಿಗೆ ಇಬ್ಬರ ಹೆಸರು ಸೂಚಿಸುವಂತೆ ಸಭೆಗೆ ಮನವಿ ಮಾಡಲಾಯಿತು.

ಧುಮಾಲ್ ಮುಂದುವರಿಕೆ: ಐಪಿಎಲ್ ಕ್ರಿಕೆಟ್ ಟೂರ್ನಿಯ ಆಡಳಿತ ಸಮಿತಿ ಮುಖ್ಯಸ್ಥರಾಗಿ ಅರುಣಸಿಂಗ್ ಧುಮಾಲ್ ಮುಂದುವರಿಯಲಿದ್ದಾರೆ. ಬಿಸಿಸಿಐ ಸಭೆಯಲ್ಲಿ ಧುಮಾಲ್ ಮತ್ತು ಸದಸ್ಯ ಅವಿಷೇಕ್ ದಾಲ್ಮಿಯಾ ಅವರನ್ನು ಆಯ್ಕೆ ಮಾಡಲಾಯಿತು. ಮುಂದಿನ ವರ್ಷದ ಐಪಿಎಲ್ ಮುಕ್ತಾಯದವರೆಗೂ ಅವರು ಮುಂದುವರಿಯಲಿದ್ದಾರೆ.

ಆಂಧ್ರದ ಮಾಜಿ ಕ್ರಿಕೆಟಿಗ ವಿ. ಚಾಮುಂಡೇಶ್ವರನಾಥ್ ಅವರನ್ನು ಭಾರತೀಯ ಕ್ರಿಕೆಟಿಗರ ಸಂಸ್ಥೆ (ಐಸಿಎ) ಪ್ರತಿನಿಧಿಯಾಗಿ ಐಪಿಎಲ್ ಆಡಳಿತ ಸಮಿತಿಗೆ ಆಯ್ಕೆ ಮಾಡಲಾಗಿದೆ.

ಅಂಧರ ಚೆಸ್: ಮುನ್ನಡೆಯಲ್ಲಿ ಇಬ್ಬರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರ ಶ್ರೇಯಾಂಕದ ರೇಸಿಸ್ ಮಿಚಾಲ್ ಮತ್ತು ಎರಡನೇ ಶ್ರೇಯಾಂಕದ ಸಾಲೊಮನ್ ಜೂಲಿಯಾ ಅವರು 12ನೇ ಐಬಿಸಿಎ ಅಂಧರ ವಿಶ್ವ ಜೂನಿಯರ್ ಚೆಸ್ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನ ನಂತರ ತಲಾ ಎರಡು ಪಾಯಿಂಟ್‌ಗಳೊಡನೆ ಮುನ್ನಡೆ ಹಂಚಿಕೊಂಡಿದ್ದಾರೆ.

ಹಾಲಿ ಚಾಂಪಿಯನ್ ಆಗಿರುವ ಪೋಲೆಂಡ್‌ನ ಮಿಚಾಲ್ ಭಾನುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಸ್ವದೇಶದ ಫೇಬಿಯನ್ ಸ್ಪಿಯನ್‌ಕೋವಸ್ಕಿ ಅವರನ್ನು ಸೋಲಿಸಿದರೆ, ಈ ಕಣದಲ್ಲಿರುವ ಏಕೈಕ ಆಟಗಾರ್ತಿ ಜೂಲಿಯಾ (ಪೋಲೆಂಡ್) ಅವರು ಬಿಳಿ ಕಾಯಿಗಳಲ್ಲಿ ಆಡಿದ ಕಜಕಸ್ತಾನದ ಕುವಾನಶುಲಿ ನುರ್ಗಿಸಾ ಅವರನ್ನು ಮಣಿಸಿದರು.

ಭಾರತದ ರಾಹುಲ್ ವಫೇಲಾ ಮತ್ತು ಜಾನ್ ಹ್ಯಾರಿಸ್ ಸುಜಿನ್ (ತಲಾ 1.5 ಪಾಯಿಂಟ್) ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಒಟ್ಟು 12 ಮಂದಿ ಕಣದಲ್ಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ನಾಲ್ಕು ಮಂದಿ ಅಗ್ರಸ್ಥಾನದಲ್ಲಿದ್ದಾರೆ. ಅಗ್ರ ಶ್ರೇಯಾಂಕದ ಉಕ್ರೇನ್‌ನ ಆಟಗಾರ್ತಿ ಝಿಲ್ಟ್ಸೊವಾ ಲಿಸೆಂಕೊ ಲುಬೊವ್ (ಉಕ್ರೇನ್), ಎರಡನೇ ಶ್ರೇಯಾಂಕದ ಎಜಿಮನ್ ಎಮಿಲಿಯಾ (ಪೋಲೆಂಡ್), ಮೂರನೇ ಶ್ರೇಯಾಂಕದ ಲೌಸೆರ್ ಜೆಸಿಕಾ (ಅಮೆರಿಕ) ಮತ್ತು ಪೋಲೆಂಡ್‌ನ ಟ್ರಿಯೆನ್‌ಸ್ಕಾ ಎಮಿಲಿಯಾ ಮುನ್ನಡೆ ಹಂಚಿಕೊಂಡವರು.



ಎರಡನೇ ಶ್ರೇಯಾಂಕದ ಎಜಿಮನ್ ಎಮಿಲಿಯಾ ಎದುರು ಆಡಿದ ಭಾರತದ ಮೇಘಾ ಚಕ್ರವರ್ತಿ.

ಎಜಿಮನ್ ಎಮಿಲಿಯಾ ಅವರು ಭಾರತದ ಮೇಘಾ ಚಕ್ರವರ್ತಿ ವಿರುದ್ಧ ಜಯಗಳಿಸಿದರು.

ಕಜಕಸ್ತಾನದ ಎಜೆನ್‌ಬಯೇವಾ ಎನ್ಲಿಕ್ ಮತ್ತು ಮುರಾಟೊವಾ ಆಲಿಯಾ ತಲಾ ಒಂದೂವರೆ ಪಾಯಿಂಟ್ಸ್ ಸಂಗ್ರಹಿಸಿ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಮಹಿಳಾ ವಿಭಾಗದಲ್ಲಿ 20 ಮಂದಿ ಪೈಪೋಟಿಯಲ್ಲಿದ್ದಾರೆ.

ಭಾರತಕ್ಕೆ ಮಣಿದ ಲಾವೋಸ್

ವಿಯೆಂಟಿಯಾನ್ (ಪಿಟಿಐ): ದ್ವಿತೀ-ಯಾರ್ಧದಲ್ಲಿ ಅಮೋಘ ಆಟವಾಡಿದ ಭಾರತ ತಂಡವು ಭಾನುವಾರ ಎಎಫ್‌ಸಿ (20 ವರ್ಷದೊಳಗಿನವರ) ಏಷ್ಯನ್ ಕಪ್ 2025 ಕ್ವಾಲಿಫೈಯರ್ ಟೂರ್ನಿಯಲ್ಲಿ ಗುಂಪು ಹಂತದ ಕೊನೆಯ ಪಂದ್ಯದಲ್ಲಿ 2–0 ಗೋಲುಗಳಿಂದ ಆತಿಥೇಯ ಲಾವೋಸ್ ತಂಡವನ್ನು ಮಣಿಸಿತು.

ಭಾರತ ತಂಡದ ಪರ ಗ್ವಾಗ್‌ವಾಮ್ಸರ್ ಗೊಯಾರಿ (69ನೇ ನಿಮಿಷ) ಮತ್ತು ತಂಗ್ಲಾಲ್‌ಸೌನ್ ಗ್ಯಾಂಗ್ಟೆ (84ನೇ ನಿಮಿಷ) ಗೋಲು ಗಳಿಸಿದರು.

ಭಾರತವು ನಾಲ್ಕು ತಂಡಗಳ ‘ಜಿ’ ಗುಂಪಿನಲ್ಲಿ ಆರು ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಇರಾನ್ (9 ಅಂಕ) ಅಗ್ರಸ್ಥಾನದಲ್ಲಿದೆ.

10 ಗುಂಪುಗಳ ಅಗ್ರ ತಂಡಗಳು ಮತ್ತು ಎರಡನೇ ಸ್ಥಾನ ಹೊಂದಿರುವ ಐದು ಅತ್ಯುತ್ತಮ ತಂಡಗಳು ಚೀನಾದಲ್ಲಿ ನಡೆಯುವ ಏಷ್ಯನ್ ಕಪ್ ಟೂರ್ನಿಗೆ ಅರ್ಹತೆ ಪಡೆಯಲಿವೆ.

ಸಂಕ್ಷಿಪ್ತ ಸುದ್ದಿ

ಅಥ್ಲೆಟಿಕ್ಸ್: ಪಲ್ಲವಿ, ಲೋಕೇಶ್‌ಗೆ ಕಂಚು



ಪಲ್ಲವಿ ಪಾಟೀಲ




ಲೋಕೇಶ್

ಬೆಂಗಳೂರು: ಕರ್ನಾಟಕದ ಪಲ್ಲವಿ ಪಾಟೀಲ ಅವರು ಬಿಹಾರದ ಪಟ್ನಾದಲ್ಲಿ ನಡೆಯುತ್ತಿರುವ ಇಂಡಿಯನ್ ಓಪನ್ (23 ವರ್ಷದೊಳಗಿನವರ) ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಹೈಜಂಪ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು.

ಸ್ಪರ್ಧೆಯ ಎರಡನೇ ದಿನವಾದ ಭಾನುವಾರ ನಡೆದ ಫೈನಲ್‌ನಲ್ಲಿ ಪಲ್ಲವಿ 1.72 ಮೀಟರ್ ಸಾಧನೆಯೊಂದಿಗೆ ಮೂರನೇ ಸ್ಥಾನ ಪಡೆದರು. ತಮಿಳುನಾಡಿನ ಗೋಪಿಕಾ ಕೆ. (1.76ಮೀ) ಮತ್ತು ಗುಜರಾತ್ ಪಾಯಲ್ ಜಮೋದ್ (1.76 ಮೀ) ಕ್ರಮವಾಗಿ ಮೊದಲೆರಡು ಸ್ಥಾನ ಪಡೆದರು.

ಪುರುಷರ ಡೆಕಥ್ಲಾನ್‌ನಲ್ಲಿ ಕರ್ನಾಟಕದ ಲೋಕೇಶ್ ರಾಥೋಡ್ ಅವರು 6440 ಅಂಕಗಳೊಂದಿಗೆ ಕಂಚು ಗೆದ್ದರು. ಒಡಿಶಾದ ಜಸ್ಬೀರ್ ನಾಯಕ್ (7065) ಮತ್ತು ತಮಿಳುನಾಡಿನ ಲೋಕೇಶ್ ಕುಮಾರ್ (6525) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಜಯಿಸಿದರು.

ರೇಸ್: ಅರ್ಜುನ್‌ಗೆ 3ನೇ ಸ್ಥಾನ



ಅರ್ಜುನ್ ಮೈನಿ

ಸ್ಪೀಲ್‌ಬರ್ಗ್, ಆಸ್ಟ್ರಿಯಾ (ಪಿಟಿಐ): ಬೆಂಗಳೂರಿನ ಅರ್ಜುನ್ ಮೈನಿ ಅವರು ಡಿಟಿಎಂ ರೇಸ್‌ನ ರೆಡ್ ಬುಲ್ ರಿಂಗ್‌ನಲ್ಲಿ ಮೂರನೇ ಸ್ಥಾನ ಗಳಿಸಿದರು. ಸ್ಪೋರ್ಟ್ಸ್ ಕಾರ್ ಸರಣಿಯಲ್ಲಿ ಪೋಲ್ ಸ್ಥಾನ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಅವರು ಪಾತ್ರವಾದರು.

ಶನಿವಾರ ನಡೆದ ಅಂತಿಮ ಲ್ಯಾಪ್‌ನಲ್ಲಿ 26 ವರ್ಷದ ಅರ್ಜುನ್ (1:30.128) ವೇಗದ ಸಮಯ ದಾಖಲಿಸಿದರು. ಇಟಲಿಯ ಮಿರ್ಕೊ ಬೊರ್ಟೊಲೊಟ್ಟಿ ಮತ್ತು ಜರ್ಮನಿಯ ಮಾರೊ ಎಂಗೆಲ್ ಮೊದಲೆರಡು ಸ್ಥಾನ ಗಳಿಸಿದರು.

ಪುರುಷರ ರೇಸ್: ಆಕಾಶ್ ಮಿಂಚು

ಮಂಗಳೂರು: ನಗರದ ಆಕಾಶ್ ಪೂಜಾರ್, ತಮಿಳುನಾಡಿನ ರಾಮೇಶ್ವರದಲ್ಲಿ ನಡೆದ ರಾಷ್ಟ್ರೀಯ ಸ್ಟ್ಯಾಂಡ್ ಅಪ್ ಪೆಡಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದು ಗಮನ ಸೆಳೆದರು.

ಚಾಂಪಿಯನ್‌ಷಿಪ್‌ನ ಪುರುಷರ 12 ಕಿಲೊಮೀಟರ್ ರೇಸ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದ ಅವರು ಈ ವಿಭಾಗದಲ್ಲಿ ಪದಕ ಗೆದ್ದ 16 ವರ್ಷದೊಳಗಿನ ಭಾರತದ ಮೊದಲ ಸರ್ಫರ್ ಎಂದೆನಿಸಿಕೊಂಡರು. ಕರ್ನಾಟಕ ಇಲ್ಲಿ ಒಟ್ಟು 8 ಪದಕಗಳನ್ನು ಗಳಿಸಿ ಪಾರಮ್ಯ ಮೆರೆಯಿತು.

ಲಂಕಾಕ್ಕೆ ನಿರೀಕ್ಷಿತ ಸರಣಿ ಗೆಲುವು

ಗಾಲೆ (ಎಎಫ್‌ಪಿ): ಪದಾರ್ಪಣೆ ಪಂದ್ಯದಲ್ಲಿ ಮಿಂಚಿದ ಆಫ್ ಸ್ಪಿನ್ನರ್ ನಿಶಾನ್ ಪೀರಿಸ್ ಆರು ವಿಕೆಟ್ ಪಡೆದು, ಎರಡನೆ ಟೆಸ್ಟ್ ಪಂದ್ಯದಲ್ಲಿ ಶ್ರೀಲಂಕಾ ತಂಡ ಇನಿಂಗ್ಸ್ ಮತ್ತು 154 ರನ್‌ಗಳಿಂದ ನ್ಯೂಜಿಲೆಂಡ್ ತಂಡವನ್ನು ಸೋಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಶ್ರೀಲಂಕಾ ಸರಣಿಯನ್ನು 2–0ಯಿಂದ ಗೆದ್ದುಕೊಂಡಿತು.

ಇದು ಕಿವೀಸ್ ವಿರುದ್ಧ ಶ್ರೀಲಂಕಾ ತಂಡಕ್ಕೆ 15 ವರ್ಷಗಳಲ್ಲಿ ಮೊದಲ ಸರಣಿ ಜಯ. ಪಂದ್ಯದ ನಾಲ್ಕನೇ ದಿನವಾದ ಭಾನುವಾರ ನ್ಯೂಜಿಲೆಂಡ್ ತಂಡ ಎರಡನೇ ಇನಿಂಗ್ಸ್‌ನಲ್ಲಿ ಪ್ರತಿರೋಧ ತೋರಿ 360 ರನ್‌ಗಳಿಗೆ ಆಲೌಟ್ ಆಯಿತು. ಶ್ರೀಲಂಕಾದ 5 ವಿಕೆಟ್‌ಗೆ 602 ರನ್‌ಗಳಿಗೆ (ಡಿಕ್ಲೇರ್ಡ್) ಉತ್ತರವಾಗಿ ನ್ಯೂಜಿಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 88 ರನ್‌ಗಳಿಗೆ ಉರುಳಿತ್ತು.

ಪೀರಿಸ್ ಮತ್ತು ಪ್ರಭಾತ್ ಜಯಸೂರ್ಯ ಈ ಪಂದ್ಯದಲ್ಲಿ ತಮ್ಮೊಳಗೆ 18 ವಿಕೆಟ್‌ಗಳನ್ನು ಹಂಚಿಕೊಂಡರು. ಶನಿವಾರ 5 ವಿಕೆಟ್‌ಗೆ 199 ರನ್ ಗಳಿಸಿದ್ದ ನ್ಯೂಜಿಲೆಂಡ್ ಪ್ರತಿರೋಧ ತೋರಿತು. ಬ್ಲಂಡೆಲ್ (60) ಮತ್ತು ಗ್ಲೆನ್ ಫಿಲಿಪ್ಸ್ (78) ಆರನೇ ವಿಕೆಟ್‌ಗೆ 95 ರನ್ ಸೇರಿಸಿದರು. ಒಂಬತ್ತನೇ ಕ್ರಮಾಂಕದಲ್ಲಿ ಆಡಿದ ಮಿಷೆಲ್ ಸ್ಯಾಂಟನರ್ 67 ರನ್ ಬಾರಿಸಿದರು. ಏಜಾಜ್ ಪಟೇಲ್ ಜೊತೆ ಅವರು 9ನೇ ವಿಕೆಟ್‌ಗೆ 53 ರನ್ ಸೇರಿಸಿದ್ದರು. ಪೀರಿಸ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಕುಸಲ್ ಮೆಂಡಿಸ್ ಅವರಿಂದ ಸ್ಟಂಪ್ಡ್ ಆದ ಸ್ಯಾಂಟನರ್ ಕೊನೆಯವರಾಗಿ ನಿರ್ಗಮಿಸಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 5 ವಿಕೆಟ್‌ಗೆ 602 ಡಿಕ್ಲೇರ್ಡ್; ನ್ಯೂಜಿಲೆಂಡ್: 88, ಎರಡನೇ ಇನಿಂಗ್ಸ್: 81.4 ಓವರುಗಳಲ್ಲಿ 360 (ಟಾಮ್ ಬ್ಲಂಡೆಲ್ 60, ಗ್ಲೆನ್ ಫಿಲಿಪ್ಸ್ 78, ಮಿಷೆಲ್ ಸ್ಯಾಂಟ್ನರ್ 67; ನಿಶಾನ್ ಪೀರಿಸ್ 170ಕ್ಕೆ6, ಪ್ರಭಾತ್ ಜಯಸೂರ್ಯ 139ಕ್ಕೆ3). ಪಂದ್ಯದ ಆಟಗಾರ: ಕಮಿಂದು ಮೆಂಡಿಸ್ (182*), ಸರಣಿಯ ಆಟಗಾರ: ಪ್ರಭಾತ್ ಜಯಸೂರ್ಯ (18 ವಿಕೆಟ್)

ಶೂಟಿಂಗ್: ಭಾರತ ತಂಡಗಳಿಗೆ ಡಬಲ್ ಚಿನ್ನದ ಪದಕ

ನವದೆಹಲಿ (ಪಿಟಿಐ): ಭಾರತದ ಪುರುಷರ ಮತ್ತು ಮಹಿಳಾ ತಂಡಗಳು ಪೆರುನಲ್ಲಿ ನಡೆದ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್‌ನ 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಗಳಲ್ಲಿ ಚಿನ್ನದ ಸಾಧನೆ ಮಾಡಿದವು.

ಉಮೇಶ್ ಚೌಧರಿ, ಪ್ರದ್ಯುಮ್ನ ಸಿಂಗ್ ಮತ್ತು ಮುಖೇಶ್ ನೆಲವಲ್ಲಿ ಅವರನ್ನು ಒಳಗೊಂಡ ಪುರುಷರ ತಂಡವು 1726 ಅಂಕ ಗಳಿಸಿತು, ರೊಮೇನಿಯಾ ಬೆಳ್ಳಿ, ಇಟಲಿ ಕಂಚು ಗೆದ್ದಿತು.

ವೈಯಕ್ತಿಕ ಸ್ಪರ್ಧೆಯಲ್ಲಿ ಉಮೇಶ್ ಅವರು ಫೈನಲ್‌ಗೆ ತಡವಾಗಿ ವರದಿ ಮಾಡಿದ್ದಕ್ಕಾಗಿ ಎರಡು ಅಂಕಗಳನ್ನು ದಂಡದ ರೂಪದಲ್ಲಿ ಕಳೆದುಕೊಂಡರು. ಅವರು ಆರನೇ ಸ್ಥಾನ ಗಳಿಸಿದರು. ರೊಮೇನಿಯಾದ ಲುಕಾ ಜೊಲ್ಡಿಯಾ ಚಿನ್ನ ಗೆದ್ದರೆ, ಚೀನಾ ತೈಪೆಯ ಹ್ಸಿಯಾಂಗ್-ಚೆನ್ ಬೆಳ್ಳಿ ಗೆದ್ದರು.

ಕನಿಷ್ಕಾ ದಾಗರ್, ಲಕ್ಷಿತಾ ಮತ್ತು ಅಂಜಲಿ ಚೌಧರಿ ಅವರ ಸಂಯೋಜನೆಯ ಮಹಿಳಾ ತಂಡ 1708 ಪಾಯಿಂಟ್ಸ್ ಗಳಿಸಿತು. ಅಜರ್‌ಬೈಜಾನ್ ಬೆಳ್ಳಿ ಮತ್ತು ಉಕ್ರೇನ್ ಕಂಚು ಗೆದ್ದಿತು.

ಮಹಿಳೆಯರ ವೈಯಕ್ತಿಕ ಸ್ಪರ್ಧೆಯಲ್ಲಿ ಭಾರತದ ಕನಕ್ 217.6 (ಅಂಕ) ಕಂಚು ಗೆದ್ದರೆ, ಕನಿಷ್ಕಾ ದಾಗರ್ ಎಂಟನೇ ಸ್ಥಾನ ಪಡೆದರು. ಚೀನಾ ತೈಪೆಯ ಚೆನ್ ಯು-ಚುನ್ ಚಿನ್ನ, ಸ್ಲೋವಾಕಿಯಾದ ಮಾಂಜಾ ಸ್ಲಾಕ್ ಬೆಳ್ಳಿ ಜಯಿಸಿದರು.

ಶ್ರವಣದೋಷವುಳ್ಳವರ ರಾಜ್ಯಮಟ್ಟದ 14ನೇ ಕ್ರೀಡಾಕೂಟಕ್ಕೆ ತೆರೆ

ಮೈಸೂರು ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಶ್ರವಣದೋಷವುಳ್ಳವರ ರಾಜ್ಯಮಟ್ಟದ 14ನೇ ಕ್ರೀಡಾಕೂಟದಲ್ಲಿ 173 ಅಂಕಗಳನ್ನು ಗಳಿಸುವ ಮೂಲಕ ಮೈಸೂರು ಕ್ರೀಡಾಪಟುಗಳು ಸಮಗ್ರ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಕರ್ನಾಟಕ ಶ್ರವಣದೋಷವುಳ್ಳವರ ಕ್ರೀಡಾ ಒಕ್ಕೂಟ, ಬಾಗಲಕೋಟೆ ಜಿಲ್ಲಾ ಶ್ರವಣ ದೋಷವುಳ್ಳವರ ಸಂಘದ ಸಹಯೋಗದಲ್ಲಿ ನಗರದ ಬಸವೇಶ್ವರ ಪ್ರೌಢಶಾಲೆ ಮೈದಾನದಲ್ಲಿ ಭಾನುವಾರ ಮುಕ್ತಾಯಗೊಂಡ ಕ್ರೀಡಾಕೂಟದಲ್ಲಿ 103 ಅಂಕಗಳನ್ನು ಗಳಿಸಿದ ಬೆಂಗಳೂರು ತಂಡ ದ್ವಿತೀಯ ಸ್ಥಾನ ಹಾಗೂ 64 ಅಂಕಗಳನ್ನು ಪಡೆದ ಮಂಡ್ಯ ಜಿಲ್ಲೆ ಕ್ರೀಡಾಪಟುಗಳು ತೃತೀಯ ಸ್ಥಾನ ಪಡೆದರು.


ಫಲಿತಾಂಶ: ಪುರುಷರು: ಹೈಜಂಪ್: ಗೋಕುಲ್ (ಬೆಂಗಳೂರು), ಸಿದ್ದೇಶ್ವರ (ಬಾಗಲಕೋಟೆ), ಸುನಿಲ್ (ರಾಮನಗರ). **ಮಹಿಳೆಯರು:** ಹೈಜಂಪ್: ಪ್ರೀತಿ ಹೆಗಡೆ (ಉತ್ತರ ಕನ್ನಡ), ಗಗನಾ (ತುಮಕೂರು), ಜೀವಿತಾ (ಮಂಡ್ಯ). 200 ಮೀ.ಓಟ: ಪ್ರೀತಿ ಹೆಗಡೆ (ಉತ್ತರ ಕನ್ನಡ), ಪವಿತ್ರಾ ತೇಲಿ (ಬಾಗಲಕೋಟೆ), ಅಗ್ನೇಸ್ ಜೋಸ್ (ಮೈಸೂರು).

18 ವರ್ಷದೊಳಗಿನ ಬಾಲಕರು: ಎತ್ತರ ಜಿಗಿತ: ಗೋವಿಂದರಾಜು ಆರ್. (ತುಮಕೂರು), ಲಿಖಿತ್ ಗೌಡ (ತುಮಕೂರು), ವೇದಾಂತ ಗೌಡ (ಮಂಡ್ಯ). ಬ್ಯಾಡ್ಮಿಂಟನ್: ಮೋನಿಕ್ ಕಶ್ಯಪ್ ಎನ್. (ತುಮಕೂರು), ಅಹಮದ್ ಮೊಹತೇಶಮ್ (ಉತ್ತರ ಕನ್ನಡ), ಮೊಹಮದ್ ಸಾದ್ಲಿಕ್ (ಹಾವೇರಿ).

18 ವರ್ಷದೊಳಗಿನ ಬಾಲಕಿಯರು: ಬ್ಯಾಡ್ಮಿಂಟನ್: ನತಾಶಾ ಮಾಲಸೇಕರ್ (ಉತ್ತರ ಕನ್ನಡ), ಅಶ್ರಿಯಾ ಸೂಫಿ ಬಾನು (ಬೆಂಗಳೂರು), ನಂದಿನಿ ಪಿ.ಬಿ. (ದಾವಣಗೆರೆ).



ಬಾಗಲಕೋಟೆಯಲ್ಲಿ ಭಾನುವಾರ ಮುಕ್ತಾಯಗೊಂಡ ಶ್ರವಣದೋಷವುಳ್ಳವರ ರಾಜ್ಯಮಟ್ಟದ 14ನೇ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡ ಮೈಸೂರು ಕ್ರೀಡಾಪಟುಗಳ ತಂಡ



ಕ್ರೀಡಾಂಗಣ ಪರಿಶೀಲಿಸಿದ ಅಂಪೈರ್ ಮತ್ತು ರೆಫರಿಗಳು –ಎಎಫ್‌ಪಿ ಚಿತ್ರ

ಟೆಸ್ಟ್: ಮಳೆ ಬರಲಿಲ್ಲ; ಆಟ ನಡೆಯಲಿಲ್ಲ!

ಪ್ರಜಾವಾಣಿ ವಾರ್ತೆ

ಕಾನ್ಪುರ: ಭಾನುವಾರ ಇಲ್ಲಿ ಒಂದು ಹನಿ ಮಳೆ ಕೂಡ ಬರಲಿಲ್ಲ. ಆದರೂ ಗ್ರೀನ್ ಪಾರ್ಕ್ ಕ್ರೀಡಾಂಗಣದಲ್ಲಿ ಭಾರತ ಮತ್ತು ಬಾಂಗ್ಲಾದೇಶ ನಡುವಣ ಟೆಸ್ಟ್ ಪಂದ್ಯದ ಮೂರನೇ ದಿನದಾಟ ನಡೆಯಲಿಲ್ಲ. ಇದು ಕ್ರೀಡಾಂಗಣದ ಅವ್ಯವಸ್ಥೆಗೆ ಹಿಡಿದ ಕೈಗನ್ನಡಿ.

ಪಂದ್ಯದ ಮೊದಲ ದಿನದಂದು 35 ಓವರ್‌ಗಳ ಆಟ ಮಾತ್ರ ನಡೆದಿತ್ತು. ಶನಿವಾರವೂ ಒಂದೂ ಎಸೆತ ಕಾಣದೇ ದಿನದಾಟ ರದ್ದಾಗಿತ್ತು.

ಈ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಉತ್ತರಪ್ರದೇಶ ಕ್ರಿಕೆಟ್ ಸಂಸ್ಥೆ ನಿರ್ದೇಶಕ ಸಂಜಯ್ ಕಪೂರ್, 'ಆ ದೇವರು ನಮಗೆ ಟೆಸ್ಟ್ ಪಂದ್ಯ ಮಂಜೂರು ಮಾಡಿದ್ದಾನೆ. ಅವನೇ ಉಳಿದದ್ದನ್ನು ನೋಡಿಕೊಳ್ಳುತ್ತಾನೆ' ಎಂದರು. ಆದರೆ ಇಲ್ಲಿ ಮಾನವಕೃತ ಲೋಪಗಳನ್ನು ಸರಿಪಡಿಸಬೇಕೆಂದರೆ ಪವಾಡವೇ ನಡೆಯಬೇಕೇನೊ?

ಭಾನುವಾರ ಬೆಳಿಗ್ಗೆ 6ರಿಂದ ಒಂದೂ ಹನಿ ಮಳೆ ಬರಲಿಲ್ಲ. ಆದರೆ ಪಿಚ್‌ಗಳು ತೇವವಾಗಿದ್ದವು. ಮೈದಾನದ ಕೆಲವು ಸ್ಥಳಗಳಲ್ಲಿ ನೀರು ನಿಂತಿತ್ತು. ಬೌಂಡರಿ ಲೈನ್ ಮತ್ತು ಬೌಲರ್‌ಗಳ ರನ್ ಅಪ್ ಕೂಡ ತೇವಗೊಂಡಿದ್ದವು. ಬೆಳಿಗ್ಗೆ 10, ಮಧ್ಯಾಹ್ನ 12 ಮತ್ತು 2 ಗಂಟೆಗೆ ಅಂಪೈರ್‌ಗಳು ಪಿಚ್ ಮತ್ತು ಹೊರಾಂಗಣ ಮೈದಾನ ಪರಿಶೀಲಿಸಿದರು. ಹೊರಾಂಗಣದಲ್ಲಿ ತೇವ ಹೆಚ್ಚಿರುವುದರಿಂದ ದಿನದಾಟ ರದ್ದು ಮಾಡಲಾಯಿತು. ಕ್ರೀಡಾಂಗಣ ಸಿಬ್ಬಂದಿಯ ಕಾರ್ಯವೈಖರಿಯೂ ಚುರುಕಾಗಿರಲಿಲ್ಲ. ಇದರಿಂದಾಗಿ ರಜೆ ದಿನ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಪ್ರೇಕ್ಷಕರು ನಿರಾಶೆಗೊಂಡರು.

ಆಫ್‌ರೋಡ್ ಮೋಟಾರ್ ಸ್ಪೋರ್ಟ್ಸ್

ಕ್ರಾಂತಿ ಚಾಂಪಿಯನ್

ಪ್ರಜಾವಾಣಿ ವಾರ್ತೆ



ಕ್ರಾಂತಿ ವೆಂಗಲ

ಹೊಸಪೇಟೆ (ವಿಜಯ ನಗರ): ಹೈದರಾಬಾದ್‌ನ ಕ್ರಾಂತಿ ವೆಂಗಲ ಮತ್ತು ಸಹ ಚಾಲಕ ಧನರಾಜ್ ರೆಡ್ಡಿ ಅವರು ವಿಜಯನಗರ ಮೋಟಾರ್ ಸ್ಪೋರ್ಟ್ಸ್ ಅಕಾಡೆಮಿ ವತಿಯಿಂದ ನಡೆದ 'ಉತ್ಸವ್ ದಿ ಹಂಪಿ' ಆಫ್‌ರೋಡ್ ರಾಷ್ಟ್ರೀಯ ಮೋಟಾರ್ ಸ್ಪೋರ್ಟ್ಸ್‌ನ ಪ್ರೊ ಮಾಡಿಫೈಡ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಎರಡು ದಿನ ನಡೆದ ಈ ಸಾಹಸ ಕ್ರೀಡೆಯ ಅಂತಿಮ ಸುತ್ತಿನ ಸ್ಪರ್ಧೆಗಳು ಭಾನುವಾರ ಸಂಜೆ ನಡೆದವು. ಕಡಿದಾದ ಬೆಟ್ಟ, ಕಣಿವೆಗಳಲ್ಲಿ ಸಾಹಸ ಪ್ರದರ್ಶಿಸುವ ಪ್ರೊ ಮಾಡಿಫೈಡ್ ವಿಭಾಗದಲ್ಲಿ ಕೊನೆಯದಾಗಿ ತಮ್ಮ ವಾಹನವನ್ನು ರಾಜಾಪುರ ಬೆಟ್ಟದ ಕಂದಕಕ್ಕೆ ಇಳಿಸಿ ಯಶಸ್ವಿಯಾಗಿ ಮೇಲೆ ತಂದ ಕ್ರಾಂತಿ ವೆಂಗಲ ಅವರು ಒಟ್ಟು 536 ಪಾಯಿಂಟ್‌ಗಳೊಂದಿಗೆ ಮೊದಲಿಗರಾಗಿ ಗೆಲುವಿನ ನಗೆ ಬೀರಿದರು. ಧನರಾಜ್ ರೆಡ್ಡಿ ಪೂರಕ ನೆರವು ನೀಡಿದರು.

'ನಾನು ಸತತ ನಾಲ್ಕನೇ ಬಾರಿ ಹೊಸಪೇಟೆಯಲ್ಲಿ ರಾಷ್ಟ್ರೀಯ ಆಫ್ ರೋಡ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದೇನೆ. ಇಲ್ಲಿನ ಆಫ್‌ರೋಡ್ ಟ್ರ್ಯಾಕ್‌ಗಳು ಸವಾಲಿನದ್ದಾಗಿದ್ದು, ಇಲ್ಲಿ ಯಶಸ್ವಿಯಾಗಿ ಸ್ಪರ್ಧೆ ಪೂರೈಸಿದ್ದಕ್ಕೆ ಖುಷಿ ಇದೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ನಗರದಲ್ಲಿ ಭಾನುವಾರ ರಾತ್ರಿ ಪ್ರಶಸ್ತಿ ಪ್ರದಾನ ನಡೆಯಿತು. ಮುಂದಿನ ದಿನಗಳಲ್ಲಿ ಇಲ್ಲಿ ರಾಷ್ಟ್ರೀಯ ರ್‍ಯಾಲಿ ಚಾಂಪಿಯನ್‌ಷಿಪ್ ಸಹಿತ ಐದರಿಂದ ಆರು ರಾಷ್ಟ್ರಮಟ್ಟದ ಮೋಟಾರ್ ಸ್ಪೋರ್ಟ್ಸ್ ಹಮ್ಮಿಕೊಳ್ಳುವ ಯೋಜನೆ ಇದೆ ಎಂದು ಸಂಘಟಕರಲ್ಲಿ ಒಬ್ಬರಾದ ಬೆಂಗಳೂರಿನ ರೋಹಿತ್ ಗೌಡ ತಿಳಿಸಿದರು. ಇತರ ಸಂಘಟಕರಾದ ಸಂತೋಷ್ ಎಚ್.ಎಂ., ದರ್ಪಣ್ ಗೌಡ ಇದ್ದರು.

ಇತರ ಫಲಿತಾಂಶ: ಮಹಿಳಾ ವಿಭಾಗ- ಮೀನಾ ಶ್ರೀಕಾಂತ್ ಮತ್ತು ಅಭಿನಂದಾ, ಮಂಗಳೂರು (585), ಮಾಡಿಫೈಡ್ ಪೆಟ್ರೋಲ್-ಪಂಟಾ ರೆಡ್ಡಿ ಮತ್ತು ಗೋವರ್ಧನ್ ರೆಡ್ಡಿ, ಹೈದರಾಬಾದ್ (410), ಮಾಡಿಫೈಡ್ ಡೀಸೆಲ್-ಸುಭಾಷ್ ಮತ್ತು ಅನಿರುದ್ಧ, ಮುಂಬೈ (505), ಸ್ಟಾಕ್ ಪೆಟ್ರೋಲ್- ಪ್ರತಾಪ್ ರಾಜೇಂದ್ರ ಕರಾಡಕರ್ ಮತ್ತು ಕಾಳಿದಾಸ್ ಡೋಂಗ್ರೆ, ಮಹಾರಾಷ್ಟ್ರ (548), ಸ್ಟಾಕ್ ಡೀಸೆಲ್- ಅಪ್ಪಣ್ಣ ಮತ್ತು ಶಮಂತ್, ಮಡಿಕೇರಿ (547), ಥಾರ್ 2020-ಆದರ್ಶ್ ಮತ್ತು ಚಂದ್ರಮೌಳಿ, ಬೆಂಗಳೂರು (565), ಜಿಮ್ಮಿ- ಸಾಬು ಮತ್ತು ರಾಜೀವ್ ಲಾಲ್, ಬೆಂಗಳೂರು (572).